ದೇನೆಂದರೆ, ತಾವು ಜನರಲ್ ಡಿಬೇಟ್ ಅನ್ನು ಪ್ರಾರಂಭ ಮಾಡಬಹುದು. ಜನರಲ್ ಡಿಬೇಟ್‌ನಲ್ಲಿ ನಿಮ್ಮ ಪಕ್ಷದ ನಾಯಕರು ಗಮನಿಸಿ ಇನ್ನೂ ಹೆಚ್ಚು ತಿದ್ದುಪಡಿಗಳನ್ನು ತರುವುದಕ್ಕೂ ಸಾಕು. ಜನರಲ್ ಡಿಬೇಟ್‌ಅನ್ನು ವಿರೋಧ ಪಕ್ಷದ ನಾಯಕರು ಈಗ ಶುರು ಮಾಡಬಹುದು.

1990 ನೇ ಕರ್ನಾಟಕ ಜಿಲ್ಲಾ ಪರಿಷತ್ ತಾಲ್ಲೂಕ್ ಪಂಚಾಯತ್, ಸಮಿತಿಗಳು ಮಂಡಳ ಪಂಚಾಯತ್, ನ್ಯಾಯ ಪಂಚಾಯತ್ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೆ, 1990 ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತ್, ನ್ಯಾಯ ಪಂಚಾಯತ್ ಹಾಗೂ ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಪರ್ಯಾಲೋಚನೆಗೆ ಮಂಡಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

Sri D. B. Chandregouda :– I beg to move an amendment for consideration.

ಶ್ರೀ ಬಿ. ಬಸವಲಿಂಗಪ್ಪ :– ಒಂದು ನಿಮಿಷ ಕುಳಿತುಕೊಳ್ಳುತ್ತೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಕುಳಿತರೆ ಕೇಸ್ ಕೆಟ್ಟು ಹೋಗುತ್ತದೆ.

Sri B. Basavalingappa :– I have moved it. I am not yielding. Please listen. I will not allow you I am standing. I am on my legs. ಕ್ರಿಯಾಲೋಪ ಏನಾದರೂ ಇದ್ದರೆ ಕುಳಿತು ಕೊಳ್ಳುತ್ತೇನೆ.

Sri D. B. Chandregowda :– When the Bill is moved for the consideration......

ಅಧ್ಯಕ್ಷರು :– ಕನ್ನಡದಲ್ಲಿ ಮಾತನಾಡಿ.

(ನಗು)

ಶ್ರೀ ಡಿ. ಬಿ. ಚಂದ್ರೇಗೌಡ :– ಮಸೂದೆ ಮಂಡನೆ ಆದಮೇಲೆ ಆ ಮಸೂದೆಗೆ ಮೂಲತಃ ತಿದ್ದುಪಡಿ ತರುವುದಕ್ಕೆ ನಮಗೆ ಇರತಕ್ಕ ಅವಕಾಶ ಮಸೂದೆ ಮಂಡನೆಯಾದ ಸಮಯದಲ್ಲಿ ಮಾತ್ರ. ಅದನ್ನೇ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್‌ನಲ್ಲಿ ಕೂಡ ಹೇಳಿದೆ.

ಅಧ್ಯಕ್ಷರು :– ಮಸೂದೆ ಮಂಡನೆಯಾದುದು ಇವತ್ತಲ್ಲ; ಬಹಳ ಹಿಂದೆಯೇ ಆಯಿತು. ಈಗ ಅವರು ಮಾಡುತ್ತಿರತಕ್ಕದ್ದು ಮಸೂದೆಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು.

ಶ್ರೀ ಡಿ. ಬಿ. ಚಂದ್ರೇಗೌಡ :– ಪರ್ಯಾಲೋಚನಾ ಸಮಯದಲ್ಲೇ ನಾವು ತಿದ್ದುಪಡಿಯನ್ನು ಮಂಡನೆ ಮಾಡಬೇಕು.

ಅಧ್ಯಕ್ಷರು :– ನೀವು ಪರ್ಯಾಲೋಚನಾ ವಿಧೇಯಕವನ್ನು ಮಂಡಿಸಿದ್ದೀರಿ. ಅದರ ಮೇಲೆ ಅವರು ತಿದ್ದುಪಡಿಗೆ ಸೂಚನೆ ಮಾಡುತ್ತಿದ್ದಾರೆ. ಅದೇನು ತಿದ್ದುಪಡಿ ಎಂದು ಕೇಳೋಣ.

ಶ್ರೀ ಡಿ. ಬಿ. ಚಂದ್ರೇಗೌಡ :– ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತ್, ನ್ಯಾಯ ಪಂಚಾಯತ್ ಮಸೂದೆಯನ್ನು ಮಾನ್ಯ ಪಂಚಾಯತ್ ರಾಜ್ಯ ಸಚಿವರು ಏನು ಪರ್ಯಾಲೋಚನೆಗಾಗಿ ಮಂಡಿಸಿದ್ದಾರೆ, ಅದಕ್ಕೆ ನಾನು ತಂದಿರುವ ತಿದ್ದುಪಡಿಯ ಬಗ್ಗೆ ಈ ಮೂಲಕ ಸಭೆಯ ಮತ್ತು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗು ನಡವಳಿಕೆಯ ನಿಯಮ 84 (2ಅ) ನಿಯಮದಡಿಯಲ್ಲಿ 1990 ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತ್ ನ್ಯಾಯ ಪಂಚಾಯತ ಮತ್ತಿತರ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು 15 ಜನ ವಿಧಾನಸಭೆಯ ಹಾಗೂ 6 ಜನ ವಿಧಾನ ಪರಿಷತ್ತಿನ ಅಂದರೆ ಒಟ್ಟು 21 ಜನ ಸದಸ್ಯರಿರುವ ಸದನದ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು ಹಾಗೂ ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆದಯಬೇಕೆಂದು ಮತ್ತು ಆ ಸಮಿತಿಯ ವರದಿಯನ್ನು 3 ತಿಂಗಳೊಳಗೆ ಸದನದ ಮುಂದೆ ಮಂಡಿಸಬೇಕೆಂದು ಕೋರುತ್ತೇನೆ. ಸೂಚನೆಯಲ್ಲಿ ಸಂಯುಕ್ತ ಪರಿಶೀಲನಾ ಸಮಿತಿಯ 15 ಜನ ಸದಸ್ಯರನ್ನು ನಾನು ಈ ರೀತಿ ಹೇಳಿದ್ದೇನೆ. ಇದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ಭಾವನೆ ಮಾಡಿದ್ದೇನೆ. ಒಂದು ವೇಳೆ ಒಪ್ಪದೇ ಇದ್ದರೆ ಮುಂದೆ ಬದಲಾವಣೆ ಮಾಡುವುದಕ್ಕೆ ಕೂಡ ಅವಕಾಶ ಅಧಿಕಾರ ಅವರಿಗೆ ಇದೆ. ಆದ್ದರಿಂದ ಈ ತಿದ್ದುಪಡಿಯನ್ನು ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕಾದರೆ 15 ಹೆಸರುಗಳು ಇರಬೇಕಾದುದು ನಿಯಮವಾದ್ದರಿಂದ 15 ಹೆಸರುಗಳನ್ನು ಇಲ್ಲಿ ಸೂಚನೆ ಮಾಡುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ ಅವರು, ಶ್ರೀ ಬಿ. ಎಸ್. ಯಡಿಯೂರಪ್ಪನವರು, ಶ್ರೀ ಸಿ. ಬೈರೇಗೌಡರು, ಶ್ರೀ ವಾಟಾಳ್ ನಾಗರಾಜ್ ಅವರು, ಪ್ರೊಫೆಸರ್ ನಂಜುಂಡಸ್ವಾಮಿ ಅವರು, ಶ್ರೀ ಬಿ. ಐ. ಪಾಟೀಲರು, ಶ್ರೀ ಎನ್. ಹುಚ್ಚಮಾಸ್ತಿಗೌಡರು, ಶ್ರೀಮತಿ ಮೋಟಮ್ಮನವರು, ಶ್ರೀಮತಿ ಚಂದ್ರಪ್ರಭ ಅರಸ್ ಅವರು, ಶ್ರೀ ಎಂ. ವೈ. ಘೋರ್ಪಡೆಯವರು., ಶ್ರೀ ಖಮರಲ್ ಇಸ್ಲಾಂ ಅವರು, ಶ್ರೀ ಬಿ. ಎಂ. ಇದಿನಬ್ಬ ಅವರು, ಶ್ರೀ ನಾರಾಯಣರಾವ್ ಮನವಳ್ಳಿ ಅವರು, ಶ್ರೀ ಶಿವಶಂಕರಪ್ಪ ಶಿರವಾಳ್‌ರವರು, ಶ್ರೀ ಮಲ್ಲಾರಿಗೌಡ ಪಾಟೀಲರು ಈ 15 ಜನ ಸಮಿತಿಯ ಸದಸ್ಯರನ್ನು ಒಳಗೊಂಡ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕು. ಈ ಒಂದು ನನ್ನ ತಿದ್ದುಪಡಿ ಮಂಜೂರಾದರೆ ವಿಧಾನ ಪರಿಷತ್ತಿನ 6 ಜನ ಸದಸ್ಯರನ್ನು ಸೇರಿಸಿ ಕೊಡತಕ್ಕ ಕೆಲಸವನ್ನು ಮಾಡಬಹುದು. ಆದ್ದರಿಂದ ಇದಕ್ಕೆ ತಾವು ಅನುಮತಿ ಕೊಡಬೇಕೆಂದು ಹೇಳುತ್ತೇನೆ. ತಿದ್ದುಪಡಿ ಬಗ್ಗೆ ಮಾತ್ರ ಈಗ ಹೇಳುತ್ತೇನೆ. ಕನ್‌ಸಿಡರೇಷನ್ ಆಗುವಾಗ ಅದರ ವಿವರ ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇವತ್ತು ನಮ್ಮ ಮುಂದೆ ಏನು ಒಂದು ಮುಸೂದೆಯನ್ನು ಏನು ಮಂಡನೆ ಮಾಡಿದ್ದಾರೆ ಅದಕ್ಕೆ ಒಂದು ತಿದ್ದುಪಡಿಯನ್ನು ನಾನು ಈ ಸದನದ ಮುಂದೆ ಇಡಲು ತಮ್ಮ ಅನುಮತಿಯನ್ನು ಕೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 82 (2) (ಎ) ನಿಯಮದ ಅಡಿಯಲ್ಲಿ 1990 ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು, ನ್ಯಾಯ ಪಂಚಾಯಿತಿಗಳು ಮತ್ತು ಇತರೆ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಭಿಪ್ರಾಯವನ್ನು ಪಡೆಯುವ ಸಲುವಾಗಿ ಸದಸ್ಯರಿಗೆ ಕಳುಹಿಸಬೇಕೆಂದು ಕೋರುತ್ತೇನೆ. ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯುವದಕ್ಕೋಸ್ಕರ ಮಾನ್ಯ ಸದಸ್ಯರಿಗೆ ಕಳುಹಿಸಬೇಕೆಂದು ಕೋರುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ :– ಮಾನ್ಯ ಅಧ್ಯಕ್ಷರೇ, ನಾನು ಮತ್ತೊಂದು ತಿದ್ದುಪಡಿಯನ್ನು ಈಗಾಗಲೇ ಸೂಚಿಸಿದ್ದೇನೆ. ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು ಮತ್ತು ಮಂಡಲ ಪಂಚಾಯಿತಿಗಳು, ನ್ಯಾಯ ಪಂಚಾಯಿತಿಗಳು ಮತ್ತಿತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ 1990 ನ್ನು ಈಗಾಗಲೇ ಪರ್ಯಾಲೋಚಿಸಬೇಕೆಂದು ಮಾನ್ಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 84 (2) (ಎ) ಪ್ರಕಾರ ಈ ವಿಧೇಯಕವನ್ನು ಸದನದ ಪರಿಶೀಲನಾ ಸಮಿತಿಗೆ ಸಾರ್ವಜನಿಕ ಅಭಿಪ್ರಾಯವನ್ನು ಪಡೆಯುವ ಸಲುವಾಗಿ ಕಳುಹಿಸಬೇಕೆಂಬ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ಮತ್ತು ಅದಕ್ಕಾಗಿ 10 ಜನ ಸದಸ್ಯರಿರುವ ಒಂದು ಸೂಚನೆ ಸಹ ಮಾಡಿದ್ದೇನೆ. ಇದರ ಮಂಡನೆಗೆ ಅವಕಾಶ ಮಾಡಿಕೊಡಬೇಕೆಂಬ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು :– ಹಾಗಾದರೆ ಈ ಮೂರು ತಿದ್ದುಪಡಿಗಳಲ್ಲಿ ಮಾನ್ಯ ಮಂತ್ರಿಗಳು ಯಾವುದಾದರೂ ಒಪ್ಪಿಕೊಳ್ಳುತ್ತೀರಾ ?

(ಗೊಂದಲ)

ಅಧ್ಯಕ್ಷರು :– ಕೋಳಿವಾಡ್ ಅವರು ಪೈಲಟ್ ಮಾಡುತ್ತಿದ್ದಾರೆ. ಅವರೇ ಈಗ ವಿಮಾನ ನಡೆಸುತ್ತಿದ್ದಾರೆ.

Sri B. Basavalingappa :– Rule 81 says :

"As soon as may be after a Bill has been introduced, the Bill, unless it has already been published, shall be published in the Gazette".

"Motions after introduction : (83) When a bill is introduced or on subsequent occasion, the member-in-charge may make one of the following motions in regard to his Bill, namely:

i) that it be taken into consideration; or

ii) that it be referred to a Select Committee of the House; or

iii) that it be referred to a Joint Committee of the Houses........."

Rule 84 (1) says :

On a motion referred to in rule 81 being made, the principle of the Bill and its provisions may be discussed generally, but the details of the Bill shall not be discussed further than is necessary to explain its principles".

My friend Hon'ble Leader of Opposition goes on moving an amendment.

ಅಧ್ಯಕ್ಷರು :– ನಿಯಮ 84 (2) 'ಎ' ಈ ರೀತಿ ಹೇಳುತ್ತದೆ.

"ವಿಧೇಯಕವನ್ನು ಮಂಡಿಸುವ ಸದಸ್ಯನು ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರಸ್ತಾಪ ಮಾಡಿದರೆ ಯಾವನೇ ಸದಸ್ಯನು ವಿಧೇಯಕವನ್ನು ಸದನದ ಪರಿಶೀಲನಾ ಸಮಿತಿಗೆ ಅಥವಾ ಪರಿಷತ್ತಿನ ಸಮ್ಮತಿ ಪಡೆದು ಸದನಗಳ ಸಂಯುಕ್ತ ಸಮಿತಿಗೆ ಉಲ್ಲೇಖಿಸಬೇಕೆಂದು ಅಥವಾ ಪ್ರಸ್ತಾವದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ದಿನಾಂಕದೊಳಗೆ ಅದರ ಮೇಲೆ ಅಭಿಪ್ರಾಯಗಳನ್ನು ಪಡೆಯುವ ಸಲುವಾಗಿ ಸದಸ್ಯರಿಗೆ ಕಳುಹಿಸತಕ್ಕದ್ದೆಂದು ತಿದ್ದುಪಡಿಯನ್ನು ಮಂಡಿಸಬಹುದು"

ಈಗ ನಾವು ಯಾವ ಘಟ್ಟದಲ್ಲಿ ಇದ್ದೇವೆ ? ಪರ್ಯಾಲೋಚನಾ ಘಟ್ಟದಲ್ಲಿದ್ದೇವೆ. ಪರ್ಯಾಲೋಚನಾ ಘಟ್ಟಕ್ಕೆ ತಲುಪಿದಾಗ ಯಾವುದೇ ಸದಸ್ಯ ಈ ತಿದ್ದುಪಡಿಯನ್ನು ಸದನದ ಮುಂದೆ ತರತಕ್ಕದ್ದು.

Sri B. Basavalingappa :– At this stage, no amendment is moved. I must make some remarks on the main bill.

ಅಧ್ಯಕ್ಷರು :– ಹೇಳಿ

Sri B. Basavalingappa :– After that stage is reached, then we can think of moving amendments. Every Member of this House has a right to move an amendment.

ಅಧ್ಯಕ್ಷರು :– ಹೌದು.

Sri B. Basavalingappa :– As we have done every Hon. Member is entitled to do it I do not know how at this stage, before I try to explain the Bill, my friend the Leader of Opposition goes on moving an amendment.

ಅಧ್ಯಕ್ಷರು :– ವಿಧೇಯಕವನ್ನು ಮಂಡಿಸುವ ಸದಸ್ಯನು ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳ ಬೇಕೆಂದು ಪ್ರಸ್ತಾಪ ಮಾಡಿದರೆ...ನೀವು ಪ್ರಸ್ತಾಪ ಮಾಡಿದ್ದೀ ?

ಶ್ರೀ ಬಿ. ಬಸವಲಿಂಗಪ್ಪ :– ಈಗ ಮಾಡುತ್ತಿದ್ದೇನೆ.

ಅಧ್ಯಕ್ಷರು :– ಹೌದು; ಮಾಡಿದ್ದೀರಲ್ಲಾ ಈಗ.

ಶ್ರೀ ಬಿ. ಬಸವಲಿಂಗಪ್ಪ :– ನಾನು ಇಂಟ್ರಡ್ಯೂಸ್ ಮಾಡಿದ್ದೇನೆ. I must explain the Bill. Before the matter is known to the Hon. House how, does the Leader of Opposition comes forward with an amendment ? Where is the question of amendment ? I must tell the House. ನಾನು ಸಭೆಗೆ ಇದು ಏನು ಬಿಲ್ ಇದೆ ಎಂದು ತಿಳಿಸಬೇಕು. ನಾನು ತಿಳಿಸಿದ ಮೇಲೆ ಅವರಿಗೆ ಮನವರಿಕೆಯಾದ ಮೇಲೆ ಆ ರೀತಿಯಾದ ತಿದ್ದುಪಡಿ ಸೂಚಿಸುವುದಕ್ಕೆ ಅವಕಾಶ ಉಂಟು. ಈ ಸ್ಟೇಜ್‌ನಲ್ಲಿ ನಾನು ಇನ್ನೂ ಮಾತನಾಡಿಲ್ಲ.

ಅಧ್ಯಕ್ಷರು :– ಈಗ ಇಂಗ್ಲೀಷ್ ಪ್ರತಿ ಓದೋಣ. ಇದರಲ್ಲಿ ಈ ರೀತಿ ಇದೆ :

"84 (2) (a) if the member-in-charge......"

You are the Member in charge. Am I right ?

Sri B. Basavalingappa :– Yes.

Mr. Speaker :– "...moves that the Bill be taken into consideration......" You should move the Bill for consideration Am I right ?

Sri B. Basavalingappa : Yes.

Mr. Speaker : "...that the Bill be referred to a Select Committee of the House or... " That is what he is doing. That is where the Leader of Opposition comes to the picture

Sri K. H. Ranganath : That can be moved by the mover of the Bill or any member.

Mr. Speaker : We are at this stage.

ಶ್ರೀ ಬಿ. ಎಸ್. ಯಡಿಯೂರಪ್ಪ :– ಅವರು ಏನು ಈಗ ಮಂಡನೆ ಮಾಡಿದ್ದಾರೆ, ಅವರ ಬಗ್ಗೆ ವಿವರಣೆ ಕೊಡುವ ಅಗತ್ಯ ಇಲ್ಲ. ನಮಗೆ ಅರ್ಥವಾಗಿದೆ ಎಂದು ನಾವು ಹೇಳುತ್ತಿದ್ದೇವಲ್ಲಾ ?

ಅಧ್ಯಕ್ಷರು :– ಯಡಿಯೂರಪ್ಪನವರೇ, ನಮಗೆ ಕನ್ನಡದ ಪ್ರತಿ ಬರಲಿಲ್ಲವಾದ್ದರಿಂದ ನಮಗೆ ಅರ್ಥವಾಗಲಿಲ್ಲ ಎಂದು ಒಂದು ಸಾರಿ ಹೇಳುತ್ತೀರಿ; ಈಗ ಎಲ್ಲಾ ನಮಗೆ ಅರ್ಥವಾಗಿದೆ; ಅವರು ಏನೂ ಹೇಳಬೇಕಾಗಿಲ್ಲ ಎಂದು ಹೇಳುತ್ತಿದ್ದೀರಿ. ಇದು ಏನು ನ್ಯಾಯ ?

ಶ್ರೀ ಬಿ. ಎಸ್. ಯಡಿಯೂರಪ್ಪ :– ಅಲ್ಲಲ್ಲ. ಸನ್ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ. ಈಗಾಗಲೇ ಏನು ತಿದ್ದುಪಡಿ ಬಿಲ್ ಮೂವ್ ಮಾಡಿದ್ದಾರೆ, ಅದಕ್ಕೆ ನಿಯಮ 84ರ ಪ್ರಕಾರ ತಿದ್ದುಪಡಿಗಳನ್ನು ಮೂವ್ ಮಾಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್ :– ಮಾನ್ಯ ಮಂತ್ರಿಗಳು ಸಭೆಯ ಪರ್ಯಾಲೋಚನೆಗಾಗಿ ಅದನು ಇಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ ಏಕಾಂತಯ್ಯನವರು ಹಾಗೂ ಉಪನಾಯಕರು ಬೇರೆ ತಿದ್ದುಪಡಿಗಳನ್ನು ಮಂಡಿಸಿದ್ದಾರೆ. ಈ ಪರ್ಯಾಲೋಚನೆ ನಡೆದ ಮೇಲೆ ಈ ಸಭೆಯಲ್ಲಿ ಚರ್ಚೆ ಮಾಡಬಹುದು. ನಂತರ ಇದನ್ನು ಮತಕ್ಕೆ ಹಾಕುವಾಗ ಇದನ್ನೆಲ್ಲಾ ಪರಿಗಣನೆಗೆ ತೆಗೆದುಕೊಳ್ಳಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ :– ಈ ಒಂದು ಸಂದರ್ಭವನ್ನು ಬಿಟ್ಟರೆ ನನಗೆ ಇರತಕ್ಕಂತಹ ಈ ಹಕ್ಕು ಮತ್ತೆ ಸಿಗುವುದಿಲ್ಲ: ಕ್ಲಾಸ್ ಬೈ ಕ್ಲಾಸ್ ಕನ್ಸಿಡರೇಷನ್‌ಗೆ ಬಂದಾಗ......

ಅಧ್ಯಕ್ಷರು :– ಹಾಗಾಗಲು; ಎಷ್ಟೋ ವಿಧೇಯಕಗಳು 3 ದಿವಸ ಚರ್ಚೆ ನಡೆದು ಅನಂತರ ಸಲಹಾ ಸಮಿತಿಗೆ ಹೋಗಿರತಕ್ಕಂತಹ ನೂರಾರು ಉದಾಹರಣೆಗಳು ನಮ್ಮ ಶಾಸಕಾಂಗದ ಇತಿಹಾಸದಲ್ಲಿ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ ;:– ಅಲ್ಲಿ ಡಿಸ್ಟಿಂಕ್ಷನ್ ಇದೆ. ಏನೆಂದರೆ, If the mover of the Bill moves that the Bill be referred to the Joint select Committee then there cannot be any amendments. ಇಲ್ಲಿ ಪ್ರೈವೇಟ್ ಮೆಂಬರ್ ಮೂವ್ ಮಾಡುವಾಗ ಇದೇ ಜಾಗ......

ಅಧ್ಯಕ್ಷರು :– ಮಾನ್ಯ ರಂಗನಾಥ್‌ರವರು ಹೇಳುತ್ತಿರುವುದು ಕೂಡ ಅದೇ ಆಗಿದೆ. ತಾವು ಮೂವ್ ಮಾಡುತ್ತಿರುವುದು ಸರಿ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ನಿರ್ಧಾರವನ್ನು ಯಾವಾಗ ಬೇಕಾದರೂ ತೆಗೆದುಕೊಳ್ಳಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ :– ನನಗೆ ಇರುವುದು ಇದೊಂದೇ ಅವಕಾಶ. ನಾನು ಪುನಃ ತಮ್ಮ ಗಮನಕ್ಕೆ ತರುತ್ತಿದ್ದೇನೆ. At this stage, even the amendments to be moved after the introduction of the Bill ಯಾವಾಗ ಮಾಡಬೇಕೆಂಬುದನ್ನೂ ಕೂಡ ಇಲ್ಲಿ ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ :– ಎಲ್ಲಾ ಸದಸ್ಯರಿಗೂ ತಿದ್ದುಪಡಿಗಳನ್ನು ತರಲು ಇಲ್ಲಿ ಹಕ್ಕುಇದೆ. ಅದಂರತೆ ಕೊಡಲಿ. ಆ ಅಮೆಂಡ್‌ಮೆಂಟ್‌ನ್ನು ಎಲ್ಲರಿಗೂ ಸರ್ಕ್ಯುಲೇಟ್ ಮಾಡಲಿ. ಆ ಅಮೆಂಡ್‌ಮೆಂಟ್ ಏನು ಎಂಬುದನ್ನು ನನಗೆ ಬರೆದು ಕೊಡಲಿ. ಏಕೆಂದರೆ ಎಲ್ಲಾ ಸದಸ್ಯರೂ ಕೂಡ ಇದನ್ನು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ :– ಮಾನ್ಯ ಹಿರಿಯ ಸದಸ್ಯರಾದಂತಹ ರಂಗನಾಥ್‌ರವರು ಏನು ಹೇಳಿದ್ದಾರೆ ಅದು ಸರಿ. ಆದರೆ ಅವರ ಜೊತೆಯಲ್ಲಿ ಮತ್ತೊಂದು ಅಂಶವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ನಾವು ಈಗ ಏನು ತಿದ್ದುಪಡಿ ಕಳಿಸಿದ್ದೇವೆ ಆ ತಿದ್ದುಪಡಿಯಮೇಲೆ ಚರ್ಚೆಯೇ ಇಲ್ಲದೆ, ಈ ಸಭೆ ಸದನದ ಪರಿಶೀಲನಾ ಸಮಿತಿಗೆ ಅಥವಾ ಜಂಟಿ ಪರಿಶೀಲನಾ ಸಮಿತಿಗೆ ಕಳಿಸಲಿಕ್ಕೆ ಅಧಿಕಾರ ಇದೆ. 1983 ನೇ ಇಸವಿಯಲ್ಲಿ......

Sri K. H. Ranganath :– Motion under Rule–85.

Sri H. Ekanthaiah :– It is called motion moved by minister in-charge. When it is sent by a member it is an amendment to the motion.

ಅಮೆಂಡ್‌ಮೆಂಟ್ ಎಂದು ಹೇಳಿದ್ದಾರಾ ಅಥವಾ ಮೋಷನ್ ಎಂದು ಹೇಳಿದ್ದಾರಾ ಎಂದು ತಾವು ದಯಮಾಡಿ ಓದಿ ನೋಡಿ ಅದು ಏನೇ ಇರಲಿ ಹಿಂದೆ ತಾವು ಹೇಳಿದಂತಹ.........

ಅಧ್ಯಕ್ಷರು :– "May move as an amendment' ಎಂದು ಇದೆ

ಶ್ರೀ ಹೆಚ್. ಏಕಾಂತಯ್ಯ :– ಅದರ ಜೊತೆಯಲ್ಲಿ ಅನೇಕ ಸಂದರ್ಭಗಳಲ್ಲಿ ನಾವು ವಿಧೇಯಕದ ಬಗ್ಗೆ ಚರ್ಚೆ ಮಾಡಿದ ಮೇಲೆ ಸಹ ಪರಿಶೀಲನಾ ಸಮಿತಿಗೆ ಕಳಿಸಿದಂತಹ ಉದಾಹರಣೆಗಳು ಇದೆ ಎಂದು ತಾವು ಹೇಳಿದಿರಿ: ಹಿರಿಯ ಸದಸ್ಯರು ಸಹ ಹೇಳಿದರು. ಹಾಗೂ ಈ ಸದನದಲ್ಲಿ ಯಾವುದೇ ಚರ್ಚೆ ಮಾಡದೇ ಸದನದ ಪರಿಶೀಲನಾ ಸಮಿತಿಗೆ ಕಳಿಸಿದಂತಹ ಉದಾಹರಣೆಗಳೂ ಕೂಡ ಇಲ್ಲಿ ಇದೆ. ಉದಾಹರಣೆಗೆ ಹೇಳುವುದಾದರೆ ಹಿಂದೆ ಜಿಲ್ಲಾ ಪರಿಷತ್ ಕಾಯಿದೆ ಏನು ಇತ್ತು, ಆ ಕಾಯಿದೆಯು ಸಹ ಇಲ್ಲಿ 11ನೇ ತಾರೀಖು ಆಗಸ್ಟ್ 83 ರಲ್ಲಿ ಇಲ್ಲಿ ಮಂಡನೆಯಾಯಿತು. 12 ನೇ ತಾರೀಖು ಯಾವುದೇ ಚರ್ಚೆ ಇಲ್ಲದೆ ಜಂಟಿ ಪರಿಶೀಲನಾ

ಸಮಿತಿಗೆ ಅದನ್ನು ಕಳಿಸಲ್ಪಟ್ಟಿತು. ಆದ್ದರಿಂದ ಅದೇನೂ ಹೊರತಲ್ಲ. ಆದ್ದರಿಂದ ಚರ್ಚೆ ಇಲ್ಲದೇ ಇದನ್ನು ಸದನದ ಪರಿಶೀಲನಾ ಸಮಿತಿಗೆ ಕಳಿಸಬೇಕೆಂದು ನಾನು ನಿಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಇದರಲ್ಲಿ ಅನೇಕ ಗಂಭೀರವಾದ ವಿಚಾರಗಳು ಇರುವುದರಿಂದ ಚರ್ಚೆ ಇಲ್ಲದೆ ಸಮಿತಿಗೆ ಕಳಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮೊನ್ನೆ ಹೆಣ್ಣು ಮಕ್ಕಳಿಗೆ ಆಸ್ತಿ ಹಕ್ಕನ್ನು ಕೊಡುವ ಒಂದು ಬಿಲ್ಲನ್ನು ಇಂಟ್ರಡ್ಯೂಸ್ ಮಾಡುವಂತಹ ಕಾಲದಲ್ಲಿ ಅದನ್ನು ಸದನದ ಸಮಿತಿಗೆ ಒಪ್ಪಿಸಿದ್ದೇವೆ. ಹೀಗೆ ಅನೇಕ ಉದಾಹರಣೆಗಳು ಇವೆ. ಆದ್ದರಿಂದ ಈ ರೀತಿಯ ತಿದ್ದುಪಡಿಯನ್ನು ಇಲ್ಲಿ ತಂದಿರುವಂತಹ ಸಂದರ್ಭದಲ್ಲಿ ಇವರ ಬಗ್ಗೆ ಚರ್ಚೆಯಾಗುವುದು ಅಗತ್ಯ ಇಲ್ಲ. ಇದನ್ನು ಜಂಟಿ ಸಲಹೆ ಸಮಿತಿಗೆ ಕಳಿಸಬೇಕೆಂದು ಮಾನ್ಯ ವಿರೋಧಿ ಪಕ್ಷದ ನಾಯಕರು ಏನು ತಿದ್ದುಪಡಿ ತಂದಿದ್ದಾರೆ, ಅದರ ಉದ್ದೇಶದ ಬಗ್ಗೆ ಎಕ್ಸ್‌ಪ್ಲೈನ್ ಮಾಡಲು ಅವಕಾಶ ಮಾಡಿಕೊಡಿ. ತಮ್ಮನ್ನು ಕನ್‌ವಿನ್ಸ್ ಮಾಡುತ್ತೇವೆ. ಏತಕ್ಕೋಸ್ಕರ ಇದನ್ನು ಆ ಸಮಿತಿಗೆ ಕಳಿಸಿ ಕೊಡಬೇಕು ಎಂಬುದನ್ನು ಹೇಳಲು ತಮ್ಮನ್ನು ಕನ್‌ವಿನ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ಈ ಒಂದು ಹಂತದಲ್ಲಿ ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ, ನನಗೆ ಮಾತನಾಡಲಿಕ್ಕೆ ಬಿಡಿ. ಈಗ ಏನು ಬಿಲ್ಲನ್ನು ತಂದಿದ್ದೇವೆ, ಅದರ ಬಗ್ಗೆ ವಿಶ್ಲೇಷಣೆ ಕೊಡುತ್ತೇನೆ. ನಂತರ ಮಾನ್ಯ ಸದಸ್ಯರು ಅದರಲ್ಲಿ ಭಾಗವಹಿಸಲಿ ನಂತರ ಒಂದು ನಿರ್ಣಯಕ್ಕೆ ಬರುತ್ತೇವೆ ಅವರು ಏನಾದರೂ ತಿದ್ದುಪಡಿ ತರುವುದಾದರೆ, ತಿದ್ದುಪಡಿ ತರುವುದಕ್ಕೆ ಅವಕಾಶವುಂಟು. ಅದರಂತೆ ತಿದ್ದುಪಡಿ ತರಲಿ, ಅದರ ಮೇಲೆ ಈ ಸಭೆ ತೀರ್ಮಾನ ತೆಗೆದುಕೊಳ್ಳಬೇಕು. ನಂತರ ಸಭೆ ಅದನ್ನು ಒಪ್ಪಿದರೆ ಅದು ಆಗಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ : ನಡುಗೆ ಬೇರೆ ಅವಕಾಶವಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ಬೇರೆ ಅವಕಾಶವಿಲ್ಲ. ಸದನದ ಅಭಿಪ್ರಾಯವನ್ನು ತಾವು ತೆಗೆದುಕೊಳ್ಳಿ ಅದಕ್ಕೆ ಏನಾದರೂ ಅವಕಾಶವಿದ್ದರೆ ತಾವು ಅವರಿಗೆ ಅವಕಾಶ ಮಾಡಿಕೊಡಿ.

Mr. Speaker :– Shakdher and Kaul – "An amendment for reference of a Bill to a Select or Joint Select Committee, or for its circulation has to be moved immediately after the motion for consideration of the Bill is moved". "Immediately after the bill for consideration is moved", we are at this stage now. You have moved for consideration and immediately he has moved that the Bill be referred to a Committee. There is another motion that the Bill be circulated for eliciting public opinion.

Sri K. H. Ranganath :– Therefore, now the Minister must be permitted to explain the features of the Bill and discussion should take place and the Hon'ble Speaker may put all the motions together for vote. Then whether it should be taken up or not is a different thing. Therefore, at this point of time let us.........

Sri R. V. Deshapande :– Without discussion ?

ಅಧ್ಯಕ್ಷರು :– ಮಾಜಿ ಸ್ಪೀಕರ್‌ರವರು ಮಾತುಗಳಿಗೆ ನಾವು ಮಾನ್ಯತೆ ಕೊಡಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್ :– ಈಗ ತಾವು ಅಪ್ಪಣೆ ಕೊಟ್ಟಹಾಗೆ ಆ ಘಟ್ಟದಲ್ಲಿ ನಾವಿದ್ದೇವೆ. ಮಾನ್ಯ ಮಂತ್ರಿಗಳು ಪರಿಶೀಲನೆಗೆ ಮಂಡನೆ ಮಾಡಿದ ಕೂಡಲೇ ವಿರೋಧ ಪಕ್ಷದ ನಾಯಕರು ಉಪನಾಯಕರು ಹಾಗೂ ಮಾನ್ಯ ಸದಸ್ಯರು ಒಂದು ಮೋಷನ್ ಅನ್ನು ತಮ್ಮ ಮುಂದಿಟ್ಟಿದ್ದಾರೆ. ಅದು ತಮ್ಮ ಪರಿಶೀಲನೆಯಲ್ಲಿದೆ. ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬಿಲ್ ಬಗ್ಗೆ ಅವರು ಕೆಲವು ಮಾತುಗಳನ್ನು ಹೇಳುವುದಕ್ಕೆ ಅವರಿಗೆ ತಾವು ಅವಕಾಶ ಮಾಡಿಕೊಡಬಹುದು ಅಥವಾ ನೇರವಾಗಿ ಈ ಸಭೆ ಬಿಲ್ಲನ್ನು ಚರ್ಚೆಗೆ ತೆಗೆದುಕೊಳ್ಳಬಹುದು. ಮತೆ ಕೊನೆಯಲ್ಲಿ ತಾವು ಓಟಿಗೆ ಹಾಕುವುದಕ್ಕೆ ಬರುತ್ತದೆ. ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸ ಬೇಕೋ ಪಬ್ಲಿಕ್ ಒಪಿನಿಯನಗೆ ಕಳುಹಿಸಬೇಕೋ ಸೆಲೆಕ್ಟ ಕಮಿಟಿ ಆಫ್ ಹೌಸ್‌ಗೆ ಕಳುಹಿಸಬೇಕೋ ಅದನ್ನು ತಾವು ತೀರ್ಮಾನ ಮಾಡಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ :– ತಾವು ಹೇಳತಕ್ಕದ್ದನ್ನು ನಾನು ಒಪ್ಪುತ್ತೇನೆ. ಆದರೆ ನಾವು ಕಳುಹಿಸಿರತಕ್ಕ ತಿದ್ದುಪಡಿಗಳು ಏನಿವೆ, ಅವುಗಳ ಬಗ್ಗೆ ಹೇಳುವುದಕ್ಕೆ ಅವಕಾಶ ಬೇಕೋ ಬೇಡವೋ ? ನಾನು ಅಷ್ಟನ್ನು ಕೇಳುತ್ತಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ ರಂಗನಾಥ್‌ರವರು ಹೇಳಿದ್ದನ್ನು ನಾನು ಪರಿಪೂರ್ಣವಾಗಿ ಒಪ್ಪುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ :– ಬಿಲ್ ಇಂಟ್ರಡಕ್ಷನ್ ಆದಮೇಲೆ ಕನ್ಸೀಡರೇಷನ್ ಸ್ಟೇಜ್‌ನಲ್ಲಿ ನಾವಿದ್ದೇವೆ. ಸ್ಯಲೆಂಟ್ ಫ್ಯುಚರ್ಸ್‌ನ್ನು ಮಂತ್ರಿಗಳು ಈಗ ಹೇಳಬೇಕಾಗುತ್ತದೆ. ಅದರ ನಂತರ ತಾವು ಮಾತನಾಡಬಹುದು. ನಾವು ಬೇಡವೆಂದು ಹೇಳುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :– ಅದನ್ನೇ ನಾನು ಒಪ್ಪುತ್ತೇನೆ. ತಾವು ಏನು ಹೇಳಿದಿರಿ, ಮಂತ್ರಿಗಳು ಹೇಳಲಿ, ಚರ್ಚೆ ಮಾಡಲಿ ಆಮೇಲೆ ಎಲ್ಲವನ್ನು ಒಟ್ಟಿಗೆ ಓಟಿಗೆ ಹಾಕಬಹುದು ಎಂದು; ಆದರೆ ನಾನು ಮಾತ-ನಾಡತಕ್ಕ ಹಕ್ಕನ್ನು ಕಿತ್ತುಕೊಳ್ಳಬೇಡಿ; ಅಷ್ಟೇ ನಾನು ಕೇಳುವುದು.

Sri B. Basavalingappa :– According to Kaul and Shakdher – Page 478 :

"An amendment for reference of a Bill to a Select or Joint Committee, or for its circulation has to be moved immediately after the motion for consideration of the Bill is moved. After the motion for consideration of a Bill and certain clauses there of have been adopted by the House, an amendment for referring the Bill to a Select Committee is out of order".

ಆ ಸ್ಟೇಜ್ ಬೇರೆ ಇದೆ. ಈ ಹಂತದಲ್ಲಿ ನಾನು ಕೇಳಿಕೊಳ್ಳುತ್ತೇನೆ, ನನಗೆ ಮಾತನಾಡುವುದಕ್ಕೆ ತಾವು ಬಿಡಬೇಕು. ನಂತರ ಅವರು ಏನು ತಿದ್ದುಪಡಿ ಕೊಡುತ್ತಾರೋ ಅದನ್ನು ನೋಡಿಕೊಳ್ಳೋಣ. ಆ ಸ್ಟೇಜ್ ಬೇರೆ, ಈಗಿನ ಸ್ಟೇಜ್ ಬೇರೆ; ನಮ್ಮ ತಿದ್ದುಪಡಿಯನ್ನು ಯಾವ ರೀತಿ ತೆಗೆದುಕೊಳ್ಳುತ್ತೀರಿ ಅವರ ತಿದ್ದುಪಡಿಯನ್ನು ಅದೇ ರೀತಿಯಲ್ಲಿ ತೆಗೆದುಕೊಳ್ಳಬಹುದು. ನಮ್ಮದರ ಜೊತೆಯಲ್ಲಿಯೇ ಅದನ್ನು ತೆಗೆದುಕೊಳ್ಳ-ಬಹುದು. ಈ ಸದನ ನಿರ್ಣಯ ತೆಗೆದುಕೊಳ್ಳಬೇಕು. ಅದಕ್ಕೆ ಮುಂಚೆ ಯಾವ ವಿವಾದಕ್ಕೂ ಆಸ್ಪದವಿಲ್ಲವೆಂಧು ನಾನು ತಮಗೆ ಹೇಳುತ್ತೇನೆ. 4–30 ಪಿ. ಎಂ.

ಶ್ರೀ ಕೆ. ಹೆಚ್. ರಂಗನಾಥ್ :– ತಾವು ರೂಲ್ 85 ನ್ನು ಏನು ಪ್ರಸ್ತಾಪ ಮಾಡಿದ್ದೀರಿ; ಅದೇ ರೀತಿ ಈಗ ಕೌಲ್ ಅವರದ್ದನ್ನು ರೆಫರ್ ಮಾಡಿದಿರಿ. ಅದು ಕೂಡಲೇ ಮೂವ್ ಮಾಡುವುದಕ್ಕೆ ಬರುತ್ತದೆ. ಈಗ ಮಾಡಿಯಾಗಿದೆ. ಕನ್ಸಿಡರೇಶನ್‌ಗೆ ಮಂತ್ರಿಗಳು ಮೂವ್ ಮಾಡಿಯಾಗಿದೆ. ಈಗ salient features of the Bill he should explain to the House. We are at that stage only.

(ಗೊಂದಲ)

Sri D. B. Chandregowda :– Before the general discussion I must also be allowed That is the procedure.

Mr. Speaker :– You may explain.

ಶ್ರೀ ಬಿ. ಬಸವಲಿಂಗಪ್ಪ : ಈ ಒಂದು ಮಸೂದೆಯನ್ನು ತಂದಾಗಿನಿಂದ ಈ ಸಮಯದವರೆಗೆ ಇದನ್ನು ತಡೆಯಬೇಕು ಎನ್ನತಕ್ಕಂಥ ಪ್ರಯತ್ನ ನಡೆದಿದೆ. ಅದರಿಂದ ನಮಗೆ ಶಕ್ತಿ ಬಂದಿದೆ. ನಮ್ಮ ನಿಲುವು ಸ್ಥಿರವಾಗಿರತಕ್ಕಂಥಾದ್ದು ಮತ್ತು ಶಕ್ತಿಯುತವಾದುದು ಎಂದು ನನಗನ್ನಿಸುತ್ತದೆ. ಕಾರಣ, ಸತ್ಯವನ್ನು ಹೇಳಿದಾಗ ಕೆಲವರಿಗೆ ಸ್ವಲ್ಪ ಹಿಡಿಸುವುದಿಲ್ಲ. ಅದಕ್ಕಾಗಿ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಇಲ್ಲಿರತಕ್ಕಂಥ ತಿದ್ದುಪಡಿಯಲ್ಲಿ ಏನು ಸತ್ಯಾಂಶ ಇದೆ ಅದನ್ನು ಹೇಳಿದ ಮೇಲೆ ತಾವೆಲ್ಲ ನನ್ನ ಜೊತೆಗೆ ಬರುತ್ತೀರಿ ಎಂಬುದು ನನ್ನ ಕಳಕಳಿಯ ನಿರೀಕ್ಷೆ ಇದೆ. ಈ ತಿದ್ದುಪಡಿ ಬಗೆ ಸುಮಾರು ಚುನಾವಣೆ ಆದಮೇಲೆ ನಾನು ಈ ಇಲಾಖೆಯನ್ನು ತೆಗೆದುಕೊಂಡಮೇಲೆ ಈ ಒಂದು ತಿದ್ದುಪಡಿ ಬರುತ್ತದೆ ಎಂದು ಹೇಳಿಬಿಟ್ಟು ಹಲವಾರು ಲೇಖನಗಳು ಬಂದಿವೆ; ವಿರೋಧವಾಗಿಯೂ ಬರೆದಿದ್ದಾರೆ, ಪರವಾಗಿಯೂ ಬರೆದಿದ್ದಾರೆ. ಈ ದೇಶದ ಎಲ್ಲಾ ಕಡೆಯಿಂದಲೂ ಕೂಡ ಇಂತಹ ಒಂದು ಪ್ರಕಟಣೆ ಆಗಿದೆ. ಅದರಲ್ಲೂ ಇಲ್ಲಿ ಇರತಕ್ಕಂಥವರು ಕೂಡ ನಮ್ಮ ಜಿಲ್ಲಾ ಪರಿಷತ್ತುಗಳನ್ನು ನಡೆಸತಕ್ಕವರು ಇದರ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ, ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ. ನೀವು ಸರ್ಕಾರದವರು ಸರಿಯಾಗಿಲ್ಲವೆಂದು ಹೇಳಿದ್ದಾರೆ; ಸರಿ ಇದೆ ಅಂತಾನೂ ಹೇಳಿದ್ದಾರೆ. ಆದರೆ ಏನು ಕಂಟ್ರಾವರ್ಶಿಯಲ್ ಎಂದು ಹೇಳಿಬಿಟ್ಟು ಈ ಪ್ರೆಸ್‌ನವರು ಇಷ್ಟು ರಾಷ್ಟ್ರಾದ್ಯಂತ ಪ್ರಕಟಣೆ ಮಾಡಿದ್ದಾರೆ. ಕಂಟ್ರಾವರ್ಶಿಯಲ್ ಎಂದು ಹೇಳಿದರೆ ನನ್ನ ದೃಷ್ಟಿಯಲ್ಲಿ ಯಾವುದು ಸ್ಥಿರ ಎಂದು ಹೇಳಿಬಿಟ್ಟು ಸತ್ಯಾಂಶವನ್ನು ಯಾರು ನೂರಾರು ವರ್ಷಗಳಿಂದ ತಿಳಿದುಕೊಂಡಿದ್ದಾರೆ ಅದೇ ಸ್ಥಿರವಾಗಿರತಕ್ಕಂಥಾದ್ದು. ಅದರ ಮೇಲೆ ಯಾರ್‍ಯಾರು ಬದಲಾವಣೆ ಮಾಡಬಾರದು ಎನ್ನತಕ್ಕಂಥಾದ್ದು ಏನಿದೆ, ಅದು ಕಂಟ್ರಾವರ್ಶಿಯಾಗುತ್ತದೆ. ನಾವು ಏನಾದರೂ ಬದಲಾವಣೆ ಆಗಬೇಕು ಎಂದು ಹೇಳಿದಾಗ, ಬದಲಾವಣೆ ಆಗಲಿ ಎಂದು ಹೇಳಬಾರದು ಎನ್ನತಕ್ಕದ್ದು ಒಂದು ಕಾಂಟ್ರಾವರ್ಶಿಯಲ್......

ಶ್ರೀ ಬಿ. ಎಸ್. ಯಡಿಯೂರಪ್ಪ :– ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಇವತ್ತು ಪ್ರೆಸ್‌ನವರು ಇದನ್ನು ಏನೋ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಇಲ್ಲಿ ಸನ್ಮಾನ್ಯ ಮಂತ್ರಿಗಳಿಗೆ ಮಾತನಾಡುವುದಕ್ಕೆ ಅವಕಾಶ ಇದೆ. ಆದರೆ ಅವರ ಶಾಸಕಾಂಗ ಸಭೆಯಲ್ಲೇ ಚರ್ಚೆಯಾಗಿದೆ. ನಾವು ವಿರೋಧ ಮಾಡಿದ್ದೇವೆ. ಇದು ಕಾಂಟ್ರಾವರ್ಶಿಯಲ್ ಬಿಲ್ ಎಂದು ಪತ್ರಿಕೆಯಲ್ಲಿ ಬಂದಮೇಲೆ ಪತ್ರಿಕೆಯವರು ಬರೆದಿದ್ದಾರೆ. ಅವರಾಗಿಯೇ ಬರೆಯುವುದಕ್ಕೆ ಹೋಗಿಲ್ಲ. ಪತ್ರಿಕೆಯವರೇ ನೇರವಾಗಿ ಮುಂದೆಬಂದು ಕಾಂಟ್ರಾವರ್ಶಿಯಲ್ ಅಂತ ಬರೆದರು. ಎಂದು ಹೇಳಿ ಬೇರೆ ಅರ್ಥ ಕೊಡುವ ರೀತಿಯಲ್ಲಿ ಮಾತನಾಡುವಂಥಾದ್ದು ಬಹುಶಃ ಪತ್ರಿಕಾ ವ್ಯವಸ್ಥೆಗೆ ಧಕ್ಕೆ ತಂದಹಾಗೆ ಆಗುತ್ತದೆ. ಏಕೆಂದರೆ ನಿಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲೇ ಇದು ಚರ್ಚೆಯಾಗಿದೆ, ನಾವು ಸಹ ಚರ್ಚೆ ಮಾಡಿದ್ದೇವೆ. ಆದ್ದರಿಂದ ಇಂತಹ ಸಂದರ್ಭದಲ್ಲಿ ನೇರವಾಗಿ ಪತ್ರಿಕೆಯವರ ಮೇಲೆ ಆರೋಪ ಹೊರಿಸಿ ನಿಮ್ಮ ತಪ್ಪನ್ನು ಮುಚ್ಚಿಕೊಳ್ಳುವಂಥಾದ್ದು ಎಷ್ಟರಮಟ್ಟಿಗೆ ಸರಿಯಾದುದು ? ಅದಕ್ಕೋಸ್ಕರ ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈ ಮಾತನ್ನು ಉಪಯೋಗಿಸಿದ್ದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ :– ನಾನು ನೂರು ಸಲ ಹೇಳುತ್ತೇನೆ. ಇದನ್ನು ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ. Thomas Jafferson ಎನ್ನುವವನು ಒಂದು ಮಾತನ್ನು ಹೇಳಿದ್ದಾನೆ— "Whatever is truth for a generation cannot be held to be valid for all generations to come" ಈಗ ನಾನು ತಮಗೆ ಹೇಳುತ್ತಿದ್ದೇನೆ; ನಾವು ಏನು ಸ್ಥಿರತೆಯ ಆಧಾರದ ಮೇಲೆ ಸರಿ ಎಂದು ಈ ದೇಶದಲ್ಲಿ ವಾದ ಮಾಡುತ್ತಿದ್ದಾರೆ. ನಾವು ಈ ಜನರೇಶನ್‌ಗೆ ಏನು ಬೇಕು, ಈ ಪೀಳಿಗೆಗೆ ಏನು ಬೇಕು, ಅವರು ಏನು ಕನಸು ಕಂಡಿದ್ದಾರೆ, ಅದನ್ನು ಯಾವರೀತಿ ನನಸು ಮಾಡಬೇಕೆಂಬ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಅದರ ಬಗ್ಗೆ ನಾವು ಮನವೊಲಿಸಿ, ಅದನ್ನು ಜಾರಿಗೆ ಕೊಡತಕ್ಕದ್ದು ಬಹಳ ಅವಶ್ಯಕವಾಗಿದೆ ಮತ್ತು ಪ್ರಸ್ತುತವಾಗಿದೆ.

ಶ್ರೀ ಆರ್. ಎಲ್. ಜಾಲಪ್ಪ :– ನಾಲ್ಕು ವರ್ಷಕ್ಕೆ ಒಂದು ಜನರೇಷನ್ ಆಗುತ್ತದೆಯೇ ?

Sri B. Basavalingappa :– I am explaining what is controversy.

Sri R. L. Jalappa :– Giving an analogy is no argument. Let him come down to the argument.

ಶ್ರೀ ಬಿ. ಬಸವಲಿಂಗಪ್ಪ :– ಇಲ್ಲಿ ವಿರೋಧ ಪಕ್ಷದ ಮಾನ್ಯರು ಯಾರು ಜನತಾದಳದ ಸ್ನೇಹಿತರು ಇದ್ದಾರೆ, ಅವರು ನಾವು ತಿದ್ದುಪಡಿಯನ್ನು ತಂದಾಗ, ತಿದ್ದುಪಡಿಗಳ ವಿವರಗಳು ಪ್ರಕಟಣೆ ಆದಾಗ, ಅವರು...

ಶ್ರೀ ಸಿ. ಬೈರೇಗೌಡ :– ಒಂದು ನಿಮಿಷ......

ಶ್ರೀ ಬಿ. ಬಸವಲಿಂಗಪ್ಪ :– ನಾನು ನಿಂತುಕೊಂಡೇ ಇದ್ದೇನೆ.; ಎರಡು ಗಂಟೆಯಿಂದ ಮತ್ತೆ ಮತ್ತೆ ಒಂದು ನಿಮಿಷ, ಒಂದು ನಿಮಿಷ ಅಂದರೆ ಏನು ?

ಶ್ರೀ ಸಿ. ಬೈರೇಗೌಡ :– ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಕುಳಿತಿದ್ದಾರೆ. ನಾಳೆ ಸಾಯಂಕಾಲದೊಳಗೆಗಾಗಿ ಕನ್ನಡದ ಪ್ರತಿಯನ್ನು ಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟರೆ, ನಾವು ಅವರ ಮನವೊಲಿಸಿ, ಅವರ ಸ್ಥಳಕ್ಕೆ ಬಂದು ಕುಳಿತುಕೊಳ್ಳುವಂತೆ ಮಾಡಬಹುದು. ದಯಮಾಡಿ, ಸರ್ಕಾರ ದವರು ಒಂದು ಆಶ್ವಾಸನೆ ಕೊಡಲಿ......

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ :–ಅಧ್ಯಕ್ಷರೇ, ದಯಮಾಡಿ ಹೌಸ್ ಅಡ್ಜರ್ನ್ ಮಾಡಿ, ಅರ್ಧ ಗಂಟೆ ಕಳೆದ ನಂತರ ಅವರು ವಿವರಣೆ ಕೊಡಲಿ:

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ :– ವಾಟಾಳ್ ನಾಗರಾಜ್‌ರವರು ಕನ್ನಡದ ಅಭಿಮಾನಿಗಳು, ಅವರಿಗೆ ಒಂದು ಭರವಸೆ ಕೊಡಿ......

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್ :– ಕನ್ನಡದ ಅಭಿಮಾನಕ್ಕಾಗಿ, ಅವರಿಗೆ ಈ ರಾಜ್ಯದ ಜನತೆಯ ಬೆಂಬಲ ಇದೆ. ಅದಕ್ಕಾಗಿ, ಈ ಸದನದ ಬೆಂಬಲವನ್ನೂ ಅವರಿಗೆ ಕೊಡಬೇಕು. ದಯಮಾಡಿ ಅವರಿಗೆ ಭರವಸೆ ಕೊಡಿ

(ಗೊಂದಲ)

ಶ್ರೀ ಸಿ. ಬೈರೇಗೌಡ :– ವಾಟಾಳ್ ನಾಗರಾಜ್‌ರವರು ಅಲ್ಲಿ ಕುಳಿತುಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಕುಳಿತುಕೊಂಡಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಇದರ ಬಗ್ಗೆ ಮಾನ್ಯ ಮಂತ್ರಿಗಳು, ಒಂದು ತಾತ್ವಿಕ ವಿಚಾರ ಇಟ್ಟುಕೊಂಡು, ಯಾವಾಗ ಕನ್ನಡದ ಪ್ರತಿ ಕೊಡುತ್ತಾರೆಂದು ಆಶ್ವಾಸನೆ ಕೊಡಲಿ...

(ಗೊಂದಲ)

ಅಧ್ಯಕ್ಷರು :– ಮಾನ್ಯ ಯಡಿಯೂರಪ್ಪನವರೇ, ಈಗಾಗಲೇ ಈ ಮಾನ್ಯ ಸದನಕ್ಕೆ ತಿಳಿಸಿದ್ದೇವೆ ಕನ್ನಡ ಭಾಷಾಂತರದ ಪ್ರತಿ ಪ್ರಿಂಟ್ ಆಗುತ್ತಿದೆ ಎಂದು ನಾಳೆಯೊಳಗೆ ಅದು ಪ್ರಿಂಟ್ ಆಗಿ ಎಲ್ಲರ ಮೇಜಿನ ಮೇಲೂ ಇರುತ್ತದೆ. ಈ ಆಶ್ವಾಸನೆಯನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಆಸನಕ್ಕೆ ಮರಳಿ ಧಾವಿಸಿ, ಈ ಸದನವನ್ನು ಇನ್ನೂ ಹೆಚ್ಚು ಸುಂದರವನ್ನಾಗಿ ಮಾಡಲಿ ಎಂದು ಕೇಳಿಕೊಳ್ಳುತ್ತೇನೆ

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ವಾಟಾಳ್ ನಾಗರಾಜ್ ಅವರೇ, ಮಾನ್ಯ ಅಧ್ಯಕ್ಷರು ನಾಳೆ ಕನ್ನಡದ ಪ್ರತಿ ಕೊಡಿಸುತ್ತೇನೆಂದು ಹೇಳಿದ್ದಾರೆ. ಕಾರ್ಯಕಲಾಪದ ದೃಷ್ಟಿಯಿಂದ ತಾವು, ತಮ್ಮ ಸ್ಥಾನಕ್ಕೆ ಬನ್ನಿ. ಹೇಗೋ ಶನಿವಾರ, ಭಾನುವಾರ ಬರುತ್ತಿದೆ. ಪ್ರತಿ ಕೊಡುವುದಕ್ಕೆ ಅನುಕೂಲವಾಗುತ್ತದೆ

ಶ್ರೀ ಸಿ. ಬೈರೇಗೌಡ :– ಮಾನ್ಯ ಬಸವಲಿಂಗಪ್ಪನವರು, ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸತಕ್ಕ ಪರಿಸ್ಥಿತಿಗೆ ತರುತ್ತಾರೆ. ಇವತ್ತು ಮಧ್ಯಾಹ್ನ ತಾವು ಒಂದು ರೂಲಿಂಗ್ ಕೊಟ್ಟಿದ್ದೀರಿ. ಸದನದಲ್ಲಿ ಕೊಡತಕ್ಕ ಭರವಸೆಗಳು ಪ್ರಿವಿಲೇಜ್ ಆಗುವುದಿಲ್ಲವೆಂದು ತಾವು ರೂಲಿಂಗ್ ಕೊಟ್ಟಿದ್ದೀರಿ.

ಅಧ್ಯಕ್ಷರು :– ನಾನು ಕೊಡಲಿಲ್ಲ, ಓದಿದೆ......

ಶ್ರೀ ಸಿ. ಬೈರೇಗೌಡ :– ಮಾನ್ಯ ಬಸವಲಿಂಗಪ್ಪನವರ ಈ ಭರವಸೆಯೂ ಆ ರೀತಿ ಆಗುವುದು ಬೇಡ. ನಾಳೆ, ಇದರ ಬಗ್ಗೆ ಚರ್ಚೆಯಾಗುವುದಕ್ಕೆ ಮೊದಲು ಕನ್ನಡದಲ್ಲಿ ಇದರ ಪ್ರತಿಯನ್ನು ಕೊಡುತ್ತೇವೆ ಎನ್ನುವ ಖಚಿತ ಭರವಸೆ ಕೊಡಬೇಕು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಮಂತ್ರಿಗಳು ಒಂದು ಆಶ್ವಾಸನೆ ಕೊಡಲಿ... ನಾಳೆ ಕನ್ನಡದ ಪ್ರತಿಗಳನ್ನು ಕೊಡಿಸುತ್ತೇನೆ ಎನ್ನುವ ಆಶ್ವಾಸನೆ ಕೊಡಿ...

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ :– ಪ್ರಿಂಟ್ ಆಗುತ್ತಿದೆ, ನಾಳೆ ಕೊಡೋಣ...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :– ಆ ಕಡೆಯ ಸದಸ್ಯರು ಈ ರೀತಿ ಗಲಾಟೆ ಮಾಡಿ, ಮಾತನಾಡಿದರೆ ಹೇಗಾಗುತ್ತದೆ. ಕನ್ನಡದ ಪ್ರತಿ ಕೊಡಬೇಕಾಗುತ್ತದೆ. ತಾವು ನಮ್ಮ ರಕ್ಷಣೆಗೆ ಬಂದಿದ್ದೀರಿ. ಈ ರೀತಿಯಲ್ಲಿ ಪಗುರವಾಗಿ ಸದಸ್ಯರು ಮಾತನಾಡಬಾರದು...

(ಗೊಂದಲ)

ಆಡಳಿತ ಪಕ್ಷದ ಹಾಗೂ ವಿರೋಧ ಪಕ್ಷದ ಅನೇಕ ಸದಸ್ಯರುಗಳು ಒಟ್ಟಿಗೆ ಎದ್ದುನಿಂತು ಮಾತನಾಡುತ್ತಿದ್ದರು. ಯಾವುದೂ ಕೇಳಿಸುತ್ತಿರಲಿಲ್ಲ.

(ಗೊಂದಲ)

ಅಧ್ಯಕ್ಷರು :– ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :– ಶಿವರಾಮೇಗೌಡರು ನಾಟಕ ಆಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ, ನಾಟಕ ಆಡುವುದಕ್ಕೆ ಬೇರೆ ಸ್ಟೇಜ್ ಇದೆ, ಈ ರೀತಿ ಮಾತನಾಡುವುದು ಸರಿಯಲ್ಲ ಅವರು ಮಾತನಾ ನಾಡಿದ್ದನ್ನು ವಾಪಸ್ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು :– ನಾನು ಅವರನ್ನು ಮಾತನಾಡಿ ಎಂದು ಕರೆದಿದ್ದೇನೆಯೋ ? ಎಷ್ಟು ಸಾರಿ ಹೇಳಿದ್ದೇನೆ. ನಾನು ಯಾರನ್ನೂ ಕರೆಯುವುದಿಲ್ಲ ಅವರು ಏನು ಮಾತನಾಡಿದರೂ ಅದು ಯಾವುದೂ ನಮ್ಮ ಕಾರ್ಯ ಕಲಾಪಗಳ ವರದಿಗೆ ಹೋಗುವುದಿಲ್ಲ ಎಂದು ಎಷ್ಟುಸಾರಿ ಹೇಳಿದ್ದೇನೆ. ಅದನ್ನು ನೀವು ಮರೆತುಬಿಟ್ಟರೆ ಹೇಗೆ, ಆಗುತ್ತದೆ. ಅಂದವರೂ ಮರೆಯುತ್ತಾರೆ, ಆಕ್ಷೇಪಣೆ ತೆಗೆದುಕೊಳ್ಳುವವರೂ ಮರೆತುಬಿಡುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಸರ್ಕಾರದ ನಿಲುವು ಏನು ? ಕನ್ನಡದ ಪ್ರತಿ ಕೊಡುತ್ತಾರೋ ಇಲ್ಲವೋ ?

ಅಧ್ಯಕ್ಷರು :– ಹೇಳಿದ್ದಾರಲ್ಲಾ, ಕೊಡುತ್ತೇವೆ ಎಂದು.

ಶ್ರೀ ಡಿ. ಬಿ. ಚಂದ್ರೇಗೌಡ :– ಯಾವಾಗ ?

ಅಧ್ಯಕ್ಷರು :– ನಾಳೆ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ :– ನಾಳೆ ಸಾಯಂಕಾಲದೊಳಗೆ ಕೊಡುತ್ತೇವೆಂದು ಹೇಳಿದ್ದೇವಲ್ಲ.

ಅಧ್ಯಕ್ಷರು :– ನಾಳೆ ಸಾಯಂಕಾಲದೊಳಗೆ ಕನ್ನಡ ಪ್ರತಿಗಳನ್ನು ಕೊಡುತ್ತೇವೆಂದು ಹೇಳಿದ ಮೇಲೂ ಕೂಡಾ......

(ಶ್ರೀ ವಾಟಾಳ್ ನಾಗರಾಜ್‌ರವರು ತಮ್ಮ ಧರಣಿಯನ್ನು ಮುಕ್ತಾಯಗೊಳಿಸಿ ತಮ್ಮ ಸ್ಥಾನಕ್ಕೆ ಬಂದು ಕುಳಿತರು.)

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ನಾನು ಕೆಲವು ನಿಮಿಷಗಳ ಹಿಂದೆ ಹೇಳುತ್ತಿದ್ದೆ. ಹೋದ ಸದನದಲ್ಲಿ ನಾವು ಏನು ಈ ಮಸೂದೆಯನ್ನು ಮಂಡಿಸಿದೆವು, ಅಂದಿನಿಂದ ಇಲ್ಲಿಯವರೆಗೆ ದೇಶದಾದ್ಯಂತ ಪತ್ರಿಕೆಗಳಲ್ಲಿ, ಮ್ಯಾಗಜೈನ್‌ಗಳಲ್ಲಿ, ಪ್ರಕಟಣೆಗಳಲ್ಲಿ ನೋಡಿದ್ದೇವೆ. ಅದರ ಜೊತೆಗೆ ನಮ್ಮ ವಿರೋಧ ಪಕ್ಷದ ನಾಯಕರ ಪಕ್ಷವಾದ ಜನತಾದಳದವರು, ಕರ್ನಾಟಕದಲ್ಲಿರತಕ್ಕಂಥ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಅವರ ಜೊತೆಗೆ ಸೇರಿರತಕ್ಕಂಥವರು ಎಲ್ಲರೂ ದೆಹಲಿಗೆ ಹೋಗಿ ಪ್ರಧಾನಮಂತ್ರಿಗಳನ್ನು ನೋಡಿದ್ದಾರೆ. ನನಗೆ ಬಹಳ ಅತ್ಯಾಶ್ಚರ್ಯಕರವಾದ ವಿಷಯ ಎಂದರೆ, ನಮ್ಮ ಪಕ್ಷದ ನಾಯಕರು ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿರತಕ್ಕಂಥ ರಾಜೀವ್ ಗಾಂಧಿಯವರನ್ನೂ ಕೂಡಾ ಭೇಟಿಯಾಗಿದ್ದಾರೆ

ಶ್ರೀ ಬಸವರಾಜ ರಾಯರೆಡ್ಡಿ :– ಭೇಟಿ ಆಗಲಿಲ್ಲ, ಇಂಟರ್‌ವ್ಯೂ ಕೊಡಲಿಲ್ಲ;

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ :– ನಾನು ನೀವು ಹೇಳಿದ್ದನ್ನು ಕೇಳಿದ್ದೇನೆ. ನಮ್ಮ ನಾಯಕರಾದ ಶ್ರೀಮಾನ್ ರಾಜೀವ್ ಗಾಂಧಿಯವರನ್ನು ನೋಡಲಿಕ್ಕೆ ಅವರು ಪ್ರಯತ್ನ ಮಾಡಿದ್ದಾರೆ. ಅವರ ಉದ್ದೇಶ ಏನು ಇದೆ ಅಂದರೆ ಅವರು ಏನು ತಿದ್ದುಪಡಿ ತಂದಿದ್ದರು, ರಾಜ್ಯಾಂಗದ 64 ನೇ ವಿಧಿಗೆ ಅವರು ಏನು ತಿದ್ದುಪಡಿಯನ್ನು ತಂದಿದ್ದರು, ಅದಕ್ಕೆ ವಿರುದ್ಧವಾಗಿ ಈ ಕರ್ನಾಟಕ ರಾಜ್ಯದಲ್ಲಿ ತಿದ್ದುಪಡಿ ತಂದಿದೆ; ಅದರ ಬದಲು ಅವರೇ ತರಬೇಕೆಂದಿದ್ದ ತಿದ್ದುಪಡಿಯನ್ನು ಮಾತ್ರ ಇಲ್ಲಿ ಜಾರಿಗೆ ಕೊಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಅವರಿಗೆ ಹೇಳಿದ್ದಾರೆ. ಅದಾದಮೇಲೆ ನಮಗೆ ಒಂದು ಮಾರ್ಗದರ್ಶನ ಆಯಿತು. ಕಾರಣ, ವಿರೋಧ ಪಕ್ಷದವರಿಗೆ ನಾವು ಏನು ಇಲ್ಲಿ ತಿದ್ದುಪಡಿ ತಂದಿದ್ದೇವೆ, ಬೇರೆ ತಿದ್ದುಪಡಿ ಒಂದು ಕಡೆ ಇರಲಿ, ಆದರೆ ರಾಜ್ಯಾಂಗದ 64 ನೇ ತಿದ್ದುಪಡಿಯ ಪ್ರಕಾರ ನಾವು ತಂದಿಲ್ಲವೆಂದೂ ಅವರ ವಾದ ಏನು ಇತ್ತು, ಅದಕ್ಕೆ ಮಾನ್ಯ ಅಧ್ಯಕ್ಷರೇ, ನಾನು ವಿನಯಪೂರ್ವಕವಾಗಿ ಒಂದು ಮಾತು ಹೇಳುತ್ತೇನೆ, ಎಲ್ಲಾ ಅಂದರೆ ಬಹುತೇಕ ಎಲ್ಲಾ ವಿಧೇಯಕಗಳನ್ನು ಜಾರಿಗೆ ಕೊಡಲು ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಈಗ ನಾನು ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಬದಲಾಗಿ ನಾವು ಏನೇನು ಮಾಡಿದ್ದೇವೆ ಎನ್ನತಕ್ಕಂಥದ್ದರ ಬಗ್ಗೆ ವಿವರಣೆಯನ್ನು ಕೊಟ್ಟು, ನಂತರ ಈ ಮಸೂದೆಯಲ್ಲಿರತಕ್ಕಂಥ ತಿದ್ದುಪಡಿ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ತ್ರಿ ಟೈರ್ ಸಿಸ್ಟಂ ಜಾರಿಗೆ ತರಬೇಕು ಎಂದು ಹೇಳಿದ್ದಾರೆ; ಅದರಂತೆ ನಾವು ತಂದಿದ್ದೇವೆ. ತಾಲ್ಲೂಕು ಸಮಿತಿ ಮಾತ್ರ ಅವರು ಏನು ಇಟ್ಟಿದ್ದರೋ ಅದನ್ನು ನಾವು ಸಹ ಇಟ್ಟುಕೊಂಡಿದ್ದೇವೆ. ನಾವೇನು ಅದನ್ನು ಬದಲಾವಣೆ ಮಾಡಿಲ್ಲ. ನಂತರ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯತ್ ಸಮಿತಿ ಮತ್ತು ಮಂಡಲ ಪಂಚಾಯತ್ ಹಾಗೂ ನ್ಯಾಯ ಪಂಚಾಯತ್ ಆಕ್ಟ್ 1983 ಎಂದು ಏನು ಇತ್ತು, ಅದರಲ್ಲಿರುವ ಹೆಸರನ್ನು ನಾವು ರಾಜ್ಯಾಂಗದ 64 ನೇ ವಿಧಿಯ ತಿದ್ದುಪಡಿಯಲ್ಲಿ ಹೇಳಿರುವಂತೆ ಕರ್ನಾಟಕ ಪಂಚಾಯತ್ ರಾಜ್ ಎನ್ನತಕ್ಕಂಥ ಒಂದು ಅಪ್ಪಟ ಒಳ್ಳೆಯ ಹೆಸರು ಇಡುವುದಕ್ಕೆ ಬಯಸಿದ್ದೇವೆ...

Sri D. B. Chandregowda :– I have a point of order. ಇವರು 76 ತಿದ್ದುಪಡಿಗಳನ್ನು ಏನು ತಂದಿದ್ದಾರೆ. ಅದರಲ್ಲಿ ಪಂಚಾಯತ್ ರಾಜ್ ಎನ್ನುವ ಹೆಸರನ್ನು ತಂದಿದ್ದೇವೆಂದು ಇಲ್ಲ. ಮಂತ್ರಿಗಳು ಈ ಸದನವನ್ನು ಈ ರೀತಿ ತಪ್ಪು ದಾರಿಗೆ ಎಳೆಯಬಾರದು. ಇವತ್ತಿನ ತಿದ್ದುಪಡಿಯಲ್ಲಿ ಪಂಚಾಯತ್ ರಾಜ್ ಎನ್ನುವ ಹೆಸರು ಇದೆ ಎಂದು ನೀವು ಇನ್ನೂ ಮೂವ್ ಮಾಡಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ನಾನು ಮೂವ್ ಮಾಡಿದ್ದೇನೆಂದು ಹೇಳಿದ್ದೇನಾ ?

Sri D. B. Chandregowda :- It is not correct. At this point of time, it is out there. I take objection. Unless he moves, how can I come to know of it ?

ಈ ವಿಷಯ ಅದರಲ್ಲಿ ಇಲ್ಲ. ಮುಂದೆ ತಾವು ತಿದ್ದುಪಡಿ ಮಂಡಿಸಿದಾಗ ಆಲೋಚನೆ ಮಾಡೋಣ. ಈಗ ಮೂಲ ಮಸೂದೆಗೆ ತಂದಿರುವ ತಿದ್ದುಪಡಿಯಲ್ಲಿ ಪಂಚಾಯತ್ ರಾಜ್ ಎನ್ನುವ ಹೆಸರು ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಎರಡನೆ ತಿದ್ದುಪಡಿಯಲ್ಲಿ ಇದೆ. ಈಗ ಅದನ್ನು ಯಾವರೀತಿ ಪ್ರಸ್ತಾಪ ಮಾಡುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ :– ನಾನು ಬಹಳ ವರ್ಷಗಳಿಂದ ಇಲ್ಲಿ ಇದ್ದೇನೆ. ಯಾವ ಹಂತದಲ್ಲಿ ಮೂವ್ ಮಾಡಬೇಕು ಎನ್ನುವುದು ಗೊತ್ತಿದೆ. ನಾನು ಈಗ ಮಾತನಾಡತಕ್ಕಂಥಾದ್ದು ರಾಜ್ಯಾಂಗದ 64 ನೇ ವಿಧಿಗೆ ತಿದ್ದುಪಡಿ ಏನು ಇತ್ತು ಅದನ್ನು ವಿಶ್ಲೇಷಣೆ ಮಾಡುವುದಕ್ಕೆ ಪ್ರಯತ್ನ ಮಾಡಿ ವಿವರಣೆ ಕೊಡುತ್ತಿದ್ದೆ. ನಾನು ಇನ್ನೂ ಮೂವ್ ಮಾಡಿಲ್ಲ...

ಅಧ್ಯಕ್ಷರು :– ಅವರು ರಾಜ್ಯಾಂಗದ 64 ನೇ ತಿದ್ದುಪಡಿಯ ಬಗ್ಗೆ ವಿಶ್ಲೇಷಣೆ ಮಾಡುತ್ತಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :– ರಾಜ್ಯಾಂಗದ 64 ನೇ ವಿಧಿಯ ತಿದ್ದುಪಡಿಯಲ್ಲಿ ಬಳಸಿರತಕ್ಕಂಥ ಪಂಚಾಯತ್ ರಾಜ್ ಎನ್ನತಕ್ಕಂಥಾದ್ದು ಇದರಲ್ಲಿ ಇಲ್ಲ...

Sri B. Basavalingappa :- Will you consider that it is already moved ?

(INTERRUPTIONS)

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲಿನಿಂದಲೂ ಬರೀ ಆಕ್ಷೇಪಣೆಗಳ ಮೇಲೆ ಆಕ್ಷೇಪಣೆಗಳ ಸುರಿಮಳೆಯನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು :– ನೀವು ಅದನ್ನು ಬಹಳ ಸುಲಭವಾಗಿ ನಿರೀಕ್ಷೆ ಮಾಡಬೇಕಾಗಿತ್ತು.

ಶ್ರೀ ಆರ್. ಎಲ್. ಜಾಲಪ್ಪ :– ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವಲಿಂಗಪ್ಪನವರು ಬಹಳ ಅನುಭವಸ್ಥರು: ವಸ್ತು ಸ್ಥಿತಿಯನ್ನು ಸದನಕ್ಕೆ ಹೇಳಿ ನಮ್ಮನ್ನು ಕನ್ವಿನ್ಸ್ ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಈಗ ಅವರು ಒಂದು ಮಾತನ್ನು ಹೇಳಿದರು. ತಾಲ್ಲೂಕು ಸಮಿತಿಯನ್ನು ತಾವು ಹೇಗೆ ಇಟ್ಟಿದ್ದೀರೋ ಹಾಗೇ ಇಟ್ಟಿದ್ದೇವೆಂದು ಹೇಳಿದರು. ತಾಲ್ಲೂಕು ಸಮಿತಿಯೊಳಗೆ 5 ಜನರನ್ನು ತಾಲ್ಲೂಕು ಸಮಿತಿಗೆ ನಾಮಕರಣ ಮಾಡುತ್ತಿದ್ದೆವು. ತಮ್ಮ ಪ್ರಪೋಸಲ್‌ನಲ್ಲಿ 5 ಜನರನ್ನು ತಾವು ಸಹ ನಾಮಿನೇಟ್ ಮಾಡುತ್ತಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ :– ಇಲ್ಲ.

ಶ್ರೀ ಆರ್. ಎಲ್. ಜಾಲಪ್ಪ :– ಜಿಲ್ಲಾ ಪರಿಷತ್ತಿನವರು ಮಂಡಲ ಪಂಚಾಯಿತಿಗೆ ನಾಮಕರಣ ಮಾಡುತ್ತಿದ್ದರು. ತಾಲ್ಲೂಕು ಪಂಚಾಯಿತಿಗೆ ತಾಲ್ಲೂಕ್ ಪಂಚಾಯಿತಿಯವರೇ ನಾಮಕರಣ ಮಾಡಿಕೊಳ್ಳುತ್ತಿದ್ದರು. ಈಗ ತಾವು ಏನು ಮಾಡುತ್ತಿದ್ದೀರಿ ?

ಶ್ರೀ ಎಂ. ವಿ. ವೆಂಕಟಪ್ಪ :– ತಾಲ್ಲೂಕು ಸಮಿತಿಯವರ ರೆಕಮೆಂಡೇಷನ್ ಮೇಲೆ ಜಿಲ್ಲಾ ಪರಿಷತ್ತಿನವರ ನಾಮಕರಣ ಮಾಡುತ್ತಿದ್ದರು.

ಶ್ರೀ ಆರ್. ಎಲ್ ಜಾಲಪ್ಪ :– ಈಗ ತಾವು ಏನು ಮಾಡುತ್ತಿದ್ದೀರಿ ? 5 ಜನರನ್ನು ತಾವೇ ನಾಮಿನೇಟ್ ಮಾಡುತ್ತಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ 12 ಪಂಚಾಯಿತಿಗಳು ಇವೆ. 7 ಪಂಚಾಯಿತಿಗಳು ನಮ್ಮ ಪಕ್ಷ ಗೆದ್ದು ಕೊಂಡು ಬಂದಿದೆ. ಇನ್ನು 5 ನಿಮ್ಮ ಪಕ್ಷ ಅಲ್ಲಿ ಇದೆ ಎಂದು ಇಟ್ಟುಕೊಳ್ಳಿ. 5 ಜನರನ್ನು ನೀವು ನಾಮಿನೇಟ್ ಮಾಡಿದರೆ 10 ಮತ್ತು 7 ಆಯಿತು. ನಾನು ಸುಮ್ಮನೆ ಕಡ್ಲೆಕಾಯಿ ತಿನ್ನಾ ಅಲ್ಲಿ ? ಎಷ್ಟು ಚೆನ್ನಾಗಿ ಹೇಳುತ್ತೀರಿ-ನೋಡಿ ತಾವು ;

ಶ್ರೀ ಬಿ. ಬಸವಲಿಂಗಪ್ಪ:– ನಾನು ಉದಾಹರಿಸಿರತಕ್ಕಂತಾದ್ದು ಬೇರೆ ದೃಷ್ಟಿಯಲ್ಲಿ. ಅಂದರೆ ತಾಲ್ಲೂಕು ಮಟ್ಟದಲ್ಲಿ. ಗ್ರಾಮ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ನೇರ ಚುನಾವಣೆ ಇರಬೇಕೆಂದು ನಮ್ಮ 64 ನೇ ಅಮೆಂಡ್ ಮೆಂಟ್‌ನಲ್ಲಿ ಇದೆ. ನಾನು ಅದಕ್ಕೇ ಈ ಉದಾಹರಣೆಯನ್ನು ಹೇಳಿದೆ. ನಾವು ನಾಮಿನೇಷನ್ ಮಾಡುತ್ತೀರೆಂದು ಹೇಳುತ್ತೀರಿ ? ನೀವು ಮಾಡಿಲ್ಲವಾ ? ಸೆಕ್ಷನ್ 5 (3) ರಲ್ಲಿ ಮಾಡಿಲ್ಲವೇ ?

ಶ್ರೀ ಆರ್. ಎಲ್. ಜಾಲಪ್ಪ :– ತಾವು ಮೊದಲೇ ಹೇಳಿದ್ದೀರಿ; ಇದನ್ನು ರಾಜಕೀಯಕ್ಕೋಸ್ಕರ ಮಾಡಿದ್ದೇವೆಂದು. ನೀವು ಮೊದಲೇ ಹೇಳಿರುವುದರಿಂದ, ನಾವು ಅದಕ್ಕೆ ನಿಮ್ಮನ್ನು ಬ್ಲೇಮ್ ಮಾಡುವಂತಿಲ್ಲ; Whether we like it or not, you will pass it. You had made it very clear that you have made the changes only for your people. We don't have any objection for it.

ಶ್ರೀ ಬಿ. ಬಸವಲಿಂಗಪ್ಪ :– ನೀವು ಮಾಡಿರತಕ್ಕಂಥ ಏನು ಕಾಯಿದೆ ಇತ್ತು, ಅದರಲ್ಲಿ ಒಳ್ಳೆಯ ಕಲಂಗಳನ್ನು ಮುಂದುವರಿಸಿಕೊಳ್ಳುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ :– ಅಧ್ಯಕ್ಷರೇ, ಮೂಲ ಪ್ರತಿಯನ್ನು ತಾವು ಓದಿರಬಹುದು. ಹೆಣ್ಣು ಮಕ್ಕಳಿಗೆ 25 ಪರ್‌ಸೆಂಟ್ ಇದ್ದದ್ದನ್ನು 30 ಪರ್‌ಸೆಂಟ್ ಮಾಡುವುದಕ್ಕೆ ನಾವೇ ಪ್ರಪೋಸ್ ಮಾಡಿದ್ದೆವು. ಆದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಇದನ್ನು ಡಿಲೀಟ್ ಮಾಡಿದ್ದಾರೆ. ಮೂಲ ಪ್ರತಿಯಲ್ಲಿ ಅದು ಇದೆ. ಸೆಲೆಕ್ಟ್ ಕಮಿಟಿಗೆ ಕೊಟ್ಟಿದ್ದು ಮೂಲ ಪ್ರತಿಯನ್ನು ತಾವು ಓದಿ ನೋಡಿ.

ಶ್ರೀ ಬಿ. ಬಸವಲಿಂಗಪ್ಪ :– ಆಮೇಲೆ ತಾವು ಉತ್ತರ ಕೊಡಿ ಸ್ವಾಮಿ; ಮಾನ್ಯ ಅಧ್ಯಕ್ಷರೇ, ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ಶಾಸನಸಭಾ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು ಯಾರಿದ್ದರು, ಅವರಿಗೆ ಹಿಂದಿನ ಕಾಯಿದೆಯಲ್ಲಿ ಅವರಿಗೆ ಒಂದು ವೋಟಿಂಗ್ ಪವರ್ ಕೊಟ್ಟ ರೀತಿಯಲ್ಲೇ ಇದೆ. ಅದು 64 ನೇ ತಿದ್ದುಪಡಿಯಲ್ಲೂ ಇದೆ. ತಾಲ್ಲೂಕು ಸಮಿತಿಗೆ ಚುನಾವಣೆ ಇಲ್ಲದೇಲೇ ಇದನ್ನು ಒಂದು ಸಮಿತಿ ಮಾಡತಕ್ಕಂತಾದ್ದು ಒಂದು; ಇದನ್ನು ನೀವೇ ಹೇಳಿಕೊಟ್ಟದ್ದು, ಅವರಿಗೆ ವೋಟಿಂಗ್ ಪವರ್ ಕೊಡ-ತಕ್ಕಂತಾದ್ದನ್ನು ರೀಟೇನ್ ಮಾಡಿಕೊಂಡಿದ್ದೇವೆ. ನಂತರ ಚೇರ್‌ಪರ್ಸನ್ ಮೀಸಲಾತಿ ಕೊಡಬೇಕೆಂದು 64ನೇ. ತಿದ್ದುಪಡಿಯಲ್ಲಿ ಇದೆ. ನಾವು ಹೆಣ್ಣು ಮಕ್ಕಳಿಗೆ 30 ಪರ್‌ಸೆಂಟ್ ಮೀಸಲಾತಿ ಕೊಡಬೇಕೆಂದು ಅವರು ಹೇಳಿದ ಪ್ರಕಾರವೇ ಮಾಡಿದ್ದೇವೆ. 25 ಪರ್‌ಸೆಂಟ್ ಇದ್ದದ್ದನ್ನು 30 ಪರ್‌ಸೆಂಟ್ ಮಾಡಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ:– ಮೂಲ ಪ್ರತಿಯಲ್ಲಿ ನಾವು 30 ಪರ್‌ಸೆಂಟ್‌ಗೆ ಪ್ರಪೋಸ್ ಮಾಡಿದ್ದೆವು ಸೆಲೆಕ್ಟ್ ಕಮಿಟಿಯವರು ಅದನ್ನು 25 ಪರ್‌ಸೆಂಟ್ ಮಾಡಿದರು.

ಅಧ್ಯಕ್ಷರು : ಅವರು ಮೂಲ ಪ್ರತಿ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ : ಇದರಲ್ಲಿ ನಿಮ್ಮ ವರ್ಗದವರು ಇದ್ದಾರೆ; ಕಾಡು ಜನರಿದ್ದಾರೆ. ಅವರಿಗೆ 18 ಪರ್‌ಸೆಂಟ್ ಮಾಡಬೇಕೆಂದು ನಾವು ಮಾಡಿದ್ದೇವೆ. ಚೇರ್‌ಪರ್ಸನ್‌ನಲ್ಲೂ ಮಾಡಿದ್ದೇವೆ. ಸೀಟ್ಸ್‌ನಲ್ಲೂ ರಿಸರ್ವೇಷನ್ ಮಾಡಿದ್ದೇವೆ. ಶೆಡ್ಯೂಲ್ಡ್ ಕ್ಯಾಸ್ಟ್‌ನವರ ಸಂಖ್ಯೆಗನುಗುಣವಾಗಿ ಮೀಸಲಾತಿ ಕೊಡಬೇಕೆಂದು ನಾವು ಅದನ್ನೂ ಸಹ ಮಾಡಿದ್ದೇವೆ. ಇದನ್ನು ನಿರ್ಣಯ ಮುಂದೆ ಮಾಡಬೇಕೆಂದು ಇದ್ದೇವೆ. ಇನ್ನೊಂದು 64 ನೇ ತಿದ್ದುಪಡಿಯಲ್ಲಿ ಚೇರ್‌ಪರ್ಸನ್‌ನಲ್ಲಿ ಈ ತಿದ್ದುಪಡಿಗಳು ಇರಬೇಕೆಂದು ಏನು ಹೇಳಿದ್ದಾರೆ, ನಾವು ಅದನ್ನು ಪಾಲಿಸಿಕೊಂಡು ಬಂದಿದ್ದೇವೆ.

(ಉಪಾಧ್ಯಕ್ಷಣಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಜಿಲ್ಲಾ ಪರಿಷತ್ತಿನ ಅಧ್ಯಕ್ಷರನ್ನು ತೆಗೆಯತಕ್ಕಂಥ ವಿಷಯದಲ್ಲಿ ಬಹುಮತದಿಂದ ತೆಗೆಯುವುದನ್ನು ಬಿಟ್ಟರೆ, ಮಂಡಲ ಪಂಚಾಯಿತಿಯಲ್ಲಿ ಮೂರನೇ ಎರಡು ಭಾಗದ ಜನ ದೇಮಸ್ಟ್ ಬಿ ಪ್ರೆಸೆಂಟ್ ಅಂಡ್ ವೋಟ್; ಎಂದು ಏನು ಹೇಳಿದ್ದಾರೆ, ಅದನ್ನು ನಾವು ಅನುಕರಣೆ ಮಾಡಿದ್ದೇವೆ, ಆ ಭಾಷೆಯನ್ನೂ ನಾವು ಅನುಕರಣೆ ಮಾಡಿದ್ದೇವೆ. ಆಮೇಲೆ ಪಂಚಾಯಿತಿಗಳ ಅವಧಿ ಏನಿದೆ, ಹಾಗೂ ಪಂಚಾಯಿತಿ ಸಮಿತಿ ಏನು ಇದೆ. ಅದರ ಅವಧಿಯನ್ನು ಐದು ವರ್ಷ ಎಂದು ಅದರಲ್ಲಿ ಹೇಳಿದ್ದಾರೆ. ಅದನ್ನು ನಾವು ಹಾಗೆಯೇ ಇಟ್ಟಿದ್ದೇವೆ. ನಾನು ಒಂದು ವಿಷಯವನ್ನು ಇಲ್ಲಿ ಹೇಳಬೇಕು. ನಾನು ಅನುಕರಣೆ ಮಾಡಿರತಕ್ಕ ವಿಷಯ ಏನು ಎಂಬುದನ್ನು ಹೇಳಬೇಕು. ಈ 64 ರ ತಿದ್ದುಪಡಿಯಲ್ಲಿ ಒಂದು ಮಹತ್ತರವಾದ ವಿಷಯ ಇದೆ. ಅದರಲ್ಲಿ ರಾಜ್ಯಾಂಗದ ಕಲಮು 40 ರ ಪ್ರಕಾರ ತಿದ್ದುಪಡಿಯನ್ನು ಮಾಡಲೇಬೇಕಾಗಿತ್ತು. ತಿದ್ದಂಪಡಿ ಮಾಡಿದ್ದರೆ ಪಂಚಾಯಿತಿ ಸಂಸ್ಥೆಗಳು ಮೂರು ಹಂತದಲ್ಲಿ ಕೂಡ ಅವರಿಗೆ ಸಾಕಷ್ಟು ಅಧಿಕಾರ ಬರುತ್ತಿತ್ತು. ಅವರಿಗೆ ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಕಾರ್ಯಕ್ರಮ ಹಾಕಿಕೊಂಡು ಅದನ್ನು ಕಾರ್ಯಗತ ಮಾಡಲಿಕ್ಕೆ ಅನುಕೂಲ ಆಗುತ್ತಿತ್ತು. ಆದರೆ ಇದು ಲೋಕಸಭೆಯಲ್ಲಿ ಪಾಸ್ ಆದರೂ ಕೂಡ ರಾಜ್ಯಸಭೆಯಲ್ಲಿ ಬಿದ್ದು ಹೋದುದರಿಂದ ಇವತ್ತು 64 ರ ತಿದ್ದುಪಡಿ ನಮ್ಮ ಮುಂದೆ ಇಲ್ಲ; ನಮ್ಮ ದೇಶದ ಮುಂದೆ ಇಲ್ಲ. ನಮ್ಮ ಸರ್ಕಾರ ಪುನಃ ಅಧಿಕಾರಕ್ಕೆ ಬಂದಾಗ ಅದನ್ನು ಪುನಃ ತಂದು ಪಂಚಾಯಿತಿಸಿಸ್ಟಂ ಏನು ಇದೆ.ಆಒಂದು ರಚನೆ ಏನು ಇದೆ, ಅದನ್ನು ಎಲ್ಲಾ ಹಂತದಲ್ಲಿಯೂ ಬಲಪಡಿಸಿ, ಅವರನ್ನು ಶಕ್ತಿಯುತರನ್ನಾಗಿ ಮಾಡಿ, ಅವರವರ ಕೆಲಸ ಕಾರ್ಯಗಳನ್ನು ಅವರ ಒಂದು ಅಧಿಕಾರದ ಹಿನ್ನೆಲೆಯಲ್ಲಿ ಕೆಲಸ ಮಾಡಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ. ನಾನು ಈಗಾಗಲೇ ಹೇಳಿದ್ದೇನೆ. ಈ 64 ನೇ ಕಲಂ ಅನ್ನು ನಾವು ತಿದ್ದುಪಡಿ ಮಾಡದೇ ಹೋದರೆ, ಏನು ಪಂಚಾಯಿತಿ ಸಂಸ್ಥೆಗಳಿವೆ, ಅದಕ್ಕೆ ನೇರವಾಗಿ ಪವರ್ ಅಂಡ್ ಅಥಾರಿಟಿ ಕೊಡುವುದಕ್ಕೆ ಆಗುವುದಿಲ್ಲ. ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಕಾರಣ ಏನೆಂದರೆ, ಒಂದು ಸಾಮೂಹಿಕ ಜನತೆಯ ನಿರ್ಧಾರ ಏನಿದೆ, ಕಲೆಕ್ಟಿವ್ ವಿಲ್ ಆಫ್ ದಿ ಪೀಪಲ್; ಅದು ಒಂದು ಸರ್ತಿ ಪ್ರಕಟಣೆ ಮಾಡಿದಾಗ ಏನು ಆಗುತ್ತದೆ ಎಂಬುದನ್ನು ಯೋಜನೆ ಮಾಡಬೇಕು. ಆ ಹಿನ್ನೆಲೆಯಲ್ಲಿ ಸಾರ್ವಭೌಮತ್ವದ ಒಂದು ಸಂಸ್ಥೆಯಲ್ಲಿ ಅವರಿಗೆ ಮಾನಸಿಕವಾಗಿ ಏನು ಒಂದು ಅಧಿಕಾರ ಕೊಟ್ಟಿದ್ದೇವೆ, ಅವರು ಏನು ತೀರ್ಮಾನ ಮಾಡುತ್ತಾರೆ,

ಅವರ ಹಿನ್ನೆಲೆಯಲ್ಲಿ ಈ ಸಾರ್ವಭೌಮತ್ವವನ್ನು ಹಂಚಲಿಕ್ಕೆ ಆಗುತ್ತದೆಯೇ ಹೊರತಾಗಿ ಬೇರೆ ರೀತಿಯಲ್ಲಿ ಆಗುವುದಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಈ ಒಂದು ಸಾರ್ವಭೌಮತ್ವದ ಹಿನ್ನೆಲೆಯಲ್ಲಿ, behind the back, in the background of the collective will of the people, the Constituent Assembly was set up & then the Constituent Assembly has passed what is called the Constitution. ಅದು ಕಾನ್‌ಸ್ಟಿಟ್ಯೂಷನ್ ಮಾಡಿದ ಮೇಲೆ ಆ ಒಂದು ಸಾಮೂಹಿಕ ನಿರ್ಧಾರ ಏನು ಇದೆ, ಆ ನಿರ್ಧಾರದ ಹಿನ್ನೆಲೆಯಲ್ಲಿ ನಾವು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ನಿರ್ಧಾರ ಹೇಗೆ ಆಗುತ್ತದೆ ಎಂಬುದನ್ನು ಹೇಳುತ್ತೇನೆ. ಇವತ್ತಿನ ದಿವಸ ಕಾನ್‌ಸ್ಟಿಟ್ಯೂಷನ್ ಎನ್ನತಕ್ಕದ್ದು collective will of the people. ನಾವು ಇದನ್ನು ಬದಲಾವಣೆ ಮಾಡಬೇಕಾದರೆ ನಾವು ಸಕಾರಣದಿಂದ ನಿಯಮಾವಳಿ ಪ್ರಕಾರ ಪಾರ್ಲಿಮೆಂಟ್‌ನ್ನು ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಾಗಿ ಪರಿವರ್ತನೆ ಮಾಡಿ ಇಂತಹ ಒಂದು ತಿದ್ದುಪಡಿಯನ್ನು ಮಾಡಬೇಕಾಗುತ್ತದೆ. ತಾವು ಏನು ಹಿಂದೆ ಅಧಿಕಾರ ಕೊಡಬೇಕೆಂದು ಪ್ರಯತ್ನ ಮಾಡಿದಿರಿ; ಈ ಜಿಲ್ಲಾ ಪರಿಷತ್‌ಗಳಿಗೆ ಅಧಿಕಾರ ಕೊಡಬೇಕೆಂದು ಮಾಡಿದಿರಿ; ಆದರೆ ನಿಮಗೆ ಕೊಡಲಿಕ್ಕೆ ಆಗಲಿಲ್ಲ: ಆಗ ನೀವು ಕಾನೂನು ಮಾಡಲಿಲ್ಲ ಮತ್ತು ಯಾವುದೇ ನಿಯಮಾವಳಿಯನ್ನು ಬದಲಾವಣೆ ಮಾಡಲಿಲ್ಲ. ಕಾರಣ ಈ ಒಂದು ಸಾರ್ವಭೌಮತ್ವ ಇರತಕ್ಕದ್ದು ಕೇಂದ್ರ ಸರ್ಕಾರಕ್ಕೆ ಹಾಗೂ ರಾಜ್ಯ ಸರ್ಕಾರಗಳಿಗೆ ಮಾತ್ರವೇ ಇರತಕ್ಕದ್ದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಕೆಳಗೆ ಇರತಕ್ಕದ್ದು ಸಂಸ್ಥೆಗಳಿಗೆ ಆ ಅಧಿಕಾರವನ್ನು ಕೊಡಲಿಕ್ಕೆ ಆಗುವುದಿಲ್ಲ. ಆದುದರಿಂದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಎಷ್ಟೇ ಅಭಿಮಾನದಿಂದ ಇದ್ದರೂ ಸಹ ಅವರಿಗೆ ಎಷ್ಟೇ ಕಾತುರತೆ ಇದ್ದರೂ ಕೂಡ ಹಾಗೆಯೇ ಶ್ರೀ ನಜೀರ್ ಸಾಬ್‌ರವರಿಗೂ ಎಷ್ಟೇ ಕಾತುರತೆ ಇದ್ದರೂ ಕೂಡ ಇಂತಹ ಒಂದು ಅಧಿಕಾರವನ್ನು ಜಿಲ್ಲಾ ಪರಿಷತ್ತುಗಳಿಗೆ ಕೊಡಲಿಕ್ಕೆ ಆಗಲಿಲ್ಲ. ಆದುದರಿಂದ ಒಂದು ನೋಟಿಫಿಕೇಷನನ್ನು ಅವರು ಮಾಡಿದ್ದಾರೆ. ಜಿಲ್ಲಾಧ್ಯಕ್ಷರು ಗಳಿಗೆ ಎಷ್ಟು ಪವರ್ಸ್ ಇರಬೇಕು, ಅವರು ಏನು ಕೆಲಸ ಮಾಡಬೇಕು ಎಂಬ ಬಗ್ಗೆ ನೋಟಿಫಿಕೇಶನ್ ನಲ್ಲಿ ಹೇಳಿದ್ದಾರೆ. ಆದ್ದರಿಂದ 64ರ ತಿದ್ದುಪಡಿ ಪಾಸ್ ಆದರೆ, ಇಂತಹ ಒಂದು ಪವರ್ ಅಂಡ್ ಅಥಾರಿಟಿ ಏನು ಇದೆ. ಅದನ್ನು ಬೇರೆಯವರಿಗೆ ಕೊಡಬಹುದೇ ಹೊರತು ಇಲ್ಲದಿದ್ದರೆ ನಾವು ಕೊಡಲಿಕ್ಕೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆದ್ದರಿಂದ ಅದನ್ನು ಹೊರತುಪಡಿಸಿ 64 ರ ತಿದ್ದುಪಡಿಯಲ್ಲಿರತಕ್ಕ ಎಲ್ಲಾ ಕಲಮುಗಳನ್ನು ನಾವೂ ಜಾರಿಗೆ ಕೊಡಲಿಕ್ಕೆ ನಮ್ಮ ಕಾಂಗ್ರೆಸ್ ಸರ್ಕಾರ ಇವೊತ್ತು ಪ್ರಯತ್ನ ಮಾಡುತ್ತಿದೆ, ಜಾರಿಗೆ ಕೊಡಲಿಕ್ಕೆ ನಾವು ನಿರ್ಧಾರವನ್ನು ಮಾಡಿದ್ದೇವೆ. ಕಾಂಗ್ರೆಸ್ ಪಕ್ಷ ನಿರ್ಧಾರ ಮಾಡಿದೆ. ನಮ್ಮ ಸರ್ಕಾರ ನಿರ್ಧಾರ ಮಾಡಿದೆ. ಆದ್ದರಿಂದ ತಾವು ಯಾರೂ ಸಂಶಯ ಪಡ ಬೇಕಾಗಿಲ್ಲ. ಇನ್ನು ತಾಲ್ಲೂಕು ಎಲೆಕ್ಷನ್ ಬಗ್ಗೆ ಒಂದು ಜಿಲ್ಲಾ ಪರಿಷತ್ ಹಂತದಲ್ಲಿ. ಪಂಚಾಯಿತಿ ಹಂತದಲ್ಲಿ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಹಿಂದೆ ಏನು ಕಲಮುಗಳು ಇತ್ತು, ಅವುಗಳನ್ನು ಜಾರಿಗೆ ಕೊಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಅವನ್ನು ಬಿಟ್ಟರೆ ನಾವು ಎಲ್ಲಾ ಹಂತದಲ್ಲಿಯೂ ಅದನ್ನು ಜಾರಿಗೆ ಕೊಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಇದರಿಂದ ಯಾರು ಜನತಾದಳದವರು ಏನು ಒಂದು ಪ್ರಯತ್ನವನ್ನು ಒಂದು ತಿಂಗಳಿನಿಂದ ಮಾಡಿದರು ಕರ್ನಾಟಕ ರಾಜ್ಯದಲ್ಲಿ ಏನು ಈ ಕಾಂಗ್ರೆಸ್ ಸರ್ಕಾರದಲ್ಲಿ ಅವರ ಹೈಕಮಾಂಡ್ ನಾಯಕರುಗಳು ಏನು ಹೇಳಿದ್ದಾರೆ, ಅದನ್ನು ಜಾರಿಗೆ ಕೊಡಲಿಕ್ಕೆ ಇವರು ಪ್ರಯತ್ನ ಮಾಡುತ್ತಿಲ್ಲ ಎನ್ನತಕ್ಕ ವಾದ ಬುಡವಿಲ್ಲದ್ದು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

5–00 ಪಿ. ಎಂ.

ಇದು, ಈ ವಾದಕ್ಕೆ ನಾವು ಅಕ್ಷರಶಃ ಜಾರಿಗೆ ಕೊಟ್ಟ ಮೇಲೆ ಜನತಾದಳ ಪಕ್ಷದ ಮಾನ್ಯ ಸದಸ್ಯರಿಗೆ ಮಾತನಾಡತಕ್ಕಂಥ ಅವಕಾಶ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅವರು ಆ ಕುರಿತು ಮಾತನಾಡುವುದಿಲ್ಲ ಎಂದು ನಾನು ಭಾವಿಸುತ್ತೇನೆ. ನನ್ನ ಕರ್ತವ್ಯವೂ ಕೂಡ ಕಡಿಮೆ ಈ ದಿಶೆಯಲ್ಲಿ ಆಗಿದೆ. ಈ ರಿಸರ್ವೇಶನ್ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಹೆಣ್ಣುಮಕ್ಕಳಿಗೆ ಶೇಕಡಾ 30 ರಷ್ಟು ಕಾದಿರಿಸಿದ್ದೇವೆ ಎಸ್‌ಸಿ. ಎಸ್‌ಟಿ. ಯವರಿಗೆ ರಿಸರ್ವೇಶನ್ ಕೊಟ್ಟಿದ್ದೇವೆ. ತಾವುಗಳು ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಕೊಟ್ಟಿಲ್ಲ ಎಂದು ಕೇಳಿದ್ದೀರಿ? ನಮ್ಮ ಮೊದಲ ತಿದ್ದುಪಡಿಯಲ್ಲಿ ಹಿಂದುಳಿದ ವರ್ಗಗಳಿಗೆ 50 ಪರ್‌ಸೆಂಟ್ ಮೀಸಲಾತಿ ಇಡಬೇಕೆಂದು ಮಾಡಿದ್ದು ನಿಜ. ಅದನ್ನು ಪ್ರಿಂಟ್ ಮಾಡಿ ತಮ್ಮ ಕೈಯಲ್ಲಿ ಕೊಟ್ಟಿದ್ದೇವೆ. ಆದರೆ ಹಿಂದುಳಿದ ವರ್ಗಗಳವರು ಏನಿದ್ದಾರೆ ಅವರ ಬಗ್ಗೆ ಕೂಲಂಕಷವಾದ ವಿಚಾರ ಮಾಡಿ, ಅವರ ಜನಗಣತಿ ಆಧಾರದ ಮೇಲೆ ಯಾವ ಊರಿನಲ್ಲಿ ಎಷ್ಟು ಜನಸಂಖ್ಯೆ ಇದ್ದಾರೆ, ಅದಕ್ಕೆ ಅನುಗುಣ ವಾಗಿ ಅಂಥವರ ಬಗ್ಗೆ ಜನಗಣತಿಯನ್ನು ಗಣನೆಗೆ ತೆಗೆದುಕೊಂಡು ಯಾವ ರೀತಿಯಲ್ಲಿ ಅವರಿಗೆ ಮೀಸಲಾತಿ ಯನ್ನು ಇಡಬೇಕೆಂದು ಮತ್ತು ಎಲ್ಲಿ ಮೀಸಲಾತಿ ಇಡಬೇಕೆಂದು ಮುಂದೆ ನಿರ್ಧಾರ ಮಾಡಬೇಕು. ಒಂದು ವೇಳೆ ಏಕಾಏಕಿಯಾಗಿ ಅವರಿಗೆ 50 ಪರ್‌ಸೆಂಟ್ ಮೀಸಲಾತಿಯನ್ನು ಇಟ್ಟಿದ್ದೇವೆ ಎಂದು ಇಟ್ಟುಕೊಳ್ಳೋಣ ಅದರಿಂದ ಏನಾಗುತ್ತದೆ ಈಗ ಇಡೀ ದೇಶದಲ್ಲಿಯೇ ಒಂದು ತರ್ಕ ಶುರುವಾಗಿದೆ. ಮಂಡಲ್ ಕಮಿಶನ್‌ನಲ್ಲಿ

50 ಪರ್‌ಸೆಂಟ್‌ಗಿಂತಲೂ ಜಾಸ್ತಿ ಮೀಸಲಾತಿ ಹೋಗಬಾರದು ಎಂದು ಬಂತು. ಉತ್ತರ ಇಂಡಿಯಾದಲ್ಲಿ ಅವರ ಲೆಕ್ಕದ ಪ್ರಕಾರ 22.50 ರಷ್ಟು ಇದ್ದಾರೆ. ಅದನ್ನು ಮೈನಸ್ ಮಾಡಿದರೆ 27.50 ಉಳಿಯಿತು. ಇದರೊಳಗೆ ಸೀಮಿತವಾಗಬೇಕೇ ಅಥವಾ ಜಾಸ್ತಿ ಮಾಡಬಹುದೇ ಎಂಬ ಪ್ರಶ್ನೆ ಬರುತ್ತದೆ. ಹಾಗೆ ಬಂದಾಗ ನಮ್ಮ ಕರ್ನಾಟಕ ರಾಜ್ಯದಲ್ಲಿ 1986 ನೇ ಇಸವಿಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಾಗ ಒಂದು ಹುಕುಂ ಹೊರಡಿಸಿದ್ದಾರೆ. ಅದರ ಪ್ರಕಾರ ಇವೊತ್ತು 50 ಪರ್‌ಸೆಂಟ್ ಬ್ಯಾಕ್‌ವರ್ಡ್ ಕ್ಲಾಸಸ್ ನವರು ಏನಿದ್ದಾರೆ, ಅವರಿಗೆ ಆರ್ಟಿಕಲ್ 15–16 ರ ಪ್ರಕಾರ ಅವರಿಗೆ ರಿಸರ್ವ್ ಮಾಡಬೇಕು, ಕಾಲೇಜುಗಳಲ್ಲಿ ಮತ್ತು ಇತರ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶ ಕೊಡಬೇಕು, ಹಾಗೂ ಸರಕಾರಿ ನೌಕರಿಯಲ್ಲಿಯೂ ಕೂಡ ಮೀಸಲಾತಿ ಇರಬೇಕೆಂದು ಏನು ಮಾಡಿದ್ದಾರೆ, ಅದರ ಆಧಾರದ ಮೇಲೆ ನಾವು ಏನಾದರೂ ಮಾಡಿದರೆ, ನಾವು ಈ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನ್ಯಾಯ ದೊರಕಿಸಿದಂತೆ ಆಗುವುದಿಲ್ಲ. ಏಕೆಂದರೆ ಒಂದು ಊರಿನಲ್ಲಿ ಕೆಲವೇ ಜನ ಹಿಂದುಳಿದವರು ಇರುತ್ತಾರೆ; ಇನ್ನೊಂದು ಊರಿನಲ್ಲಿ ಅವರು 60–70 ಪರ್‌ಸೆಂಟ್ ನಷ್ಟು ಇರುತ್ತಾರೆ. ಹೀಗೆ ಕೆಲವು ಜಾತಿ ಮತ್ತು ಕೋಮುಗಳಿಗೆ ಸೇರಿದವರು ಪ್ರಾದೇಶಿಕವಾಗಿ ಹೆಚ್ಚು ಕಡಿಮೆ ಇರುತ್ತಾರೆ. ಆದ್ದರಿಂದ ಎಲ್ಲ ಕಡೆಯೂ ನಾವು ಈ ರೀತಿಯ ರಿಸರ್ವ್ ಮಾಡಿದರೆ ಕೆಲವರಿಗೆ ಅನ್ಯಾಯವಾಗ ತಕ್ಕಂಥ ಸಂದರ್ಭ ಉಂಟು. ಅಂತೆಯೇ ಈ 20–30 ರಷ್ಟು ರಿಸರ್ವ್ ಮಾಡಿದರೆ ಕೆಲವರಿಗೆ ಹೊಟ್ಟೆ ಉರಿ ಬರತಕ್ಕಂಥ ಸಂದರ್ಭವೂ ಬರಬಹುದು. ಆದುದರಿಂದ ಈ ಎಲ್ಲಾ ನ್ಯೂನತೆಗಳನ್ನು ಗಮನದಲ್ಲಿಟ್ಟುಕೊಂಡು ಮೊದಲು ಡಿ–ಲಿಮಿಟೇಶನ್ ಮಾಡಿ ನಂತರ ಆಯಾಯಾ ಮಂಡಳಗಳಲ್ಲಿ ಯಾವ ಕ್ಷೇತ್ರಗಳಿವೆ, ಯಾವ್ಯಾವ ಜಾತಿಗಳು ಅಂದರೆ ಹಿಂದುಳಿದವರು ಯಾವ ಸಂಖ್ಯೆಯಲ್ಲಿ ಇದ್ದಾರೆ ಎಂಬುದನ್ನು ಪರಿಗಣನೆಗೆ ತೆಗೆದುಕೊಂಡು ಅನಂತರ ಪರಿಗಣನೆಯನ್ನನುಸರಿಸಿ ಆ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಕೊಡಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಅದರಿಂದ ಜನಗಳಿಗೆ ಕೂಡ ಸಂತೋಷವಾಗುತ್ತದೆ, ಮತ್ತು ಜನಗಳಿಗೆ ಯಾವುದೇ ರೀತಿಯ ತೊಂದರೆಯೂ ಆಗುವುದಿಲ್ಲ ಮತ್ತು ಯಾವುದೇ ದ್ವೇಷ, ಅಸೂಯೆ ಆಗುವುದಿಲ್ಲ ಎಂಬ ಆಧಾರದ ಮೇಲೆ, ನಾವು ಈ ಒಂದು ನಿಲುವು ತೆಗೆದುಕೊಂಡಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ :– ನಮ್ಮ ಕಡೆ ಹಳ್ಳಿಯಲ್ಲಿ ಒಂದು ಗಾದೆ ಹೇಳುತ್ತಾರೆ. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ ಎಂದು; ತಾವು ಇಷ್ಟು ಹೊತ್ತು ಹೇಳಿದಿರಲ್ಲ, ಮೊದಲು ನೀವು ಯೋಚನೆ ಮಾಡಿರಲಿಲ್ಲವೇ ? ಬಹುಶಃ ನಿಮ್ಮ ಉದ್ದೇಶ ಏನಿತ್ತೆಂದರೆ, 50 ಪರ್‌ಸೆಂಟ್ ಮೀಸಲಾತಿ ಇಟ್ಟರೆ ಎಲ್ಲರೂ ಅವರ ಮೇಲೆ ಜಗಳ ಆಡಿಕೊಂಡು ಕೂತುಕೊಳ್ಳುತ್ತಾರೆ ಆಗ ಬೇರೆ ತಿದ್ದುಪಡಿಗಳನ್ನೆಲ್ಲ ಪಾಸ್ ಮಾಡಿಸಿಕೊಂಡು ಬಿಡಬಹುದು ಎಂದು ತಮ್ಮ ಅಭಿಪ್ರಾಯ ಇತ್ತೋ ಏನೋ ಗೊತ್ತಿಲ್ಲ. ಎರಡನೆಯದು, ಇದನ್ನು ವಿಚಾರ ಮಾಡಲು ನಿಮ್ಮ ಪಕ್ಷದಲ್ಲಿ ಒಂದು ಕಮಿಟಿ ಮಾಡಿದ್ದೀರಿ. ಅದರ ಸದಸ್ಯರೆಲ್ಲ ಬಹಳ ಬುದ್ಧಿವಂತರು; ಅನುಭವಸ್ಥರು ಅವರಿಗೂ 8 ದಿವಸ ಟೈಮ್ ಇತ್ತು, ಯಾವ್ಯಾವ ಕಡೆ ಯಾರ್ಯಾರು ಹೆಚ್ಚು ಇದ್ದಾರೆ ಎಂದು ಕಂಡುಕೊಂಡು ಮಾಡಬಹುದಿತ್ತು; ಆ ರೀತಿ ಏನೂ ಮಾಡಲಿಲ್ಲ; ಇದರಿಂದಾಗಿ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಏನೂ ಸಹಾಯ ಮಾಡಿದಂತಾಗಲಿಲ್ಲ. ಹೆಣ್ಣುಮಕ್ಕಳಿಗೆ 30 ಪರ್‌ಸೆಂಟ್ ಕೊಡಬೇಕೆಂದು ಹೇಳಿದ್ದೀರಿ. ಷೆಡ್ಯೂಲ್ ಕ್ಯಾಸ್ಟ್‌ನವರನ್ನು ಒಂದು ಸಲ ಅಧ್ಯಕ್ಷರನ್ನಾಗಿ ಮಾಡಬೇಕೆಂದು ನಮ್ಮ ಸರ್ಕಾರ ಇದ್ದಾಗ ಸಜೆಸ್ಟ್ ಮಾಡಿದ್ದೆವು, ಆದ್ದರಿಂದ ನೀವೇನೂ ಹೊಸದಾಗಿ ಮಾಡಲಿಲ್ಲ. ಈಗಲಾದರೂ ಬ್ಯಾಕ್‌ವರ್ಡ್ ಕ್ಲಾಸಸ್‌ನವರಿಗೆ ಮೀಸಲಾತಿ ಫಿಕ್ಸ್ ಮಾಡುವುದು ಒಳ್ಳೆಯದು; ಅದು ನಿಮ್ಮ ಹಿತದೃಷ್ಟಿಯಿಂದಲೇ ಒಳ್ಳೆಯದು. ನಮ್ಮ ಪಕ್ಷವಾಗಲಿ, ನಿಮ್ಮ ಪಕ್ಷವಾಗಲೀ, ಮೇಲ್ಜಾತಿಯವರ ಪಕ್ಷ; ಬ್ಯಾಕ್‌ವರ್ಡ್ ಕ್ಲಾಸ್‌ನವರ ಬಗ್ಗೆ ಯಾರಿಗೂ ಗಮನವಿಲ್ಲ ಎಂದು ಎಲ್ಲರೂ ಮಾತಾಡಿಕೊಳ್ಳುವುದನ್ನು ನೀವೂ ಕೇಳಿದ್ದೀರಿ; ಮಂಡಲ್ ಕಮಿಷನ್ ವರದಿ ಜಾರಿಗೆ ಕೊಡುತ್ತೇವೆಂದು ಹೇಳಿದಾಗ ನಿಮ್ಮ ಪಕ್ಷದವರು ಯಾವರೀತಿ ರಿಯಾಕ್ಟ್ ಮಾಡಿದರು ನಮ್ಮ ಪಕ್ಷದವರು ಹೇಗೆ ರಿಯಾಕ್ಟ್ ಮಾಡಿದರು ಬಿಜೆಪಿಯವರು ಹೇಗೆ ರಿಯಾಕ್ಟ್ ಮಾಡಿದರು ಎಂದು ತಮಗೆ ಗೊತ್ತಿದೆ. ಇದನ್ನೆಲ್ಲ ನೋಡಿದರೆ ನಮ್ಮ ರಾಷ್ಟ್ರದಲ್ಲಿ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಮುಕ್ತಿ ಇಲ್ಲವೆಂದು ಒಂದು ಅಭಿಪ್ರಾಯಕ್ಕೆ ಬರಲು ನಮ್ಮಂಥವರು ತಯಾರಾಗಿದ್ದೇವೆ. ಆದ್ದರಿಂದ ನೀವು ಹೇಳಿರುವ ವಿಷಯಗಳ ಬಗ್ಗೆ ಚರ್ಚೆ ವೇಳೆಯಲ್ಲಿ ಮಾತ-ನಾಡೋಣ. ಮೊದಲು ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ಈಗಲಾದರೂ ನಿಮ್ಮ ಸಚಿವಸಂಪುಟದಲ್ಲಿ ಇಟ್ಟು ಅವರಿಗೆ ಮೀಸಲಾತಿಯನ್ನು ನಿಗದಿ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಜಾಲಪ್ಪನವರು ಹೇಳಿರುವುದು ಒಳ್ಳೆಯ ಸಲಹೆ. ಆದರೆ ಸಾಧಕ-ಬಾಧಕಗಳನ್ನು ನಾವೂ ನೋಡಬೇಕಾಗುತ್ತದೆ. ಹೇಗೋ ಈ ಬಿಲ್‌ನ್ನು ಪಾಸು ಮಾಡಿಕೊಂಡು ಹೋಗ-ಬಹುದೆಂಬ ಉದ್ದೇಶ ಏನೂ ಇಲ್ಲ. ಆದರೆ ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ತಾಲ್ಲೂಕುಗಳಲ್ಲಿ ಬ್ಯಾಕ್‌ವರ್ಡ್ ಕ್ಲಾಸಸ್ ಜಾಸ್ತಿ ಇದ್ದಾರೆ. ಉದಾಹರಣೆಗೆ ಧಾರವಾಡ ಜಿಲ್ಲೆಯಲ್ಲಿ 58 ಪರ್ಸೆಂಟ್ ಇದ್ದಾರೆ. ನಮ್ಮ ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಲ್ಲಿ 34 ಪರ್ಸೆಂಟ್, 35 ಪರ್ಸೆಂಟ್ ಹೀಗೆ ಕಡಿಮೆ ಇದ್ದಾರೆ.; ಹೀಗಿರುವಾಗ ಒಂದು ಸರ್ವೆಸಾಧಾರಣ ಯೂನಿಫಾರ್ಮಾದ ರಿಸರ್ವೇಷನ್‌ನ್ನು ತರುವುದು ಸರಿಯಲ್ಲ. ಈ ಒಂದು ಮಸೂದೆ

ಪರಿಣಾಮಕಾರಿಯಾಗಿರುವಾಗ. ಈ ಬಗ್ಗೆ ಏಕಾಏಕಿ ಜನಕ್ಕೆ ನಾವು ಏನು ಮಾಡಬೇಕೆಂದಿದ್ದೇವೆಂಬುದನ್ನು ಹೇಳುವುದು ಸರಿಯಲ್ಲ. ಆದ್ದರಿಂದ ಡಿ-ಲಿಮಿಟೇಷನ್ ಮಾಡಿ ಅಂದರೆ ಜಿಲ್ಲಾ ಪರಿಷತ್‌ಗಳನ್ನು ಹಾಗೂ ಮಂಡಲ ಪಂಚಾಯ್ತಿಗಳನ್ನು ಡೀ-ಲಿಮಿಟೇಷನ್ ಮಾಡಿ. ಯಾವ್ಯಾವ ಊರಿನಲ್ಲಿ ಇಂತಹ ಎಷ್ಟೆಷ್ಟು ಜನರು ಯಾರ್ಯಾರಿದ್ದಾರೆ ಎಂಬುದನ್ನು ಗಣತಿಗೆ ತೆಗೆದುಕೊಂಡು ಅಲ್ಲಿ ಮೀಸಲಾತಿ ಮಾಡುವುದು ಸೂಕ್ತವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ :- ಹಾಗಾದರೆ 19 ಜಿಲ್ಲೆಗೂ 19 ಸ್ಟಾಂಡರ್ಡ್ ಅನ್ನು ಫಿಕ್ಸ್ ಮಾಡುತ್ತೀರಿ ಅಂದಂತೆ ಆಯಿತು;

ಶ್ರೀ ಬಿ. ಬಸವಲಿಂಗಪ್ಪ :- ಹಾಗಲ್ಲ, ಜನಸಂಖ್ಯೆ ಆಧಾರದ ಮೇಲೆ. ಕೆಲವರು ಈಗ ಈ ರಾಜ್ಯದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಜನ 60 ಪರ್ಸೆಂಟ್ ಇದ್ದಾರೆನ್ನುತ್ತಾರೆ; ಆದರೆ ಮತ್ತೆ ಕೆಲವರು ಇಲ್ಲ ಎನ್ನುತ್ತಾರೆ. ಅದಕ್ಕೆ ಆಧಾರ ಏನು ? 1931 ರ ಜನಗಣತಿ ಪ್ರಕಾರ ಎಲ್ಲಾ ಜಾತಿ ಜನಸಂಖ್ಯೆ ಇದೆ. ಅದರ ನಂತರ 1949ನೇ ಇಸವಿಯಲ್ಲಿ ಎಲೆಕ್ಷನ್ ಕಾಯಿದೆ ಏನು ಮಾಡಿದರು. ಅದರ ಪ್ರಕಾರ ಯಾವ ಜಾತಿಯನ್ನೂ ನಮೂದ ಮಾಡಬಾರದೆಂದು ಹೇಳಿದ್ದಾರೆ. ಆ ಸೂಚನೆ ಬಂದಮೇಲೆ ನಮ್ಮ ಹತ್ತಿರ ಯಾರು ಎಷ್ಟಿದ್ದಾರೆಂಬ ಬಗ್ಗೆ ನಮ್ಮ ಹತ್ತಿರ ಜನಗಣತಿ ಇಲ್ಲ. ಆದ್ದರಿಂದ ಸರ್ಕಾರವೇ ಅಧಿಕಾರ ತೆಗೆದುಕೊಂಡು ಜನಗಣತಿ ಈ ಬಗ್ಗೆ ಆಗಬೇಕೆಂದು ನಾವು ಬಹಳ ಆಳವಾಗಿ ಯೋಚನೆ ಮಾಡಿದ್ದೇವೆ. ಈ ಬಗ್ಗೆ ಕ್ಯಾಬಿನೆಟ್‌ನಲ್ಲೂ ಕೂಡ ಯೋಚನೆ ಮಾಡಿದ್ದೇವೆ. ನಮ್ಮ ಪಾರ್ಟಿಯ ಒಂದು ವೇದಿಕೆಯಲ್ಲೂ ಕೂಡಾ ಮಾಡಿದ್ದೇವೆ. ಮತ್ತೆ ಇದರ ಬಗ್ಗೆ ಎಲ್ಲರೂ ಸಮಾಧಾನಕರವಾಗಿರತಕ್ಕಂಥ ಒಂದು ಹಾದಿಯನ್ನು ಕಂಡುಹಿಡಿಯಬೇಕು ಎಂದು ಹೇಳಿ ಈ ನಿರ್ಧಾರವನ್ನು ಮಾಡಿದ್ದೇವೆ. ಬ್ಯಾಕ್‌ವರ್ಡ್ ಕ್ಲಾಸಸ್‌ನವರಿಗೆ ಏನು ಇವತ್ತಿನ ದಿವಸ ನಾವು ಮಾಡಲಿಕ್ಕೆ ಹೊರಟಿದ್ದೇವೆ, ಅದರಿಂದ ಅವರಿಗೆ ಅನ್ಯಾಯವಾಗುವುದಿಲ್ಲ. ಅನ್ಯಾಯವಾಗದ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇದರಿಂದ ಅವರಿಗೂ ಅನ್ಯಾಯವಾಗಬಾರದು. ಬೇರೆಯವರಿಗೂ ಅನ್ಯಾಯವಾಗಬಾರದು. ಅದರ ಬಗ್ಗೆ ನಿಮ್ಮ ಒಪ್ಪಿಗೆ ಇದೆ ಎಂದು ಕಾಣುತ್ತದೆ. ಆದುದರಿಂದ ನಾವು ಬೇರೆಯವರನ್ನು ದ್ವೇಷ ಮಾಡುವುದಾಗಲಿ, ಇನ್ನೊಬ್ಬರನ್ನು ಪ್ರೀತಿ ಮಾಡುವುದಾಗಲೀ ನಾವು ಅದಕ್ಕೆ ಹೋಗದೆ ನ್ಯಾಯವಾಗಿ ಒಂದು ವಾಸ್ತವಿಕವಾದ ಆಧಾರದಮೇಲೆ ಇದನ್ನು ಗಣನೆಗೆ ತೆಗೆದುಕೊಂಡು ಹಿಂದುಳಿದವರಿಗೆ ಮತ್ತು ಬೇರೆಯವರಿಗೂ ಕೂಡ ಮೀಸಲಾತಿಯನ್ನು ಮಾಡಬೇಕು ಎಂದು ಹೇಳಿ ಸರ್ಕಾರ ಈ ನಿಲುವು ತೆಗೆದುಕೊಂಡಿದೆ.

ಶ್ರೀ ಆರ್. ಎಲ್. ಜಾಲಪ್ಪ :- ನಿಮ್ಮ ಮಂತ್ರಿಮಂಡಲದಲ್ಲಿ ಈ ಮಸೂದೆಯನ್ನು ಮಂಡಿಸುವ ಮೊದಲು ಈ ಬಗ್ಗೆ ಚರ್ಚೆಯನ್ನು ಮಾಡಿದ್ದೀರಲ್ಲಾ ಸ್ವಾಮಿ.

ಶ್ರೀ ಬಿ. ಬಸವಲಿಂಗಪ್ಪ :- ಮಾಡಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ :- ಮಾಡಿದ್ದೀರಿ. ಇದು ಯಾರಿಗೂ ಹೊಳೆಯಲಿಲ್ಲವೇ ? ಇದು 50 ಪರ್‌ಸೆಂಟ್ ಜಾಸ್ತಿಯಾಗುತ್ತದೆ; ಒಂದು ಡಿಸ್ಟ್ರಿಕ್ಟ್‌ನಲ್ಲಿ ಜಾಸ್ತಿ ಇದೆ, ಒಂದು ಡಿಸ್ಟ್ರಿಕ್‌ನಲ್ಲಿ ಕಡಿಮೆ ಇದೆ ಎಂದು ನಿಮ್ಮ ಮಂತ್ರಿಮಂಡಲದಲ್ಲಿ ಒಬ್ಬರಿಗೂ ಹೊಳೆಯಲಿಲ್ಲವೇ ? ಮೊದಲು ತಾವು ಮಸೂದೆಯನ್ನು ಮಂಡನೆ ಮಾಡುವುದಕ್ಕೆ ಮೊದಲು ಮಂತ್ರಿಮಂಡಲದಲ್ಲಿ ಚರ್ಚೆಯನ್ನು ಮಾಡಿದ್ದೀರಲ್ಲಾ; ಒಬ್ಬ ಮಂತ್ರಿಗಳಿಗೂ ಇದು ಹೊಳೆಯಲಿಲ್ಲವೇ ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ :- ಬಹಳ ಒಳ್ಳೆಯ ಪ್ರಶ್ನೆ. ಬಹಳ ದೊಡ್ಡ ಪ್ರಶ್ನೆ ಈಗ......

ಶ್ರೀ ಆರ್. ಎಲ್. ಜಾಲಪ್ಪ :- ಯಾರೂ ಓದಿಲ್ಲ. ಈಗ ರೈಜ್ ಆದಮೇಲೆ ಓದಿರುವುದು.

ಶ್ರೀ ಬಿ. ಬಸವಲಿಂಗಪ್ಪ :- ಈ ನನ್ನ ಜೀವನವನ್ನೇ ಇದರಲ್ಲಿ ಮುಳುಗಿಸಿದ್ದೇನೆ. ನಾನು ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ...

ಶ್ರೀ ಆರ್. ಎಲ್. ಜಾಲಪ್ಪ :- ನಾನು ನಿಮ್ಮ ಬಗ್ಗೆ ಹೇಳಲಿಲ್ಲ. 50 ಪರ್‌ಸೆಂಟ್ ಮೀಸಲಾತಿ ತಂದಾಗ ನಾನಂತೂ ಬಹಳ ಖುಷಿಯಾಗಿದ್ದೆ. ಇಂಥ ಕ್ರಾಂತಿಕಾರಕ ಪುರುಷರು ನಮ್ಮಲ್ಲಿ ಬಂದಿದ್ದಾರಲ್ಲಾ ಎಂದು. 50 ಪರ್‌ಸೆಂಟ್ ತಂದಿದ್ದಾರೆ; we must congratulate them ಅದು ಏನಾದರೂ ಇರಲಿ. ಹಾಳಾಗಿ ಹೋಗಲಿ. ಅದು ಏನಾದರೂ ಇರಲಿ ಇಲ್ಲದೆ ಹೋಗಲಿ We must support ಅಂತ; ಈಗ ಟುಸ್ಸು ಅಂದು ಹೋಯಿತು.

ಒಬ್ಬ ಮಾನ್ಯ ಸದಸ್ಯರು :- ಅವರದ್ದು ಏನೂ ನಡೆಯಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :- ಮಾನ್ಯ ಅಧ್ಯಕ್ಷರೇ, ನಾವು 50 ಪರ್‌ಸೆಂಟ್ ಇಡಬೇಕು ಎಂದು ನಿರ್ಧಾರ ಮಾಡಿದ್ದು ನಿಜ. ಆದರೆ ಈ ನಿರ್ಧಾರಕ್ಕೆ ಒಂದು ಬುನಾದಿ ಬೇಕು. ಈಗ 55 ಮಾಡಿದೆವು ಎಂದು ತಿಳಿದುಕೊಳ್ಳಿ

ಅದಕ್ಕೆ ಬುನಾದಿ ಇರಬೇಕು, ಅದು ನ್ಯಾಯವಾಗಿರಬೇಕು ಮುಂದೆ ಕೋರ್ಟುಗಳು ಇದ್ದಾವೆ, ಸುಪ್ರೀಂ ಕೋರ್ಟ್ ಇದೆ, ಹೈಕೋರ್ಟು ಇದೆ. ಅಲ್ಲಿ ನಿಮ್ಮ ನೆಂಟರು ಯಾರೂ ಇಲ್ಲ.

ಶ್ರೀ ಆರ್. ಎಲ್. ಜಾಲಪ್ಪ :– ನನ್ನ ನೆಂಟರು ಇಲ್ಲ ಅಂತಲೇ ನೀವಾದರೂ ನಮ್ಮ ನೆಂಟರು ಆಗುತ್ತೀರಿ ಎಂದು ಯೋಚನೆಯನ್ನು ಮಾಡಿದ್ದೆ. ಆದರೆ ಆಗಲಿಲ್ಲವೇ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಆಗ ಇವರನ್ನು ಎಲ್ಲರೂ ಬಸವಣ್ಣ ಎಂದು ಹೇಳುತ್ತಿದ್ದರು. ಇದು ಕಲ್ಯಾಣದ ಬಸವಣ್ಣನೋ, ಕಲ್ಲಿನ ಬಸವಣ್ಣನೋ ಎಂದು ಗೊತ್ತಾಗಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ನಾವು ಏನಾದರೂ ಆಕಸ್ಮಾತ್ ಆಗಿ ಹಾಗೆ ಮಾಡಿದರೆ ನಿರ್ಧಾರ ಏನು ಘಟನೆ ಏನು, ಅಳತೆ ಏನು ಎನ್ನತಕ್ಕಂಥದ್ದರ ಬಗ್ಗೆ ಅವರು ಪರೀಕ್ಷೆ ಮಾಡಿದರೆ ನಮ್ಮ ಒಂದು ನಿರ್ಧಾರ ಏನು ಇದೆ, ಅದಕ್ಕೆ ಏನಾದರೂ ಒಂದು ಸ್ವಲ್ಪ ನಮಗೆ ತೊಂದರೆಯಾಗಬಹುದು ಎಂದು ಹೇಳಿ ನಾವು ಮೂರು ನಾಲ್ಕು ಸಾರಿ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಈ ನಿರ್ಧಾರಕ್ಕೆ ಬಂದಿದ್ದೇವೆ. ನಾವು ಮೊದಲೇ ನಿರ್ಧಾರ ಮಾಡಿ ಯೋಚನೆ ಮಾಡಿದ್ದೇವೆ ಎಂದು ಅಲ್ಲ. ಶ್ರೀಮಾನ್ ಜಾಲಪ್ಪನವರು ಹೇಳಿರತಕ್ಕಂಥ ಏನು ಒಂದು ವಾದ ಇದೆ, ಅವರು ಬ್ಯಾಕ್‌ವರ್ಡ್ ಕ್ಲಾಸಸ್‌ನ ಒಬ್ಬ ನಾಯಕನಾಗಿ ಮಾತನಾಡುತ್ತಿದ್ದಾರೆ; ಆದರಿಂದ ಅದಕ್ಕೆ ನಾನು ತಲೆಬಾಗಿದ್ದೇನೆ. ಆದರೆ ನೀವು ವಿರೋಧ ಪಕ್ಷದವರಾಗಿ ಮಾತನಾಡಿದರೆ ನಾನು ವಿರೋಧ ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಇದೆಲ್ಲಾ ವಿಪರ್ಯಾಸ.

ಶ್ರೀ ಆರ್. ಎಲ್. ಜಾಲಪ್ಪ :– ನಮ್ಮ ಹಣೆಬರಹ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯಲ್ಲಿ 76 ತಿದ್ದುಪಡಿಗಳು ಇವೆ ಎಂದು ಹೇಳಿದ್ದಾರೆ. ಇಲ್ಲಿ ತಿದ್ದುಪಡಿ 76 ಇದ್ದರೂ ಕೂಡಾ ಇದರಲ್ಲಿ ನ್ಯಾಯವಾಗಿರತಕ್ಕಂಥದ್ದು 42 ಮಾತ್ರ. ಈ 42 ಕೂಡ ಪ್ರೊಸೀಜರಲ್; ಉಳಿದಿರತಕ್ಕಂಥದ್ದು 34 ಮಾತ್ರ. ಇದರಲ್ಲ 11 ಮಾತ್ರ ಇದು ಪರಿಣಾಮಕಾರಿ ಯಾಗಿರತಕ್ಕಂಥ ಕಲಮುಗಳು ಇದೆಯೋ ಹೊರತಾಗಿ 76 ಇದೆ, ಎಂದು ಹೇಳಿ ಪತ್ರಿಕೆಗಳು ಕೂಡಾ ಪ್ರಕಟಣೆ ಮಾಡುತ್ತಿವೆ. ನಾವು ಕೂಡಾ ಹೇಳಿಕೊಳ್ಳುತ್ತಾ ಹೋಗುತ್ತಿದ್ದೇವೆ. ಇದರಲ್ಲಿ ಮುಖ್ಯ ವಾಗಿರತಕ್ಕಂಥ ವಿಷಯ ತಾವೆಲ್ಲರೂ ನೋಡತಕ್ಕಂಥದ್ದು 168 ನೇ ಸೆಕ್ಷನ್. ಇದರಲ್ಲಿ ಏನು ಒಂದು ನಾವು ಈ ಹಳೆಯ ಕಾಯ್ದೆಯಲ್ಲಿ ಈ ಪರಿಷತ್ತಿನ ಅಧ್ಯಕ್ಷರ ಬಗ್ಗೆ ಏನು ಹೇಳಿದ್ದೇವೆ He is the Executive Head ಎಂದು ಹೇಳಿ ನಾವು ಅಲ್ಲಿ ಮಾಡಿದ್ದೇವೆ. ಎಕ್ಸಿಕ್ಯೂಟಿವ್ ಹೆಡ್ ಎನ್ನತಕ್ಕಂಥದ್ದರ ಬಗ್ಗೆ 86 ನೇ ಇಸವಿಯಲ್ಲಿ ಒಂದು ನೋಟೀಫಿಕೇಷನನ್ನು ಮಾಡಿದ್ದಾರೆ. This notification is issued on 1–12–1986. ಇದರ ಪ್ರಕಾರ ಅಧ್ಯಕ್ಷರಿಗೆ ಏನೇನು ಸೌಲಭ್ಯಗಳನ್ನು ಕೊಟ್ಟಿದ್ದಾರೆ, ಏನೇನು ಅಧಿಕಾರವನ್ನು ಕೊಟ್ಟಿದ್ದಾರೆಂಬ ಬಗ್ಗೆ ಇಲ್ಲಿ ಹೇಳಿದ್ದಾರೆ. ನಾವು ಅಧಿಕಾರಕ್ಕೆ ಬಂದಮೇಲೆ ಈ ಅಧಿಕಾರದ ಬಗ್ಗೆ ನಾವು ಏನೂ ತೆಗೆದುಕೊಳ್ಳುವುದಕ್ಕೂ ಹೋಗಿಲ್ಲ ಮತ್ತು ಕೊಡಲಿಕ್ಕೂ ಹೋಗಿಲ್ಲ; ಇದನ್ನು ನಿಮ್ಮ ಸರ್ಕಾರ ಮಾಡಿರತಕ್ಕದ್ದು.

Powers and duties of the Adhyaksha :— Save as otherwise provided under the Act, the Adhyaksha shall have powers to exercise general controlover all officers and servants in or under the Zilla Parishats,; (b) to summon any officer working in or under the Zilla Parishats and call for any information and reports and particulars;(c) to call for any file being dealt with by any of the Departments of the Zilla Parishats and to make noting thereon; (d) to approve of the power of the Chief Secretary outside the District; (e) to sanction Casual leave., Earned Leave or Commutted Leave up to 60 days; (f) to send on deputation Chief Secretary and other officers of the Zilla Parishats including the work to attend the Training Programme (g) to have a copy of the tour programme and Tour Journal of the Chief Secretary and other officers belonging to Group A and B and to offer his remarks thereof; (h) to initiate Confidential Reports of the Chief Secretary and forward to the Government; (i) to accord sanction upto Rs. 50,000/- in emergent cases of flood, famine etc., subject to ratification by the Zilla Parishats (j) to monitor, supervise and review all the department's activities of the Zilla Parishats (k) To delegate by order in writing to the Upadhyaksha any of the powers specified in items (a) to (j). ಇದನ್ನು ಏತಕ್ಕ ಹೇಳುತ್ತೇನೆಂದರೆ, ಜಿಲ್ಲಾ ಪರಿಷತ್ತು ಅಧ್ಯಕ್ಷರಿಗೆ

ಎಕ್ಸಿಕ್ಯೂಟಿವ್ ಪವರ್ಸ್ ಅಂತ ಕಾನೂನಿನಲ್ಲಿದ್ದರೂ ಕೂಡ, ಇದನ್ನು ಅಂದರೆ ಎಕ್ಸಿಕ್ಯೂಟಿವ್ ಪವರ್ಸ್ ಅನ್ನು ಅವರಿಗೆ ಕೊಡಲಿಕ್ಕೆ ಬರುವುದಿಲ್ಲವೆಂದು ಹಿಂದಿನ ಸರ್ಕಾರ ನಿರ್ಧಾರ ತೆಗೆದುಕೊಂಡು ಇಂತಹ ಒಂದು ನೋಟಿಫಿಕೇಶಷನ್ ಹೊರಡಿಸಿದ್ದಾರೆ ಇದರಿಂದ......

Sri J. C. Madhuswamy :- These are all in addition to those powers which are given under the Act. ಅದನ್ನು ಸರ್ಕಾರ ಡಿಲಿಟ್ ಮಾಡಲ್ಲಿಲ್ಲ. ತಾವು ಇದನ್ನು ಓದಬೇಕು, ಸೇವ್ ಅಂಡ್ ಆದರ್ ವೈಸ್ ಅಂತ ಸ್ಪೆಸಿಫಿಕ್ ಆಗಿ ಇದೆ. ಎಕ್ಸಿಕ್ಯೂಟ್‌ವ್ ಡಿಶಿಜನ್ ತೆಗೆದುಕೊಳ್ಳುವಾಗ ಏನು ತಾಪತ್ರಯ ಉದ್ಭವವಾಯಿತೋ, ಅದನ್ನು ಬಗೆಹರಿಸಲು ಮಾಡಲಿಕ್ಕೆ ಇದನ್ನು ಮಾಡಿರುವ ನೋಟಿಫಿಕೇಶನ್ ಹೊರತು ಅವರ ಯಾವ ಅಧಿಕಾರವನ್ನೂ ಕಿತ್ತು ಹಾಕಲಿಲ್ಲ.

Sri B. Basavalingappa :- Under Section 168, ''the Adhyaksha shall be the Executive Head to the Zilla Parishat and shall perform all the duties imposed and exercised and the powers conferred on the Adhyaksha under this Act and the Rules made thereunder''. This is the Rules;

ಏನಾದರೂ ಇದಕ್ಕಿಂತ ಹೆಚ್ಚಿದ್ದರೆ ತಾವು ನನಗೆ ಹೇಳಿ; ನಾನು ಈಗ ಕುಳಿತುಕೊಳ್ಳುತ್ತೇನೆ.

ಶ್ರೀ ಜೆ. ಸಿ. ಮಧುಸ್ವಾಮಿ :- ಪವರ್ಸ್ ಅನ್ನು ಕೊಟ್ಟಿರುವುದನ್ನು ಅದರಲ್ಲಿ ಹೇಳಿ ಆಗಿದೆ. ಅದಕ್ಕೆ ಹೊರತಾಗಿ ಏನು ಕಾಂಟ್ರವರ್ಸೀಸ್ ಅರೈಸ್ ಆಯಿತು, ಆಗ ಹೊರಡಿಸಿದ ನೋಟಿಫಿಕೇಶನ್ ಇದು. ಆಫಿಷಿಯಲ್ಸ್ ಅನ್ನು ಟ್ರಾನ್ಸ್‌ಫರ್ ಮಾಡಬೇಕಾದರೆ ಕಾಂಟ್ರವರ್ಸಿಗಳು ಬಂದು, ಅದು ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್‌ಗೆ ಹೋದ ಮೇಲೆ ಆಗಿರುವಂತಹ ನೋಟಿಫಿಕೇಶನ್ ಇದು.

ಶ್ರೀ ಆರ್. ಎಲ್. ಜಾಲಪ್ಪ :- ಅಧಿಕಾರ ಅವರಿಗೆ ಜಾಸ್ತಿ ಇಲ್ಲವೆಂದು ಈಗ ಸೆಕ್ಷನ್ 271 ರಲ್ಲಿ ಸರ್ವಾಸ್ತ್ರ ಎಲ್ಲವನ್ನು ಪೂರ್ತಿ ನುಂಗಿ ಹಾಕಿ ಬಿಟ್ಟಿದ್ದೀರಿ; ಈ ಅಮೆಂಡ್‌ಮೆಂಟ್‌ನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡಿದ್ದೀರಿ; ಆದರೆ ಮೂಲ ಅಮೆಂಡ್‌ಮೆಂಟ್ ಏನು ಕೊಟ್ಟಿದ್ದೀರಿ, ಅದರಲ್ಲಿ ಸರ್ವಾಸ್ತ್ರ ಎಲ್ಲವನ್ನೂ ನುಂಗಿ ಹಾಕಿ ಬಿಟ್ಟಿದ್ದೀರಿ; ಯಾರಿಗೂ ಅಧಿಕಾರ ಇಲ್ಲದ ಹಾಗೆ ಮಾಡಿದ್ದೀರಿ. ಅವನು ಬಂದು ಸೈನ್ ಹಾಕಿ ಹೋದ ರೆಸಲ್ಯೂಷನ್‌ಗೆ ಸೈನ್ ಹಾಕುವುದು ಮನೆಗೆ ಹೋಗುವುದು, ಅಷ್ಟೆ. ಅದು ಆದರೆ ಆಗಲಿ, ಹೋದರೆ ಹೋಗಲಿ. ಅಷ್ಟು ಅಧಿಕಾರವನ್ನು ಮಾತ್ರ ಕೊಟ್ಟಿದ್ದೀರಿ; ತಮ್ಮ ಪಕ್ಷದವರು ಸ್ವಲ್ಪ ಬುದ್ಧಿವಂತಿಕೆಯನ್ನು ಉಪಯೋಗಿಸಿ ನಾಳೆ ನಾವು ಅಧಿಕಾರಕ್ಕೆ ಬಂದಾಗ ನಮಗೂ ಏನೂ ಅಧಿಕಾರ ಸಿಗುವುದಿಲ್ಲವೆಂದು ಹೇಳಿ ಸ್ವಲ್ಪ ಅಮೆಂಡ್ ಮಾಡಿ 271 ರೊಳಗೆ ಸ್ವಲ್ಪ ಅಮೆಂಡ್ ಮಾಡಿಕೊಟ್ಟಿದ್ದೀರಿ; ಮುಂದೆನೋಡೋಣ.

ಶ್ರೀ ಬಿ. ಬಸವಲಿಂಗಪ್ಪ :- 168 ಸೆಕ್ಷನ್ ಕಲಂ ನಲ್ಲಿ ಅಧಿಕಾರ ಕೊಟ್ಟಿದ್ದಾರೆ. ಎಕ್ಸಿಕ್ಯೂಟಿವ್ ಹೆಡ್ ಅಂತ. ಅದರ ಪ್ರಕಾರ ಹಿಂದಿನ ಸರ್ಕಾರದವರಿಗೆ ಯಾವ ಅಧಿಕಾರವನ್ನು ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳಿ ಕೊಡಲಿಲ್ಲ. ಕೊಡಬಾರದು ಅಂತಲ್ಲ, ಹಿಂದಿನ ಸರ್ಕಾರದವರು ಕೊಡಲಿಲ್ಲ. ಎಂದು ನಾನು ಹೇಳಲಿಲ್ಲ. ಕೊಡಲಿಕ್ಕೆ ಆಗಲಿಲ್ಲ; ಏಕೆಂದರೆ......

ಶ್ರೀ ಆರ್. ಎಲ್. ಜಾಲಪ್ಪ :- ಹಿಂದಿನ ಸರ್ಕಾರ ಕೊಟ್ಟಿದ್ದಕ್ಕಿಂತ ನೀವು ಏನು ಹೆಚ್ಚು ಅಧಿಕಾರ ಕೊಟ್ಟಿದ್ದೀರಿ, ಅದನ್ನು ಸ್ವಲ್ಪ ವಿವರಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ : ಅಷ್ಟು ಬೇಗ ನಿಮಗೆ ಸಂಶಯ ಬರುತ್ತದಾ ?

ಶ್ರೀ ಆರ್. ಎಲ್. ಜಾಲಪ್ಪ :- ಸಂಶಯ ಇಲ್ಲ, ಗ್ಯಾರಂಟಿ ಆಗಿದೆ. ನೀವು ಏನೂ ಮಾಡುವುದಕೆ ಸಾಧ್ಯವಿಲ್ಲ. ಇನ್ನು ಸಂಶಯ ಏಕೆ ಬರುತ್ತದೆ. ಒಂದು ಮಾತನ್ನು ಹೇಳಿದರೆ ತಾವು ತಪ್ಪು ತಿಳಿದುಕೊಳ್ಳಬಾರದು. ಏನೆಂದರೆ ತಾವು ದಲಿತ ವರ್ಗಕ್ಕೆ ಸೇರಿದವರು; ನೀವು ದಲಿತರನ್ನು ಕಾಪಾಡುತ್ತೀರೆಂದು ನಾವು ಎಕ್ಸ್‌ಪೆಕ್. ಮಾಡಿದ್ದೆವು. ಆದರೆ......

ಶ್ರೀ ಬಿ. ಬಸವಲಿಂಗಪ್ಪ :- ನಾನು ದಲಿತವರ್ಗಕ್ಕೆ ಸೇರಿದವನಲ್ಲ. ನಾನು ಎಲ್ಲಾ ವರ್ಗಕ್ಕೆ ಸೇರಿದವನು ಮಾನವನಾಗಿ ಹುಟ್ಟಿದ್ದೇನೆ. ಇಂತಹ ಒಂದು ಮಾತನ್ನು ನನಗೆ ಹೇಳಬೇಡಿ.

ಶ್ರೀ ಆರ್. ಎಲ್. ಜಾಲಪ್ಪ :- ದಯವಿಟ್ಟು ಕ್ಷಮಿಸಿ. ನಾನು ಹೇಳಿದ್ದು ನಿಮಗೆ ಅಪಮಾನ ಮಾಡ್ಬ ಬೇಕೆಂದು ಅಲ್ಲ. ಆ ವಿಷಯ ಅಲ್ಲವೆ ಅಲ್ಲ. ತಾವು ಹುಟ್ಟಿದ್ದು ದಲಿತವರ್ಗದಲ್ಲಿ; ಇವೊತ್ತು ಮಾನವನಾಗಿದ್ದೀರಿ. ಸಂತೋಷ, ಮಾನವರಾಗಬೇಕು. ತಾವು ಮಾನವರಾಗಿಆದರೂ ಪರೀಕ್ಷೆ ಮಾಡಿ ಸ್ವಾಮಿ: ತಾವು ಎಷ್ಟು ಪವರ್ಸ್ ಕೊಟ್ಟಿದ್ದೀರಿ ಎನ್ನುವುದನ್ನು ಹೇಳಿ. ನಮ್ಮ ಜನರಿಗೆ ಇಂಗ್ಲೀಷ್‌ನವರು ಏನು ಅಪಮಾನ ಮಾಡುತ್ತಿದ್ದರು, ಅದಕ್ಕಿಂತಲೂ ಹೆಚ್ಚಿನ ಅಪಮಾನ ಗ್ರಾಮಾಂತರ ಪ್ರದೇಶದ ಜನರಿಗೆ ಮಾಡುತ್ತಿದ್ದೀರಿ. ಇದನ್ನು ನಾವು ಮಾನವರಿಂದ ಎಕ್ಸ್‌ಪೆಕ್ಟ್ ಮಾಡಬಹುದೇ ಎನ್ನುವ ಬಗ್ಗೆ ತಾವೇ ಯೋಚನೆ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ :- ಆಯಿತು; ಶ್ರೀಮಾನ್ ಜಾಲಪ್ಪನವರು ನಾನು ಹೇಳಿದ್ದನ್ನು ಮೊದಲಿನಿಂದಲೂ ತಾವು ಫಾಲೋ ಮಾಡಿದ್ದರೆ ಈ ಮಾತನ್ನು ಆಡುತ್ತಾ ಇರಲಿಲ್ಲ. ರಾಜ್ಯಾಂಗದ 40ನೇ ಒಂದು ಕಲಂ ಏನಿದೆ, ಅದನ್ನು ತಿದ್ದುಪಡಿ ಮಾಡದೇ ಹೋದರೆ ನೀವು ಅಲ್ಲ, ನಿಮ್ಮ ಹಿಂದಿನ ಸರ್ಕಾರ ಅಲ್ಲ, ನನ್ನ ಸರ್ಕಾರ ಕೂಡ ಕೊಡಲಿಕ್ಕೆ ಆಗುವುದಿಲ್ಲ. ಅದಕ್ಕೆ ನಾನು ಹೇಳುತ್ತಿದ್ದೇನೆ, ತಿದ್ದುಪಡಿ ಬರುವವರೆಗೂ ಕೂಡ ಯಾರು ರಾಜ್ಯಮಟ್ಟದ ಕೆಳಭಾಗದಲ್ಲಿರತಕ್ಕ ಸಂಸ್ಥೆಗಳು ಇನಿವೆ, ಅಂತಹವರಿಗೆ ಪವರ್ ಆಫ್ sovereignty cannot be given. It cannot percolate below the state level. ಅದಕ್ಕೆ ನಾನು ಹೇಳುತ್ತಿದ್ದೇನೆ. ತಾವು ಕೊಡಲಿಲ್ಲ ಎಂದು ನಾನು ಹೇಳುತ್ತಿಲ್ಲ. ಕೊಡಲಿಕ್ಕೆ ಆಗುವುದಿಲ್ಲ, ಆದ್ದರಿಂದ ಆಗಲಿಲ್ಲ. ಏಕೆಂದರೆ ಈ ಒಂದು ತಿದ್ದುಪಡಿ ಬರಲೇಬೇಕಾಗಿತ್ತು. ಈಗ ನಾವು ಏನು ಕೊಟ್ಟಿದ್ದೇವೆ ಎಂಬುದು ತಾವು ಕೇಳಿದರೆ ಅದರ ಹತ್ತರಷ್ಟು ಕೊಟ್ಟಿದ್ದೇವೆ.

Section 168 : The following section shall be substituted namely : **Powers and duties of the Adhyaksha :** Adhyaksha shall convene, preside and conduct meeting of the Zilla Parishats (b) have access to the records to the records of Zilla Parishats and Abhivrudhi Samithis. ಅದು ಈಗ ಅಭಿವೃದ್ಧಿ ಮಂಡಲ್ ಆಗಿದೆ.

(c) to discharge all duties imposed and exercise all the powers conforred on him by and under this Act and perform such functions entrusted to him by the Government from time to time;

(d) Watch over the financial and executive adminitsration of the Zilla Parishats Abhivrudhi Samithi and place before the Zilla Abhivrudhi Samithi all questions connected therewith which shall appear to him to require him orders.

(e) Exercise of such administrative, supervision and co-ordination over the Chief Executive Officer for securing implemention of the resolutions of the Zilla Abhivrudhi Mandali or of the Standing Committees which are not in consistence with the provisions of this Act or in general or specific directions issued by the Government or the Commissioner

(f) For power to accord sanction upto Rs. 50,000/- for the purpose of providing immediately relief to those who are affected by flood, famine or fire in the District, provided that the Adhyaksha shall get the according of such sanction ratified by Zilla Parishat Abhivrudhi Samithi in the next meeting.

ಇಷ್ಟಕ್ಕಿಂತ ಜಾಸ್ತಿ ಕೊಟ್ಟಿದ್ದೇವೆ. ಮತ್ತೆ ಜನರಲ್ ಸ್ಟ್ಯಾಂಡಿಂಗ್ ಕಮಿಟಿ ಅಂತ ಮಾಡಿದ್ದೀರಿ. ಅವರು ಯಾರೂ ಅಧ್ಯಕ್ಷರಾಗಿದ್ದಿಲ್ಲ, ಈಗ ಅಧ್ಯಕ್ಷರನ್ನು ಮಾಡಿದ್ದೇವೆ. ಅವರು ಎಲ್ಲಾ ವಿಷಯಗಳನ್ನು ಚರ್ಚೆ ಮಾಡಬಹುದು. ಅಲ್ಲಿ ಅವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ ಆದ್ದರಿಂದ ನಾನು ಹೇಳುತ್ತಿದ್ದೇನೆ, ತಾವು ಕೊಡಲಿಲ್ಲ ಎಂದು ನಾನು ಹೇಳುತ್ತಿಲ್ಲ.

Sri R. L. Jalappa :- To watch over the financial operations and not to control the financial operations. ತಾವು ಓದಿ.

ಶ್ರೀ ಬಿ. ಬಸವಲಿಂಗಪ್ಪ :- ದಯಮಾಡಿ ನಾನು ಸ್ವಲ್ಪ ಹೇಳುವುದು ಕೇಳಿಬಿಟ್ಟರೆ ನನಗೆ ಬಹಳ ಸಂತೋಷವಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ಅವರು ಕೇಳಬೇಕು ಅಂತಲೇ ಅವರು ಅಲ್ಲಿ ಕುಳಿತಿರುವುದು. ಈಗ ನೀವು ಜಿಲ್ಲಾ ಪರಿಷತ್ ಬಿಟ್ಟು ಅಭಿವೃದ್ಧಿ ಎಂದು ಏನು ಮಾಡಿದ್ದೀರಿ, ಆ ಬಗ್ಗೆ ಬೋರ್ಡ್ ಬರೆಯಲಿಕ್ಕೆ ಎರಡು ಕೋಟಿ ರೂಪಾಯಿ ಖರ್ಚಾಗುತ್ತದೆ. ಅದರಿಂದ ಏನು ಸಾಧನೆಯಾಗುತ್ತದೆ ಸ್ವಾಮಿ. ಒಂದು ಕಡೆ ಖರ್ಚು ಮಾಡಲು ಹಣ ಇಲ್ಲ ಎಂದು ಹೇಳುತ್ತೀರಿ.

ಶ್ರೀ ಬಿ. ಹೆಚ್. ಬನ್ನಿಕೋಡ್ :- ಹೆಸರು ತಿದ್ದುಪಡಿ ಮಾಡುವುದರಲ್ಲಿ ಏನಿತ್ತು ?

ಶ್ರೀ ಬಿ. ಬಸವಲಿಂಗಪ್ಪ :- ಅದು ಹೊಸದೇನೂ ಅಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ :- ತಾವು ಬರಗಾಲ ಇದೆ ಎಂದು ಹೇಳುತ್ತೀರಿ, ಅದರ ಜೊತೆಯಲ್ಲೇ ಹಣದ ತೊಂದರೆ ಇದೆ ಎಂದು ಹೇಳುತ್ತೀರಿ. ಅದರ ಜೊತೆಗೆ ಮತ್ತಷ್ಟು ಹಣ ವ್ಯಯ ಮಾಡಲಿಕ್ಕೆ ತಾವು ಈ ಹೆಸರು ಬೇರೆ ಬದಲಿ ಮಾಡಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ :– ಸೆಕ್ಷನ್ 166 ರಲ್ಲಿ ಅಲೋಯನ್ಸ್ ಅಂಡ್ ಸ್ಯಾಲರೀಸ್ ಬಗ್ಗೆ ವಿಶ್ಲೇಷಣೆ ಇದೆ. ಅಲ್ಲಿ ಅಧ್ಯಕ್ಷರಿಗೆ ಸ್ಟೇಟ್ ಮಿನಿಸ್ಟರ್ ಎಂದು ಕರೆದುಬಿಟ್ಟರು. ಉಪಾಧ್ಯಕ್ಷರಿಗೆ ಡೆಪ್ಯುಟಿ ಮಿನಿಸ್ಟರ್ ಎಂದು ಮಾಡಿದರು. ಇದು ಕೊನೆಗೆ ಎಲ್ಲಿಗೆ ಬಂತು ಎಂದರೆ, ಅವರು ತಾವೇ ಮಂತ್ರಿಗಳು ಎಂದು ತಿಳಿದು ಕೊಂಡರು. ನಾವು ಮಾಡಿದ ಅರ್ಥವೇ ಬೇರೆ. ಸ್ಯಾಲರೀಸ್ ಮತ್ತು ಅಲೋಯನ್ಸ್‌ಸ್‌ಗೋಸ್ಕರ ನಾವು ಮಾಡಿದ್ದು. ಆದರೆ ಅವರು ತಾವೇ ಮಂತ್ರಿಗಳು ಎಂದು ತಿಳಿದುಕೊಂಡರು. ಯಾರಾದರೂ ಮಂತ್ರಿಗಳು ಹೋದರೆ, ನಾನೇ ಮಂತ್ರಿ ಕಣೋ ಹೋಗೋ ಎಂದು ಹೇಳುವುದಕ್ಕೆ ಶುರುಮಾಡಿದರು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ನೀವು ಏನು ಮಾಡಿದಿರಿ ?

ಶ್ರೀ ಬಿ. ಬಸವಲಿಂಗಪ್ಪ :– ಅವರು ಆದಮೇಲೆ ನೀವು ಮಾಡಿದ್ದು ನನಗೆ ಗೊತ್ತಿದೆ. ಸ್ಟೇಟ್ ಮಿನಿಸ್ಟರ್ ಡೆಪ್ಯುಟಿ ಮಿನಿಸ್ಟರ್ ಎಂದು ಏನಿತ್ತು ಅದನ್ನು ಈಗ ತೆಗೆದುಹಾಕಿದ್ದೇವೆ. ಅವರಿಗೆ ಸ್ಯಾಲರೀಸ್ ಬಗ್ಗೆ, ಕೆಲಸ ಗಳನ್ನು ಮಾಡುವುದಕ್ಕೆ ಏನೇನು ಅನುಕೂಲಗಳು ಬೇಕೋ ಅದನ್ನೆಲ್ಲಾ ಒದಗಿಸಿಕೊಡಲಿಕ್ಕೆ ಇದರಲ್ಲಿ ಅಳವಡಿ-ಸಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ :– ಸಂಬಳ ಮುಖ್ಯವಲ್ಲ ಸ್ವಾಮಿ. ನಿಮ್ಮ ಸಂಬಳ ಯಾರಿಗೆ ಬೇಕು. ಸಂಬಳಕ್ಕೆ ಯಾರಾದರೂ ಬಂದು ಕೆಲಸ ಮಾಡುತ್ತಾರೆಂದು ನೀವು ತಿಳಿದುಕೊಳ್ಳಬೇಡಿ. ಹೊಟ್ಟೆಗೆ ಹಿಟ್ಟು ಹಾಕುವುದಿಲ್ಲ, ಸ್ವಾತಂತ್ರ್ಯ ಕೊಡುವುದಿಲ್ಲ ಮಿಕ್ಕಿದ್ದೆಲ್ಲಾ ಕೊಟ್ಟು ಗಿಣಿ ಸಾಕಿದ ಹಾಗೆ ಸಾಕುತ್ತೇನೆಂದು ಹೇಳಿ ಪಂಜರದಲ್ಲಿ ಇಟ್ಟಿರುವಂತೆ ಇಟ್ಟು ಸಾಕುವುದಲ್ಲ ಸ್ವಾಮಿ. ನಿಮ್ಮ ಸಂಬಳ ಯಾರಿಗೆ ಬೇಕು ?

ಶ್ರೀ ಬಿ. ಬಸವಲಿಂಗಪ್ಪ :– ಇದು ಕಾಂಗ್ರೆಸ್ ಪಕ್ಷದವರಿಗೂ ಅನ್ವಯಿಸುತ್ತದೆ. ನಿಮ್ಮ ಪಕ್ಷದವರಿಗೂ ಅನ್ವಯಿಸುತ್ತದೆ. ಯಡಿಯೂರಪ್ಪನವರ ಪಕ್ಷದವರಿಗೂ ಅನ್ವಯಿಸುತ್ತದೆ. ನಮಗೋಸ್ಕರ ಅಥವಾ ನಿಮಗೋಸ್ಕರ ಮಾಡತಕ್ಕದ್ದಲ್ಲ.

ಶ್ರೀ ಆರ್. ಎಲ್. ಜಾಲಪ್ಪ :– ನಮ್ಮ ಪಕ್ಷ ಎಂದು ನಾನು ಹೇಳುತ್ತಿಲ್ಲ. ನಮಗೆ ಗೊತ್ತಿದೆ, ಮುಂದಿನ ವರ್ಷ ನಿಮ್ಮ ಪಕ್ಷ ಅಧಿಕಾರಕ್ಕೆ ಬಂದರೂ ಬರಬಹುದು. ಆದರೆ ಅವರ ಗತಿ ಏನು ? ಪೊಪೆಟ್ ಆಗಿರಬೇಕೆ ?

ಉಪಾಧ್ಯಕ್ಷಿಣಿಯವರು :– ಮಾನ್ಯ ಜಾಲಪ್ಪನವರೇ, ಮೊದಲು ಅವರು ಮಾತನಾಡಿ ಮುಗಿಸಲಿ.

ಶ್ರೀ ಬಿ. ಬಸವಲಿಂಗಪ್ಪ :– ನಮ್ಮ ಅವರ ಸಂಬಂಧ ಬೇರೆ. ಆದ್ದರಿಂದ ಹೇಳುತ್ತಿದ್ದಾರೆ. 3–4 ವರ್ಷ ಗಳಿಂದ ಜಿಲ್ಲಾ ಪರಿಷತ್ತಿನವರು ಅಧಿಕಾರವನ್ನು ಮಾಡುತ್ತಿದ್ದಾರೆ. ಅವರು 309 ನೇ ಸೆಕ್ಷನ್ ಪ್ರಕಾರ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್‌ನ್ನು, ಆಡಿಟ್ ರಿಪೋರ್ಟ್‌ನ್ನು ಕಳುಹಿಸಿಕೊಡಬೇಕು. ಆದರೆ ಇದುವರೆಗೆ ಯಾರ್‍ಯಾರು ಕಳುಹಿಸಿದ್ದಾರೆ, ಯಾರ್‍ಯಾರು ಕಳುಹಿಸಿಲ್ಲ ಎಂಬುದನ್ನು ಓದಿ ಹೇಳುತ್ತೇನೆ. :

Statement showing the list of Zilla Parishats from whom Annual Administrative Reports have not been received for the period as indicated against each District. 1987–88 ರಲ್ಲಿ ಬೆಂಗಳೂರು, ಕೋಲಾರ, ತುಮಕೂರು, ಶಿವಮೊಗ್ಗಾ, ಮೈಸೂರು, ಮಂಡ್ಯ, ದಕ್ಷಿಣಕನ್ನಡ ಜಿಲ್ಲೆ, ಕೊಡಗು, ಹಾಸನ, ಚಿಕ್ಕಮಗಳೂರು, ಬೆಳಗಾಂ, ಉತ್ತರ ಕನ್ನಡ ಜಿಲ್ಲೆ, ಗುಲ್ಬರ್ಗಾ, ಬೀದರ್, ಬಳ್ಳಾರಿ, ರಾಯಚೂರು ಈ ಜಿಲ್ಲೆಗಳವರು ಯಾರೂ ಕೂಡ ಕಳುಹಿಸಿಲ್ಲ. ಕೇವಲ 3 ಜಿಲ್ಲೆಯವರು ಮಾತ್ರ ಕಳುಹಿಸಿ ಕೊಟ್ಟಿದ್ದಾರೆ. ಇನ್ನು 88–89 ನೇ ಸಾಲಿನಲ್ಲಿ ನೋಡಿದರೆ, ಹಿಂದಿನ ವರ್ಷದ್ದನ್ನೇ ಕಳುಹಿಸದಿರುವಾಗ ಮುಂದಿನ ವರ್ಷದ್ದನ್ನು ಅವರು ಕಳುಹಿಸುವುದಕ್ಕಾಗುವುದಿಲ್ಲ. ಆಮೇಲೆ 1989–90 ನೇ ಸಾಲಿಗೆ ಸಂಬಂಧಪಟ್ಟಂತೆ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ಸ್ ಇಲ್ಲವೇ ಇಲ್ಲ. ಅವರಿಗೆ ನಾವು ಜಿಲ್ಲಾಧಿಕಾರವನ್ನು ಕೊಡಬೇಕು, ಸಾಕಷ್ಟು ಅಧಿಕಾರ ಕೊಡೋಣ. ಆದರೆ ಅವರು ತಮ್ಮ ಕರ್ತವ್ಯವನ್ನು ಏನು ಮಾಡಬೇಕೋ ಅದನ್ನು ಮಾಡಬೇಕು. 1 ವರ್ಷಕ್ಕೆ 1200 ಕೋಟಿ ರೂ. ಗಳನ್ನು ಅವರಿಗೆ ನಾವು ಏನು ಕೊಡುತ್ತಿದ್ದೇವೆ. ಅದರಲ್ಲಿ ಸುಮಾರು600 ಕೋಟಿ ರೂ. ಸಂಬಳಕ್ಕೆ ಹೋಗುತ್ತದೆಂದು ಇಟ್ಟುಕೊಳ್ಳೋಣ. ಆದರೆ ಸುಮಾರು 700–800 ಕೋಟಿ ರೂ. ಗಳನ್ನು ಖರ್ಚು ಮಾಡುವುದಕ್ಕೆ ಅವರಿಗೆ ಕೊಟ್ಟಿದ್ದೇವೆ. ಇದಕ್ಕೂ ಅವರು ಲೆಕ್ಕವನ್ನು ಕೊಡುವುದಿಲ್ಲ, ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್‌ನ್ನು ಕೊಡುವುದಿಲ್ಲ ಎಂದರೆ ಈ ಸಭೆ ಮೆಚ್ಚುತ್ತದೆಯೋ ? ಈ ಸಭೆ ಒಪ್ಪಿ ಕೊಳ್ಳುವುದಕ್ಕೆ ಸಾಧ್ಯವೇ ? ಅಲ್ಲಿನ ಅಡ್ಮಿನಿಸ್ಟ್ರೇಟಿವ್ ಬಗ್ಗೆ ಕಂಟ್ರೋಲ್ ಬೇಡವೇ ? ನಾವು ಈ ಮಾತನ್ನು ನಾನು ಚುಚ್ಚಿ ಚುಚ್ಚಿ ಹೇಳಿದರೆ ನೀವು ಏತಕ್ಕೆ ಸಂಕಟಪಡುತ್ತಿದ್ದೀರಿ ?

ಶ್ರೀ ಕೆ. ಹೆಚ್. ರಂಗನಾಥ್ :– ಖರ್ಚು ಮಾಡದೇ ಇರತಕ್ಕದ್ದೂ ಕೂಡ ಒಂದು ರೀತಿಯಲ್ಲಿ ಸಹಾಯ ಮಾಡಿದಂತಾಗಿದೆ. ಇಲ್ಲದಿದ್ದರೆ ಇಷ್ಟೊತ್ತಿಗೆ ಎಲ್ಲಾ ಹೋಗಿಬಿಡುತ್ತಿತ್ತು.

5–30 ಪಿ. ಎಂ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಹಣ ಖರ್ಚು ಮಾಡಿದ್ದಕ್ಕೆ ಜಿಲ್ಲಾ ಪರಿಷತ್ತಿನವರು ಸರ್ಕಾರಕ್ಕೆ ವರದಿಯನ್ನು ಕೊಟ್ಟಿಲ್ಲವೆಂದು ತಾವು ಹೇಳುತ್ತಿದ್ದೀರಿ. ಆದರೆ ತಾವು ನೋಡಬೇಕು; ಧಾರವಾಡ ಜಿಲ್ಲಾ ಪರಿಷತ್‌ನಲ್ಲಿ ಎಲ್ಲ ಸದಸ್ಯರೂ ಸೇರಿ ಸರ್ವಸಮ್ಮತವಾಗಿ ಮಿಲಿಯನ್ ವೆಲ್ಸ್ ಸ್ಕೀಮ್‌ನಲ್ಲಿ 6 ಲಕ್ಷ ರೂಪಾಯಿಗಳ ಹಣ ಅಪವ್ಯಯವಾಗಿದೆ, ಈ ಅಪವ್ಯಯಕ್ಕೆ ಕಾರಣರಾದವರನ್ನು ನಾವು ಸಸ್ಪೆಂಡ್‌ನಲ್ಲಿಟ್ಟು, ಉಳಿದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು 8 ತಿಂಗಳ ಹಿಂದೆಯೇ ನಾವು ಹೇಳಿದರೂ ಸರ್ಕಾರದವರು ಇದುವರೆಗೂ ಏನು ಕ್ರಮ ಕೈಕೊಂಡಿಲ್ಲ. ಇದಕ್ಕೆ ನಾವು ಏನು ಹೇಳಬೇಕು. ಎನ್‌ಕ್ವಯರಿಮಾಡಿ, 6 ಲಕ್ಷ ರೂಪಾಯಿಗಳು ಅಪವ್ಯಯವಾಗಿದೆ, ಇದರಿಂದ ಜಿಲ್ಲಾ ಪರಿಷತ್ತಿಗೆ ಅನ್ಯಾಯವಾಗಿದೆ ಎಂದು ಸರ್ಕಾರಕ್ಕೆ ದೂರು ಕೊಟ್ಟರೆ ತನಿಖೆ ಮಾಡಲಿಲ್ಲ. ಅಂತಹವರಿಗೆ ಬಡ್ತಿ ಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಕೃಷಿ ಮಂತ್ರಿ ಆಗಿದ್ದಾಗ ಮನವಿಯನ್ನು ಕೊಟ್ಟಿದ್ದಾಯಿತು; ಇಲ್ಲಿಯವರೆವಿಗೂ ಏನು ಕ್ರಮ ತೆಗೆದುಕೊಂಡಿಲ್ಲ. ಇಲ್ಲಿರತಕ್ಕಂಥ ಲೋಪದೋಷಗಳನ್ನು ನೋಡಿದರೆ ಅವರು ಮಾಡಿದ್ದೇ ಎಷ್ಟೋ ವಾಸಿ ಎಂದು ಹೇಳಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ :– ತಾವು ಹೇಳಿದಿರಿ; ಅದಕ್ಕೆ ಧನ್ಯವಾದಗಳು. ಆಡಿಟೆಡ್ ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್‌ನ್ನು ಇದುವರೆವಿಗೂ ಅಂದರೆ ನಾಲ್ಕು ವರ್ಷಗಳು ಕಳೆದರೂ ಕೊಟ್ಟಿಲ್ಲ. 3200 ಕೋಟಿ ರೂಪಾಯಿಗಳ ಲೆಕ್ಕವನ್ನು ಅವರು ಕೊಟ್ಟಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ :– ತಪ್ಪಾಗಿರಬಹುದು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಮೂಗಿಗೆ ಉಸಿರಾಡುವುದಕ್ಕೆ ಕಷ್ಟವಾದರೆ ಮೂಗಿಗೆ ಔಷಧಿಯನ್ನು ಕೊಡಬೇಕೇ ಹೊರತು ಮೂಗನ್ನೇ ಕೊಯ್ಯಲು ಬಯಸುತ್ತೀರಾ ?

ಒಬ್ಬರು ಮಾನ್ಯ ಸದಸ್ಯರು :– ಔಷಧಿ ಕೊಟ್ಟಿಲ್ಲ ಇದು ಗುಣವಾಗುವುದಿಲ್ಲ ಆಪರೇಷನ್ನೇ ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ :– ಕೆಲವು ರೋಗಿಗಳಿಗೆ ಆಪರೇಷನ್ನು ಮಾಡಬೇಕಾಗುತ್ತದೆ, ಕೆಲವು ರೋಗಿಗಳಿಗೆ ಔಷಧಿಯನ್ನು ಕೊಡಬೇಕಾಗುತ್ತದೆ. ಈಗ ನಾವು ಏನು ಮಾಡಬೇಕೆಂದು ತಾವು ಸಲಹೆಯನ್ನು ಕೊಟ್ಟಿದ್ದಕ್ಕೆ ನಾನು ತಮಗೆ ಅಭಿನಂದಿಸುತ್ತೇನೆ. ನಮ್ಮ ವರದಿ ಪ್ರಕಾರ ಜಿಲ್ಲಾ ಪರಿಷತ್ತಿಗೆ ಕೊಟ್ಟಂಥ ಹಣ ದುರುಪಯೋಗವಾಗುತ್ತಿದೆ. ಕಡಿವಾಣವಿಲ್ಲದೆ ಅಪವ್ಯಯವಾಗುತ್ತಿದೆ. ಹಣವನ್ನು ನಿಗದಿಯಾಗಿರತಕ್ಕಂಥ ಬಾಬುಗಳಲ್ಲಿ ಖರ್ಚು ಮಾಡದೆ ವ್ಯಯ ಮಾಡಿರತಕ್ಕಂಥದ್ದನ್ನು ನೋಡುತ್ತಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ :– ಈಗ ಪಿ. ಎ. ಸಿ. ಕಮಿಟಿಯವರು ರಾಷ್ಟ್ರಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಆಗಿರುವ ಅಲಿಗೇಷನ್ ಬಗ್ಗೆ ಕೊಟ್ಟಿರುವ ವರದಿಗಳೆಲ್ಲಾ ಕ್ಲೀಯರ್ ಆಗಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಸದಸ್ಯರು ರಾಷ್ಟ್ರದ ಪ್ರಶ್ನೆ ಕೇಳುತ್ತಿದ್ದಾರೆ. ನಾನು ರಾಷ್ಟ್ರಮಟ್ಟದಲ್ಲಿ ಅಧಿಕಾರಕ್ಕೆ ಬಂದರೆ ನಾನು ಉತ್ತರ ಕೊಡುತ್ತೇನೆ. 3,200 ಕೋಟಿ ರೂಪಾಯಿಗಳನ್ನು ನಾಲ್ಕು ವರ್ಷಗಳಲ್ಲಿ ಜಿಲ್ಲಾ ಪರಿಷತ್ತಿನವರು ಏನು ಖರ್ಚು ಮಾಡಿರುತ್ತಾರೆ, ಅದರಲ್ಲಿ 2400 ಕೋಟಿ ರೂಪಾಯಿಗಳು ಸಂಬಳಕ್ಕೆ ಹೋಗಿದೆ. ಈ ಹಣದ ಬಗ್ಗೆ ನಾವು ಲೆಕ್ಕ ಕೇಳಬಾರದೆ ? ಅವರು ಲೆಕ್ಕ ಕೊಡಬಾರದೇ ? ನಾನು ಪ್ರಶ್ನೆ ಕೇಳುತ್ತಿದ್ದೇನೆ; ಈ ಸದನದಲ್ಲಿ ಮಾತನಾಡತಕ್ಕಂಥದ್ದು, ಈ ಕರ್ನಾಟಕ ರಾಜ್ಯದ ಜನತೆಯ ಪರವಾಗಿ ಮಾತನಾಡುತ್ತಿದ್ದೇವೆ. ಯಾರಿಗೆ ಜವಾಬ್ದಾರಿಯನ್ನು ವಹಿಸಿರುತ್ತೇವೆ, ಅವರು ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕು ಎಲ್ಲರೂ ಮೆಚ್ಚುವಂಥ ರೀತಿಯಲ್ಲಿ ನಿರ್ವಹಿಸಬೇಕು. ಆ ರೀತಿ ಮಾಡದಿರುವುದರಿಂದ ಕಡಿವಾಣವನ್ನು ಹಾಕಬೇಕಾಗಿದೆ. ದಯವಿಟ್ಟು ತಮ್ಮೆಲ್ಲರಲ್ಲೂ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ ಕಡಿವಾಣ ಹಾಕಲಿಕ್ಕೆ ಎಷ್ಟು ಬೇಕೋ, ಅಷ್ಟೂ ತಿದ್ದುಪಡಿಗಳನ್ನು ನಾನು ತಂದಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ :– ಹಣ ದುರುಪಯೋಗ ಮಾಡಿದ್ದಾರೆಂದು ತಾವು ಅವರ ಬಗ್ಗೆ ಹೇಳುತ್ತಿದ್ದೀರಿ. ತಾವು ಏನು ಈ ಸಭೆಯ ಮೂಲಕ ಕರ್ನಾಟಕದ ಜನತೆಗೆ ಹೇಳುತ್ತಿದ್ದೀರಿ, ಅದನ್ನು ಕರ್ನಾಟಕದ ಜನತೆ ಸರಿಯಾಗಿ ತಿಳಿದುಕೊಳ್ಳಬೇಕಾಗಿದೆ. ಆದ್ದರಿಂದ ಈ 3,200 ಕೋಟಿ ರೂಪಾಯಿಗಳು ದುರುಪಯೋಗ ಯಾವ ರೀತಿ ಆಗಿದೆ ಎನ್ನುವುದನ್ನು ದಯವಿಟ್ಟು ಕರ್ನಾಟಕದ ಜನತೆಗೆ ಹೇಳಿ.

ಶ್ರೀ ಬಿ. ಬಸವಲಿಂಗಪ್ಪ :– ಅವರು ಆಡಿಟ್ ರಿಪೋರ್ಟ್ ಕಳುಹಿಸಿಕೊಟ್ಟಿಲ್ಲವೆಂದು ನಾನು ಹೇಳುತ್ತಿದ್ದೇನೆ. ಇನ್ನು ಯಾವ ರೀತಿ ದುರುಪಯೋಗದ ಬಗ್ಗೆ ಹೇಳಲಿ.

ಶ್ರೀ ಆರ್. ಎಲ್. ಜಾಲಪ್ಪ :– ತನಿಖೆ ಇಲ್ಲದೆ, ಆಧಾರವಿಲ್ಲದೆ ದುರುಪಯೋಗ ಆಗಿದೆ ಎಂದು ಹೇಳಲು ಹೇಗೆ ಸಾಧ್ಯವಾಗುತ್ತದೆ; ಅಲಿಗೇಷನ್ ಮಾಡಲು ಏನಾದರೂ ಆಧಾರ ಬೇಕು. ..

ಶ್ರೀ ಬಿ. ಬಸವಲಿಂಗಪ್ಪ :– ನಾನು ತನಿಖೆ ಮಾಡಿಯೇ ಹೇಳುತ್ತಿದ್ದೇನೆ. ದಯವಿಟ್ಟು ತಾವು ಕುಳಿತು ಕೊಳ್ಳಿ. ಕ್ರಮವಿಲ್ಲದೆ. ಖರಿದಿ ಮಾಡಿರುತ್ತಾರೆ. ನಿಯಮಕ್ಕೆ ವಿರುದ್ಧವಾಗಿ ಖರೀದಿ ಮಾಡಿದ್ದಾರೆ. ಬೆಳಗಾಂವ ಜಿಲ್ಲಾ ಪರಿಷತ್ತಿನಲ್ಲಿ ಸುಮಾರು 20 ಲಕ್ಷ ರೂಪಾಯಿಗಳ ಪಂಪ್‌ಗಳು ಬಿದ್ದಿವೆ ಅವನ್ನು ಉಪಯೋಗಿಸು ವಂತೆಯೂ ಇಲ್ಲ, ಬಿಡುವಂತೆಯೂ ಇಲ್ಲ. ಇದನ್ನು ಯಾರು ಖರೀದಿ ಮಾಡಿದರು? ಯಾರು ಅದಕ್ಕೆ ಅವಕಾಶ ಕೊಟ್ಟರು ? ಸಾರ್ವಜನಿಕ ಹಣವನ್ನು ಖರ್ಚು ಮಾಡುವುದಕ್ಕೆ ಪ್ರಜ್ಞೆ ಬೇಡವೆ ? ತಾವು ಅಧಿಕಾರ ತೆಗೆದು ಕೊಂಡು ಕೆಲಸ ಮಾಡಿ; ಜನಸೇವೆ ಮಾಡಿ. ಆದರೆ ಕೊಟ್ಟ ಹಣಕ್ಕೆ ಲೆಕ್ಕ ಕೊಡಿ. ಆಗ ನಿಜವಾದ ಸೇವೆ ಮಾಡಿ ದಂತಾಗುತ್ತದೆ. ಲೆಕ್ಕ ಕೊಡುವ ಹಾಗೆ ಇಲ್ಲ, ಏನು ಬೇಕಾದರೂ ಮಾಡಬಹುದು ಎಂದರೆ ಅದು ಸರಿಯಲ್ಲ. ಉದಾಹರಣೆಗೆ ಗುಲ್ಬರ್ಗವನ್ನು ತೆಗೆದುಕೊಳ್ಳಿ. ಅಲ್ಲಿನ ಅಧ್ಯಕ್ಷರು ಎಲ್ಲ ಸೇರಿಕೊಂಡು ಮೊನ್ನೆ 1 ಕೋಟಿ 57 ಲಕ್ಷ ರೂಪಾಯಿಗಳ ಖರೀದಿ ಮಾಡಿದ್ದಾರೆ.

ಒಬ್ಬರು ಮಾನ್ಯ ಸದಸ್ಯರು:– ಅವರಿಗೆ ರೆಸ್‌ಕ್ಯೂ ಮಾಡುತ್ತಿದ್ದೀರಾ ? ಗುಲ್ಬರ್ಗ ಬೆಳಗಾಂ ಅಧ್ಯಕ್ಷರು...

ಉಪಾಧ್ಯಕ್ಷಿಣಿಯವರು :– ಅವರು ಪೂರ್ತಿ ಮಾತನಾಡಲಿ. ತಾವು ಕುಳಿತುಕೊಳ್ಳಿ.

ಒಬ್ಬರು ಮಾನ್ಯ ಸದಸ್ಯರು :– ನಾನು ಏನು ಪ್ರಶ್ನೆ ಕೇಳಿದೆ ಅದನ್ನು ಬರೆದುಕೊಳ್ಳಿ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ನಾನು ಕ್ರಿಯಾಲೋಪ ಎತ್ತುತ್ತೇನೆ. ಈ ಸದನದಲ್ಲಿ ಇಲ್ಲದವರ ಮೇಲೆ ಆಪಾದನೆ ಮಾಡಬಹುದೇ ? ಈ ಸದನದ ಸದಸ್ಯರಲ್ಲದವರ ಮೇಲೆ ವೈಯಕ್ತಿಕವಾಗಿ ಆಪಾದನೆ ಮಾಡುತ್ತಿದ್ದಾರೆ. ಜನರಲ್ ಆಗಿ ಹೇಳಲಿಕ್ಕೆ ನಮ್ಮದೇನು ತಕರಾರು ಇಲ್ಲ. ಆದರೆ ಯಾವುದೇ ವ್ಯಕ್ತಿಗಳ ಮೇಲೆ ಆಪಾದನೆ ಮಾಡುವಾಗ ಅವರು ಈ ಸದನದ ಸದಸ್ಯರಾಗಿರಬೇಕು. ಸದನದ ಸದಸ್ಯರಲ್ಲದವರ ಮೇಲೆ ಈ ರೀತಿ ಆಪಾದನೆ ಮಾಡಬಹುದೇ ?

ಶ್ರೀ ಬಿ. ಬಸವಲಿಂಗಪ್ಪ :– ಅವರ ಹೆಸರನ್ನೇನು ನಾನು ಹೇಳಲಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಬೆಳಗಾಂ ಅಧ್ಯಕ್ಷರು ಎಂದು ಹೇಳಿದಿರಿ.

ಶ್ರೀ ಎ. ಬಿ. ಜಕನೂರು :– ಈಗ ತಾವು ಮಾತನಾಡಿದ್ದು ಕಾನೂನುಬದ್ಧವಾಗಿದೆಯೇ ? ಮಂತ್ರಿಗಳು ಈಲ್ಡ್ ಆಗಿಲ್ಲ; ಆದರೂ ತಾವು ಮಾತನಾಡಿದ್ದು ಕಾನೂನುಬದ್ಧವೇ ?

ಶ್ರೀ ಬಿ. ಹೆಚ್. ಬನ್ನಿಕೋಡ್ :– ನಾನು ಕ್ರಿಯಾಲೋಪ ಎತ್ತಿದ್ದೇನೆ. ಮತ್ತು ಅಧ್ಯಕ್ಷಿಣಿಯವರ ಅನುಮತಿ ತೆಗೆದುಕೊಂಡು ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ :– ಈಗ ಕೋಲಾರ ಜಿಲ್ಲಾ ಪರಿಷತ್ತು.........

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಪ್ರತಿಯೊಂದು ಜಿಲ್ಲಾ ಪರಿಷತ್ತಿನ ವಿವರಗಳನ್ನು ತನ್ನಿ. ಅದರ ಬಗ್ಗೆ ಚರ್ಚೆ ಮಾಡೋಣ. ಯಾವ ಯಾವ ಜಿಲ್ಲಾ ಪರಿಷತ್ತುಗಳು ಏನೇನು ಮಾಡಿವೆ ಎಂದು ಹೇಳಿ, ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್ :– ಯಾವ ಯಾವ ಜಿಲ್ಲಾ ಪರಿಷತ್ತಿನವರು ಎಷ್ಟು ಲೂಟಿ ಮಾಡಿದ್ದಾರೆ, ಎಷ್ಟೆಷ್ಟು ಅವ್ಯವಹಾರವಾಗಿದೆ ಎಂಬುದನ್ನು ಸದನಕ್ಕೆ ತಿಳಿಸಲಿ. ವಿವರಗಳನ್ನು ಕೊಡಲಿ. ಅದು ಬಿಟ್ಟು ಮಂತ್ರಿಗಳು ಇಷ್ಟ ಬಂದ ಹಾಗೆ ಮಾತನಾಡುವುದಕ್ಕೆ ಇಲ್ಲಿ ಅವಕಾಶ ಇಲ್ಲ. ಮನಸ್ಸಿಗೆ ಬಂದ ಹಾಗೆ ಬಾಯಿಗೆ ಬಂದಂತೆ ಮಾತನಾಡಿದರೆ ಹೇಗೆ ?

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ :– ನಾನು ಆಕ್ಷೇಪಿಸುತ್ತೇನೆ. ಮಾನ್ಯ ಸದಸ್ಯರ ಹೆಸರು ಗೊತ್ತಿಲ್ಲ. ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆಂದು ಹೇಳುತ್ತಾರೆ. ಅವರು ಆ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇದು ಸಭ್ಯತೆಗೆ ಮೀರಿದ ಮಾತು.

ಶ್ರೀ ಎಂ. ಪಿ ವೆಂಕಟೇಶ್ :– ಪ್ರತಿಯೊಂದು ಜಿಲ್ಲಾ ಪರಿಷತ್ತಿನ ಪ್ರತಿಯೊಂದು ವಿಚಾರವನ್ನು ಹೇಳ-ಬೇಕು. ಎಷ್ಟು ಹಣ ದುರುಪಯೋಗವಾಗಿದೆ, ಏನಾಗಿದೆ. ಯಾವ ವಿಚಾರವಾಗಿ ಆಗಿದೆ ಎಂಬ ವಿವರಗಳನ್ನು ಹೇಳಬೇಕು.

(ಗೊಂದಲ)

ಉಪಾಧ್ಯಕ್ಷಿಣಿಯವರು : ಎಲ್ಲರೂ ಕುಳಿತುಕೊಳ್ಳಿ, ಏಕಾಂತಯ್ಯನವರು ಈಗ ಏನು ಹೇಳುತ್ತಾರೆ, ಹೇಳಲಿ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ :- ಬೊಕ್ಕಸ ಎಲ್ಲಾ ಖಾಲಿ ಮಾಡಿದ್ದಾರೆ ಜಿಲ್ಲಾ ಪರಿಷತ್ತಿನಲ್ಲಿ ನೀವು ವಕಾಲತ್ತು ವಹಿಸಿದ್ದೀರಿ ಇಲ್ಲಿ. ಜಿಲ್ಲಾ ಪರಿಷತ್ ಸದಸ್ಯನಾಗಿ ಅದರ ಯೋಗ್ಯತೆ ನನಗೆ ಗೊತ್ತಿದೆ. ಏನೇನು ಮಾಡಿದ್ದಾರೆ ಎಂದು ನನಗೆ ಗೊತ್ತಿದೆ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್ :- ಎಲ್ಲಾ ಗೊತ್ತಾಗಲಿ. ಎಲ್ಲಾ ಅಧ್ಯಕ್ಷರ ಬಗ್ಗೆಯೂ ಹೇಳಲಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಕೂತ್ಕೊಳ್ರಿ ಸಾಕು. ನನಗೆ ಗೊತ್ತು.

ಉಪಾಧ್ಯಕ್ಷರು :- ನಾನು ಈಗ ಏಕಾಂತಯ್ಯನವರಿಗೆ ಕರೆದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- 900 ಕೋಟಿ ರೂಪಾಯಿ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿಗೆ ಕೊಟ್ಟ ಹಣ ಸಂಪೂರ್ಣ ನಿರ್ನಾಮವಾಗಿದೆ. ಲೂಟಿ ಮಾಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು :- ಏಕಾಂತಯ್ಯನವರೇ, ತಾವು ಏನು ಹೇಳುತ್ತೀರಿ ?

(ಶ್ರೀ ಎಚ್. ಏಕಾಂತಯ್ಯನವರು ಮಾತನಾಡಲು ನಿಂತರು.)

ಶ್ರೀ ಎಲ್. ಆರ್. ಶಿವರಾಮೇಗೌಡ :- ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ......

ಉಪಾಧ್ಯಕ್ಷರು :- ಏಕಾಂತಯ್ಯನವರು ಮಾತನಾಡುತ್ತಿದ್ದಾರೆ.

† ಶ್ರೀ ಎಚ್. ಏಕಾಂತಯ್ಯ :- ಕೆಲವು ಜಿಲ್ಲಾ ಪರಿಷತ್ತಿನಲ್ಲಿ ಅವ್ಯವಹಾರ ಆಗಿದೆ ಎಂಬ ಮಾತನ್ನು ಹೇಳಿದ್ದಾರೆ. ಕೆಲವು ಮಂಡಲ ಪಂಚಾಯಿತಿಗಳಲ್ಲಿ ಅವ್ಯವಹಾರ ಆಗಿದೆ ಎಂದು ಅನೇಕ ಶಾಸಕರು ಹೇಳಿದ್ದಾರೆ. ನಾನು ಯಾವ ಅವ್ಯವಹಾರಗಳೂ ನಡೆದಿಲ್ಲ ಎಂದು ಹೇಳುವುದಿಲ್ಲ. ಆದರೆ ಎಲ್ಲೆಲ್ಲಿ ಅವ್ಯವಹಾರಗಳಾಗಿವೆ. ಅದನ್ನು ಪತ್ತೆ ಮಾಡಿ ಆಗಲೇ ನಿರ್ದಾಕ್ಷಿಣ್ಯವಾಗಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ಬೆಂಬಲ ಇದೆ. ಆದರೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಅವ್ಯವಹಾರ ಆಗಿರುವುದು ಕೇವಲ ಜಿಲ್ಲಾ ಪರಿಷತ್ತಿಗೆ ಮಾತ್ರ ಸೀಮಿತವಾಗಿದೆಯೇ ಅಥವಾ ಮಂಡಲ ಪಂಚಾಯಿತಿಗಳಿಗೆ ಮಾತ್ರ ಸೀಮಿತ ವಾಗಿದೆಯೇ ? ಈ ರಾಜ್ಯ ಸರ್ಕಾರದಲ್ಲಿರುವಂಥ ಯಾವುದೇ ಪಕ್ಷದ ಸರ್ಕಾರ ಇದ್ದಾಗ ಮಂತ್ರಿಗಳಾದಂಥ ನಮ್ಮಂಥವರು ಅಥವಾ ಜನತಾ ಪ್ರತಿನಿಧಿಗಳು ಇಂಥ ಆರೋಪಗಳಿಂದ ಏನಾದರೂ ವಿಮುಕ್ತರಾಗಿದ್ದಾರಾ ನಾನು ಎಲ್ಲರ ಮೇಲೆ ಹೇಳುತ್ತಿಲ್ಲ. ಅವರು ಮಂತ್ರಿಗಳಾಗಿರಬಹುದು, ಯಾವುದೇ ಪಕ್ಷಕ್ಕೆ ಸೇರಿರಬಹುದು; ಅಂಥವರ ಮೇಲೆ ಸಹ ಆರೋಪಗಳನ್ನು ನಾವು ಅನೇಕ ಸಂದರ್ಭದಲ್ಲಿ ಮಾಡಿದ್ದೇವೆ. ಯಾವ ಸಂದರ್ಭದಲ್ಲಿ ಯಾವುದೇ ವಿಷಯದಲ್ಲಿ ಆರೋಪ ಮಾಡಿದ್ದರೂ ಸಹ ಕ್ರಮ ತೆಗೆದುಕೊಳ್ಳಿ. ನಮ್ಮ ಬೆಂಬಲ ಅದಕ್ಕಿದೆ. ಆದರೆ ಸಾರಾಸಗಟಾಗಿ ಕೆಲವರ ಹೆಸರುಗಳನ್ನು ಹೇಳುವುದು ಅಷ್ಟು ಸರಿಯಲ್ಲ. ಇಂಥವರೇ ಕಾರಣ ಎಂದು ವಿಚಾರಣಾ ವರದಿ ಬರದೇ, ವಿಚಾರಣೆ ಮಾಡದೆ ಅವರ ಮೇಲೆ ನಾವು ಆರೋಪ ಮಾಡುವುದು ಸರಿಯಲ್ಲ ಆದ್ದರಿಂದ ಮಾನ್ಯ ಮಂತ್ರಿಗಳು ಅದನ್ನು ಕೈಬಿಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ :- ಅಧ್ಯಕ್ಷಣಿಯವರೆ, ಈಗ ಕೆಲವು ಜಿಲ್ಲಾ ಪರಿಷತ್ತುಗಳಲ್ಲಿ ಅವ್ಯವಹಾರ ಆಗಿದೆ ಎಂದು ಹೇಳುತ್ತಿದ್ದಾರೆ. ನಾವು ಇಲ್ಲ ಎಂದು ಹೇಳುವುದಿಲ್ಲ. ಇರಬಹುದು. ಎನ್‌ಕ್ವೈರಿ ಮಾಡಲಿ, ಕಾನೂನು ಪ್ರಕಾರ ಕೈಗೊಂಡು ಜೈಲಿಗೆ ಕಳುಹಿಸಲಿ. ನಾವು ಅವರನ್ನು ಸಪೋರ್ಟ್ ಮಾಡುವುದಕ್ಕೆ ಬಂದಿಲ್ಲ. ಹಾಗೆಂದಾಕ್ಷಣ ಎಂಟೈರ್ ಸಿಸ್ಟಂ ಸರಿಯಿಲ್ಲ ಎಂದು ಹೇಳುವುದು ಸರಿಯಲ್ಲ. ಉದಾಹರಣೆಗೆ ಕಳೆದ ಒಂದು ವರ್ಷದಲ್ಲಿ ಸರ್ಕಾರದವರು ಟ್ರಾನ್ಸ್‌ಫರ್ ಮಾಡಿದ್ದೀರಿ. ಅದರಲ್ಲಿ ವ್ಯಾಪಾರ ನಡೆದುಬಿಟ್ಟು ಎಂದು ಪತ್ರಿಕೆಗಳಲ್ಲಿ ಬಂದಿದೆ. ಹಾಗೆಂದಾಕ್ಷಣ ನಿಮ್ಮನ್ನೆಲ್ಲಾ ಮನೆಗೆ ಕಳುಹಿಸಬೇಕೇನು ? ಲೆಜಿಸ್ಲೇಟೀವ್ Assembly ಡಿಸಾಲ್ವ್ ಮಾಡಬೇಕೇನು ? What do you mean by this ? ನಿಮ್ಮಂಥ ಹಿರಿಯರು ಈ ತರಹ ಹೇಳಬಾರದು. ಅವ್ಯವಹಾರ ಇರಬಹುದು. ನಾವು ಇಲ್ಲ ಎಂದು ಹೇಳುವುದಿಲ್ಲ. ಚೆನ್ನಾಗಿ ನಡೆದಂಥ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳೂ ಇವೆ. ನಾನೂ ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಅವತ್ತು ಏನು ಡೆವಲಪ್ಮೆಂಟ್ ಆಗಿದೆ, ಇವತ್ತು ಏನು ಡೆವಲಪ್ಮೆಂಟ್ ಆಗಿದೆ ಸ್ವಲ್ಪ ನೋಡಿ. ದುರಾದೃಷ್ಟವಶಾತ್ ನಿಮ್ಮ ಏರಿಯಾ ಬೆಂಗಳೂರು ನಾರ್ತ್ ಏನಿದೆ, ಅದು ಬಿಟ್ಟು ಆಚೆ ಹೋಗಿ. ನಿಮಗೆ ಮಂಡಲ ಪಂಚಾಯಿತಿಯೂ ಇಲ್ಲ ಜಿಲ್ಲಾ ಪರಿಷತ್ತೂ ಇಲ್ಲ. ನೀವೇ ರಾಜರು, ನಿಮ್ಮದೇ ರಾಜ್ಯ. ಎಷ್ಟು ಬೇಕಾದರೂ ಹಣ ಕೊಟ್ಟು ಕೊಳ್ಳುತ್ತೀರಿ. ಎಲ್ಲಾ ಸರಿಯಾಗಿ ನಡೆದಿದೆ ಅಂದುಕೊಂಡಿದ್ದೀರಿ. ಸಿಸ್ಟಂ ಸರಿಯಲ್ಲ ಎಂದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಬೇಡ ಎಂದು ಸ್ಕ್ರ್ಯಾಪ್ ಮಾಡಿ. ಎಲ್ಲಾ ಅಧಿಕಾರ ನಿಮ್ಮ ಕೈಯಲ್ಲಿಟ್ಟುಕೊಳ್ಳಿ. ಯಾರು ಬೇಡ ಎಂದು ಹೇಳುತ್ತಾರೆ ? ತಿದ್ದುಪಡಿ ಏತಕ್ಕೆ ಮಾಡುತ್ತೀರಿ ? If the System is not working, you stop it.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಜಾಲಪ್ಪನವರು, ಮಾನ್ಯ ಏಕಾಂತಯ್ಯನವರು ಹೇಳಿದ ಮಾತು ಒಟ್ಟಿಗೆ ಕೇಳಿ ವಿಚಾರ ಮಾಡುವುದಾದರೆ ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಮಾಡಬೇಕು ಎಂದು. ಅದನ್ನು ನಾನು ಹೇಳಿದ್ದೇನೆ. ಬೇರೆಯವರು ಹೇಳಿಲ್ಲ. ತನಿಖೆ ಮಾಡಿ, ಎರಡೆರಡು ಸಾರಿ ತನಿಖೆ ಮಾಡಿ ಒಂದು ನಿರ್ಧಾರಕ್ಕೆ ಬಂದಿದ್ದನ್ನು ಹೇಳಿದ್ದೇನೆ. ಉಳಿದಿದ್ದು ಹೇಳಿಲ್ಲ. ಮತ್ತೆ ಏನಾಗಿದೆ ಅಧ್ಯಕ್ಷರೆ, ಕ್ರಮ ಇಲ್ಲದ ನೇಮಕಾತಿಗಳು. ಎಷ್ಟು ನೇಮಕಾತಿ ? ನಮಗೆ ಹೊರೆಯಾಗುತ್ತದೆ ಎಂದರೂ ನೇಮಕಾತಿ ಮಾಡುವುದು. ನಾವು ಮಾಡಬೇಡಿ ಎಂದು ಹೇಳಿದರೂ ಮಾಡಿದರೆ, ಸರ್ಕಾರಕ್ಕೆ ತದ್ವಿರುದ್ಧವಾಗಿ ಪ್ಯಾರಲಲ್ ಅಥಾರಿಟಿ ಸೆಟಪ್ ಮಾಡಿದರೆ ಸರಿಯಲ್ಲ ಎಂಬುದು ನನ್ನ ವಾದ. ಅವರನ್ನೆಲ್ಲಾ ಜೈಲಿಗೆ ಕಳುಹಿಸಿ, ಈ ಸಿಸ್ಟಂ ಸರಿಯಿಲ್ಲ ಎಂದು ಹೇಳುತ್ತಿಲ್ಲ. ಆದರೆ ಈ ವರ್ಷಗಳಲ್ಲಿ ಏನೇನಾಗುತ್ತಿದೆ ಅದನ್ನು ನಿಮಗೆ ತಿಳಿಸಿದ್ದೇನೆ. ಆಮೇಲೆ ಸರ್ಕಾರದವರು ಯಾರೋ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿದರೆ ಸರ್ಕಾರಕ್ಕೆ ಅಧಿಕಾರ ಇಲ್ಲ ಎಂದು ಒಂದು ನಿಲುವು ತೆಗೆದುಕೊಳ್ಳುವುದು, ಅಧಿಕಾರಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಇರುವುದು. ಇಂಥ ಹಲವಾರು ನಿದರ್ಶನಗಳಿವೆ.

ಏನು ಮಾಡಬೇಕು ಅವರಿಗೆ ? ಡಿಸಾಲ್ವ್ ಮಾಡತಕ್ಕದ್ದು, ಕ್ರಮ ತೆಗೆದುಕೊಳ್ಳತಕ್ಕದ್ದು, ಅದನ್ನು ಕಿತ್ತು ಹಾಕತಕ್ಕದ್ದರ ಬಗ್ಗೆ ಈ ಆಕ್ಟ್‌ನಲ್ಲಿ ಇದೆ. ಆದರೆ ನಾವು ಸೌಜನ್ಯಯುತವಾಗಿ ಅವರಿಗೆ ತಿಳಿಸಿದ್ದೇವೆ, ಈ ಕೆಲಸ ಮಾಡಬೇಡಿ ಎಂದು. ಹೀಗೆ ಹೇಳಿದರೂ ಕೂಡಾ, ಸೌಜನ್ಯವಾಗಿ ತಿಳಿಸಿದ್ದರೂ ಕೂಡಾ ಇವತ್ತು ನಮಗೆ ಅಧಿಕಾರ ಉಂಟು, We are sovereign people ಎನ್ನತಕ್ಕ ಭಾವನೆ ವ್ಯಕ್ತ ಮಾಡುವ ಜಿಲ್ಲಾಧಿ-ಕಾರಿಗಳು ಇಲ್ಲವೋ ? ಇದಾ ರೆ;

ಶ್ರೀ ಆರ್. ಎಲ್. ಜಾಲಪ್ಪ :– ಕೊಟ್ಟಿರುವ ಹೊಸ ಔಷಧಿಗಳನ್ನು ಬೇರೆ ಕಡೆ ಸಾಗಿಸಿ ಹಳೇ ಔಷಧಿಗಳನ್ನು ಆಸ್ಪತ್ರೆಯಲ್ಲಿ ಇಟ್ಟ ಡಾಕ್ಟರರನ್ನು ಸಸ್ಪೆಂಡ್ ಮಾಡಿದರೆ ನೀವು ರೀಇನ್‌ಸ್ಟೇಟ್ ಮಾಡುತ್ತೀರಿ. ಹೀಗಾದರೆ ಅಲ್ಲಿ ಅಧ್ಯಕ್ಷ ಏಕೆ ಇರಬೇಕು ?

ಶ್ರೀ ಬಿ. ಬಸವಲಿಂಗಪ್ಪ :– ನಾನು ಹೇಳಿದಾಗ ಸಿಟ್ಟು ಬಂದರೆ ಸ್ವಲ್ಪ ನುಂಗಿಕೊಳ್ಳಿ ಸ್ವಾಮಿ;

ಶ್ರೀ ಆರ್. ಎಲ್. ಜಾಲಪ್ಪ :– ಸಿಟ್ಟಿಲ್ಲ. ಇದೇನೂ ನಮ್ಮ ಸ್ವಂತದ್ದು ಅಲ್ಲ. ಅಥವಾ ನಮ್ಮ ನೆಂಟರು ಅಲ್ಲಿ ಅಧ್ಯಕ್ಷರು ಇಲ್ಲವೇ ಉಪಾಧ್ಯಕ್ಷರು ಆಗಿಲ್ಲ; ನನ್ನದು ಏನಿಲ್ಲಾ ಸ್ವಾಮಿ. ನಾನು ವ್ಯವಸ್ಥೆ ಬಗ್ಗೆ ಮಾತ-ನಾಡುತ್ತೇನೆ. ಈ ಪ್ರಜಾತಂತ್ರದಲ್ಲಿ ವಿಕೇಂದ್ರೀಕರಣ ಆಗಬೇಕು. ಅದರಲ್ಲಿ ತಪ್ಪು ಇರಬಹುದು, ನೆಪ್ಪು ಇರ-ಬಹುದು. ಸ್ವತಂತ್ರ ಬಂದು 40 ವರ್ಷ ಆದರೂ ಏನು ನಾವು ಸಾಧಿಸಿದ್ದೇವೆ ? ಎಲ್ಲಾ ಪಕ್ಷದವರು ಸರಿಯಾಗಿದ್ದೇವಾ ?

ಶ್ರೀ ಬಿ. ಬಸವಲಿಂಗಪ್ಪ :– ಮಾನ. ಅಧ್ಯಕ್ಷರೇ, ಇವರ ತಾಲ್ಲೂಕಿನದ್ದೇ ಒಂದು ಹೇಳುತ್ತೇನೆ. ನೇದಲಗೆರೆ ಎಂದು ಕಾಣುತ್ತದೆ. ಸರಿಯಾಗಿ ಗೊತ್ತಿಲ್ಲ ಆ ಊರಿನ ಯಾರೋ ಒಬ್ಬರು ಪ್ರಮುಖರು ಬಂದರು. ನಾನು ಆಗ ಹೊಸದಾಗಿ ಮಂತ್ರಿಯಾಗಿದ್ದೆ. ನನ್ನಲ್ಲಿ ಬಂದು ಅಲ್ಲಿ ಮಿನಿ ವಾಟರ್ ಸ್ಕೀಮ್ ಉದ್ಘಾಟನೆ ಮಾಡಬೇಕೆಂದು ಕೇಳಿದರು. ನಾನು ಅದಕ್ಕೆ ಒಪ್ಪಿಕೊಂಡೆ. ನಾನು ಹಿಂದೆ ಮಂತ್ರಿಯಾಗಿದ್ದಾಗ ನಡೆದದ್ದು ಹೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ :– ಆ ವಿಷಯ ನಾವೇ ಹೇಳಿದ್ದೇವೆ. ಅದು ನನಗೆ ಗೊತ್ತಿದೆ. ಮಂಡಲ ಪಂಚಾಯಿತಿಯವರು ಮೈನರ್ ಮಿನಿವಾಟರ ಸ್ಕೀಮ್ ಇನಾಗುರೇಷನ್‌ಗೆ ನಿಮ್ಮನ್ನು ಕರೆದರು. ಈ ಬಗ್ಗೆ ತಾವು ಜಿಲ್ಲಾ ಪರಿಷತ್ತಿನ ಅಧ ಕ್ಷರಿಗೆ ಕನ್‌ಸಲ್ಟ್ ಮಾಡಬೇಡವೇ ? ಅಥವಾ ಅಲ್ಲಿನ ಶಾಸಕರಿಗೆ ನಾವು ಬರುತ್ತಿದ್ದೇ-ವೆಂದು ಹೇಳುವುದು ಬೇಡವೇ ? ನಿಮಷ್ಟಕ್ಕೆ ನೀವು ಒಪ್ಪಿಕೊಂಡು ಹೋದರೆ ನಿಮ್ಮ ಸ್ವಂತದಾ ? ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ತಾವು ಅಧಿಕಾರ ಕೊಟ್ಟಿದ್ದೀರಿ. ಗುನ್‌ಗುಂಟೆಗೆ ನೀವು ಬರುತ್ತೇನೆಂದಿದ್ದರೆ ನಾವೇ ಕರೆಯುತ್ತಿದ್ದೆವು ನೀವು ಹೇಳಿದ್ದರೆ ನಾವೇ ಸಂತೋಷದಿಂದ ಕರೆದುಕೊಂಡು ಹೋಗುತ್ತಿದ್ದೆವು.

ಶ್ರೀ ಎಲ್. ಆರ್. ಶಿವರಾಮೇಗೌಡ :– ನಾನು ಕಳೆದ 1 ವರ್ಷದಿಂದ ಎಂ.ಎಲ್.ಎ. ಆಗಿದ್ದೇನೆ. ಕಳೆದ ಎರಡೂವರೆ ತಿಂಗಳ ಕೆಳಗೆ ನಮ್ಮಲ್ಲಿ ಯಾರೂ ಮಂತ್ರಿಗಳು ಹೋಗಿ ಉದ್ಘಾಟನೆ ಮಾಡಿಲ್ಲ. ಅಲ್ಲಿ ಜಿಲ್ಲಾ ಪರಿಷತ್ತಿನ ಸದಸ್ಯರು ಹೋಗಿ ಸ್ವಿಚ್ ಹಾಕಿ ಬಂದಿದ್ದಾರೆ. ಈ ರೀತಿ ಗೊಂದಲ ನಡೆಯುತ್ತದೆ ಎಂದೇ ಸಂಪೂರ್ಣವಾಗಿ ತಿದ್ದುಪಡಿಯನ್ನು ಮಾಡಬೇಕೆಂದು ಸಭೆಯಲ್ಲಿ ತಂದಿರತಕ್ಕದ್ದು. ಇದಕ್ಕೆ ಒಪ್ಪಿಕೊಂಡರೆ ಏನೂ ತೊಂದರೆ ಇಲ್ಲ.

ಶ್ರೀ ಆರ್. ಎಲ್. ಜಾಲಪ್ಪ :– ಜಿಲ್ಲಾ ಪರಿಷತ್ ಸದಸ್ಯರು ಸ್ವಿಚ್ ಹಾಕಿದ್ದಕ್ಕೆ ನೀರು ಬರಲಿಲ್ಲವೇ ?

ಶ್ರೀ ಆರ್. ಎನ್. ನಾಯಕ್ :– ಹಲವಾರು ಕಡೆ ನೀರು ಬಂದಿಲ್ಲ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್ ಅಧ್ಯಕ್ಷರು ಒಂದು ಕಡೆ ಉದ್ಘಾಟನೆ ಮಾಡಿದಾಗ ನಳದಲ್ಲಿ ನೀರು ಬಂದಿಲ್ಲ. ಆ ಮೇಲೆ ಇಲ್ಲಿ ದೇಶಪಾಂಡೆಯವರು ಉತ್ತರ ಕೊಡುವಾಗ ನೀರು ಬಂತು ಎಂದು ಉತ್ತರಕೊಟ್ಟರು; ಆದರೆ ನೀರು ಬರಲಿಲ್ಲ; ಇದು ನಡೆದ ಕಥೆ.

ಶ್ರೀ ಬಿ. ಬಸವಲಿಂಗಪ್ಪ :– ನಾನು ಹೇಳತಕ್ಕ ವಿಷಯ ಏನೆಂದರೆ, ಮಾನ್ಯ ಜಾಲಪ್ಪನವರ ತಾಲ್ಲೂಕಿನಲ್ಲಿ ಹುಲಿಕುಂಟೆ ಗ್ರಾಮದಲ್ಲಿ......

ಶ್ರೀ ಬಿ. ಹೆಚ್. ಬನ್ನಿಕೋಡ್ ;:– ಇವರ ಅಮೃತ ಹಸ್ತದಿಂದ ಸ್ವಿಚ್ ಹಾಕಿದ್ದರೆ ನೀರು ಬರುತ್ತಿತ್ತೇನೋ?

ಶ್ರೀ ಬಿ. ಬಸವಲಿಂಗಪ್ಪ :– ನಾನು ಆಗ ಹೊಸದಾಗಿ ಮಂತ್ರಿಯಾಗಿ 2–3 ದಿವಸ ಆಗಿತ್ತು. ಹೊಸದಾಗಿ ಆ ಇಲಾಖೆಗೆ ಮಂತ್ರಿಯಾಗಿದ್ದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಈ ವಿಷಯ ಬಿಟ್ಟು ಮುಖ್ಯ ವಿಷಯಕ್ಕೆ ಬನ್ನಿ.

ಶ್ರೀ ಬಿ. ಬಸವಲಿಂಗಪ್ಪ :– ಈ ವಿಷಯ ಬಿಡುವುದಕ್ಕಾಗುವುದಿಲ್ಲ. ಹೇಗೆ ಬಿಡುವುದು ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ನೀವೂ ಬಿಡುವುದಿಲ್ಲ, ನಾವೂ ಬಿಡುವುದಿಲ್ಲ ಎಂದರೆ ಹೇಗೆ ?

ಉಪಾಧ್ಯಕ್ಷರು :– ಮಂತ್ರಿಗಳು ಬಿಡುತ್ತಾರೆಂದರೂ ಶ್ರೀ ಜಾಲಪ್ಪನವರು ಬಿಡುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ಶ್ರೀಮಾನ್ ಜಾಲಪ್ಪನವರ ತಾಲ್ಲೂಕು ದೊಡ್ಡಬಳ್ಳಾಪುರ. ಈಗ ಅವರೇ ಹೇಳಿದರು; ಹಳ್ಳಿಯ ಹೆಸರು ಹುಲಕುಂಟೆ ಎಂದು. ನಾನು ಹೊಸದಾಗಿ ಮಂತ್ರಿಯಾಗಿದ್ದೆ. ನನಗೆ ಯಾವ ವಿಚಾರ ಕೂಡ ಆಗ ಗೊತ್ತಿರಲಿಲ್ಲ. ಆಗ ಯಾರೋ ಕಾಂಗ್ರೆಸ್ ಕಾರ್ಯಕರ್ತರು ಬಂದು ನನ್ನನ್ನು ಕರೆದರು.

ಶ್ರೀ ಆರ್. ಎಲ್. ಜಾಲಪ್ಪ :– ಯಾರೋ ಅಲ್ಲ; ಅಲ್ಲಿ ಸೋತ ಅಭ್ಯರ್ಥಿ ನಮ್ಮ ಕ್ಷೇತ್ರದವನು ಅವನು ಬಂದು ಕರೆದ ಎಂದು ನೀವು ಬಂದಿರಿ ಅಷ್ಟೇ ಯಾರೋ ಅಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ನಾವು ಇದನ್ನು ಕೈ ಬಿಡಿ ಎಂದು ಹೇಳಿದರೂ ಕೂಡ ನೀವು ಬಿಡುವುದಿಲ್ಲ. ನಾವೂ ಬಿಡುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ಹುಲುಕುಂಟೆಗೆ ಕರೆದರು; ನಾನು ಹೋದೆ ಎಂದು ಇಟ್ಟುಕೊಳ್ಳೋಣ ಅದು ಸರಿಯೋ ತಪ್ಪೋ ಅದು ಬೇರೆ ವಿಚಾರ. ಯಾವುದೋ ಒಂದು ತಾರೀಖಿಗೆ ಹೋಗಬೇಕೆಂದು ನಿಗದಿಯಾಯಿತು. ಅದು ನಿಗದಿಯಾದಮೇಲೆ ನಾನು ಅಧ್ಯಕ್ಷರನ್ನು ಅಧಿಕಾರಿಗಳನ್ನು ಕರೆಸಿ ನಾನೂ ಬರುತ್ತೇನೆ ನೀವೂ ಬನ್ನಿ ಎಂದು ಹೇಳಿದೆ. ಅದಕ್ಕೆ ಅವರು ಆಯಿತು, ಎಂದು ಹೇಳಿದರು. ಅದಾದ ಮೇಲೆ ಒಂದು ದಿವಸ ಮುಂಚಿತವಾಗಿ ಹೋಗಿ ಇದನ್ನೆಲ್ಲಾ ಮುಗಿಸಿಕೊಂಡು ಬಂದು ಬಿಡುವುದೇ ?

ಶ್ರೀ ಆರ್. ಎಲ್. ಜಾಲಪ್ಪ :– ಏನು ಮಾಡಿದೆವು ಎಂದರೆ 18 ನೇ ತಾರೀಖು ಎಂದು ಹಾಕಿಕೊಂಡಿದ್ದರು. ನಾನು ಹೇಳಿದೆ 17 ನೇ ತಾರೀಖು ಮಾಡೋಣ ಎಂದು. ನಂತರ ಅವರು 17 ಕ್ಕೂ ಮಾಡುವುದು ಬೇಡ 18 ಕ್ಕೂ ಮಾಡುವುದು ಬೇಡ ನಾನು ಅಲ್ಲಿಗೆ ಬರುವುದಿಲ್ಲ ನೀವೇ ಯಾವಾಗಲಾದರೂ ಮಾಡಿಕೊಳ್ಳಿ ಎಂದು ಹೇಳಿದರು ಆಗ ನಾನು ಥ್ಯಾಂಕ್ಯೂ ವೆರಿಮಚ್, ನಾವು ನಿಮ್ಮನ್ನು ಬೇರೆ ಕಾರ್ಯಕ್ರಮಕ್ಕೆ ಕರೆಯುತ್ತೇವೆ, ಆಗ ಬನ್ನಿ ಎಂದು ಹೇಳಿದೆವು. ಅದಾದಮೇಲೆ 15 ದಿವಸವಾದ ಮೇಲೆ ನಾನೇ ಹೋಗಿ ಇನ್ನಾಗುರೇಟ್ ಮಾಡಿದೆ. ಮಂಡಲ ಪಂಚಾಯಿತಿಯವರು ಬಂದು ನಿಮ್ಮನ್ನು ಕರೆಯುವುದಿಲ್ಲ ಜಿಲ್ಲಾ ಪರಿಷತ್ತಿನವರು ಬಂದು ನಿಮ್ಮನ್ನು ಕರೆಯುವುದಿಲ್ಲ; ಸೋತ ಅಭ್ಯರ್ಥಿ ಬಂದು ಕರೆದ, ನಿಮ್ಮ ಪಕ್ಷದವನು ಕರೆದ ಎಂದು ಬಂದುಬಿಟ್ಟರೆ, ಇದು ಸರಿಯಲ್ಲ. ತಮಗೇ ಗೊತ್ತಿದೆ, ಯಾವುದೇ ಸರಕಾರೀ ಕೆಲಸವಾಗಬೇಕಾದರೆ ಶಾಸಕರನ್ನು ಕರೆಯಬೇಕೆಂದು ಇದೆ. ಮಿನಿಮಮ್ ಪ್ರೋಟೋಕಾಲ್ ಇದೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಜಾಲಪ್ಪನವರು ನನ್ನ ಸ್ನೇಹಿತರು, ನಾನು ಮಾಡಿದು ಸರಿಯಲ್ಲ ಎಂದು ಹೇಳುತ್ತಿರಲ್ಲಾ; ನೀವು ಬಂದು ನನ್ನನ್ನು ಕರೆಯಬಾರದಾ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಕರೆದಾಗ ನೀವು ಬನ್ನಿ.

ಶ್ರೀ ಆರ್. ಎಲ್. ಜಾಲಪ್ಪ :– ಖಂಡಿತ ಕರೆಯುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ನೀವು ಅವರು ಕರೆದಾಗ ಬರುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ :– ಮಂತ್ರಿಯಾದ ಮೇಲೆ ಇವರು ಹೇಳಿದ ಹಾಗೆ ನಾನು ಕೇಳಬೇಕು. ಅವರು ಯಾವಾಗ ಕರೆಯುತ್ತಾರೆ ಆಗ ನಾನು ಹೋಗಬೇಕು.

ಉಪಾಧ್ಯಕ್ಷಿಣಿಯವರು :– ತಾವು ಜಿಲ್ಲಾ ಪರಿಷತ್ ಬಗ್ಗೆ ಮುಂದುವರಿಸಿ.

ಶ್ರೀ ಬಿ. ಬಸವಲಿಂಗಪ್ಪ :– ಅದೇ ಜಿಲ್ಲಾ ಪರಿಷತ್ತು ಯಾವ ರೀತಿ ನಡೆಯುತ್ತಿದೆ ಎಂದು ಹೇಳಿದೆ.

ಶ್ರೀ ಕೆ. ಎಸ್. ಈಶ್ವರಪ್ಪ :– ಬಸವಲಿಂಗಪ್ಪನವರನ್ನು ಕರೆಯಲಿಲ್ಲವೆಂದು ಈ ತಿದ್ದುಪಡಿಯನ್ನು ತಂದಿದ್ದಾರೋ ಏನೋ ಅರ್ಥವಾಗುತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಏಕಾಂತಯ್ಯನವರು ಕೇವಲ ಜಿಲ್ಲಾ ಪರಿಷತ್ತಿನ ಬಗ್ಗೆ ಹೇಳುತ್ತಿದ್ದೀರಿ. ಮಂಡಲ ಪಂಚಾಯಿತಿ ಬಗ್ಗೆ ಹೇಳಲಿಲ್ಲವೆಂದು ಹೇಳಿದರು. ನಾನು ಹಿಂದೆ 60 ಆಡಿಟ್ ಸಮಿತಿ ಎಂದು ಮಾಡಿದೆ.

ಅಸಿಸ್ಟೆಂಟ್ ಕಮೀಷನರ್‌ರವರ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ಮಾಡಿ 60 ಮಂಡಲ ಪಂಚಾಯತಿಗಳನ್ನು ನೀವು ಹೋಗಿ ನೋಡಿಕೊಂಡು ಬಂದು ಅಲ್ಲಿನ ಲೆಕ್ಕವನ್ನು ತನಿಖೆ ಮಾಡಿ ನನಗೆ ವರದಿ ಕೊಡಿ ಎಂದು ಹೇಳಿದೆ. ಅವರು ವರದಿ ಕೊಟ್ಟಿದ್ದಾರೆ. ಆ ವರದಿಯ ಸಾರಾಂಶವನ್ನು ಹೇಳಿದರೆ ನಿಮಗೆ ಅದು ಪ್ರಿಯವಾಗುತ್ತದೆಂದು ಕಾಣುತ್ತದೆ. 1. ಕಾಮಗಾರಿಯಲ್ಲಿ ಕೆಲಸದ ಅಗತ್ಯ ಕಡಿಮೆಯಾಗಿರುವುದು. 2. ಕಾಮಗಾರಿಗಳನ್ನು ಕೈಗೊಳ್ಳಲು ಇಲಾಖಾ ಸಿಬ್ಬಂದಿ ಮಂಡಲ ಪ್ರಧಾನರು, ಉಪ ಪ್ರಧಾನರು ತೆಗೆದುಕೊಂಡಿರುವ ಮುಂಗಡಗಳಿಗೆ ಕಾಲ-ಕಾಲಕ್ಕೆ ಲೆಕ್ಕವನ್ನು ಕೊಡದಿರುವುದು 3. ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯಿಲ್ಲದೆ ಕಾಮ-ಗಾರಿಯನ್ನು ಕೈಗೊಂಡಿರುವುದು. 4. ಯೋಜನೆಗೆ ಮಂಜೂರಾಗಿರುವ, ನಿಧಿಯನ್ನು ಬೇರೆ ಉದ್ದೇಶಕ್ಕೆ ಬಳಸುವುದು. 5. ನಿಯಮ ಬಾಹಿರವಾಗಿ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ವಹಿಸುವುದು. 6. ಗಿಡರಕ್ಷಣೆ ಗಳಿಗೆಂದು ಖರೀದಿಸುವ ಸಾಮಗ್ರಿಗಳಲ್ಲಿ......

ಶ್ರೀ ಹೆಚ್. ಏಕಾಂತಯ್ಯ :– ಪಿ. ಎ. ಸಿ. ವರದಿಯನ್ನು ತಾವು ಓದಿದ್ದೀರಲ್ಲಾ. ನಿರ್ಮಲ ಇಂಜಿನಿಯರಿಂಗ್ ಕಂಪನಿಯಿಂದ ಹಿಡಿದು ಬೇರೆ ಎಲ್ಲವನ್ನೂ ಪಟ್ಟಿ ಮಾಡೋಣ. ನಾನೂ ಮಾಡುತ್ತೇನೆ. ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿಯವರು, ಮಾತ್ರ ಮಾಡಿದ್ದಾರಾ ? ನಾವು, ನೀವು ಇಲ್ಲಿ ಮಂತ್ರಿಗಳಾದಮೇಲೆ ನಾವು ಏನೇನು ಮಾಡಿದ್ದೇವೆಂದು ನೋಡೋಣ. ತಪ್ಪಾಗಿರುವ ಕಡೆ ನಮ್ಮ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ; ಹೇಳಿ;

ಶ್ರೀ ಜಿ. ಎಸ್. ಶಿವನಂಜಪ್ಪ :– ಇನ್ನು ಬಹಳ ಇದೆ ಅಷ್ಟೆ ಅಲ್ಲ, ಅವರು ಪೂರ್ತಿ ಹೇಳುತ್ತಾರೆ ಕೇಳಿ.

ಒಬ್ಬ ಮಾನ್ಯ ಸದಸ್ಯರು : ಅವರು ಎಂಟು ದಿವಸ ಹೇಳಿದರೂ ನಾವು ಕೇಳುತ್ತೇವೆ; ನಮ್ಮದೇನು ತಕರಾರಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ಒಟ್ಟು ಸಾರಾಂಶವನ್ನು ನಾನು ಹೇಳುತ್ತಿದ್ದೇನೆ. ಲೆಕ್ಕ ಪರಿಶೋಧನೆಯ ಸಮಯದಲ್ಲಿ ಸಂಬಂಧಪಟ್ಟ ವೋಚರ್‌ಗಳನ್ನು ಹಾಜರುಪಡಿಸದೇ ಇರುವುದು.

8) ಮಧ್ಯವರ್ತಿಗಳಿಗೆ ನಿಯಮಬಾಹಿರವಾಗಿ ಆಹಾರ ಧಾನ್ಯಗಳನ್ನು ನೀಡಿರುವುದು.

9) ಕಾಮಗಾರಿಗೆ ನೀಡಿರುವ ಸಾಮಗ್ರಿಗಳಿಗೆ ಅಗತ್ಯ ದಾಸ್ತಾನು ಪುಸ್ತಕಗಳನ್ನು ಹಾಜರುಪಡಿಸದೇ ಇರುವುದು.

10) ಅಂತಿಮವಾಗಿ ಖರೀದಿಸಿರುವ ಸಾಮಗ್ರಿಗಳಿಗೆ ಬಿಲ್‌ಗಳನ್ನು ಪಡೆಯದೇ ಬೆಲೆ ಪಟ್ಟಿಯ ಮೇಲೆ ಹಣ ಪಾವತಿ ಮಾಡಿರುವುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಇದು ಅಧಿಕಾರ ವಿಕೇಂದ್ರೀಕರಣ ಆದಮೇಲೆ ಅವರು ಪಾಪ ಮಂಡಲ ಪಂಚಾಯಿತಿ ಆದಮೇಲೆ 5–10 ರೂಪಾಯಿ ತಿಂದಿದ್ದಾರೆಂದು ಗೊತ್ತಾಗುತ್ತಿದೆ. ಇಲ್ಲಿ ದೊಡ್ಡ ದೊಡ್ಡ ವ್ಯವಹಾರಗಳು ನಡೆಯುತ್ತವೆ ಅವು ಗೊತ್ತಾಗುವುದಿಲ್ಲ. ಅಧಿಕಾರ ವಿಕೇಂದ್ರೀಕರಣ ಆದಮೇಲೆ ಅಲ್ಲಿ ಪಾಪ ಸರ್ವಸಾಧಾರಣ ಜನರಿಗೆ ತಿನ್ನುವುದೆಲ್ಲ ಗೊತ್ತಾಗುತ್ತಿದೆ. ಈ ವ್ಯವಸ್ಥೆ ತಪ್ಪೆನ್ನುವ ಮಾತಲ್ಲ, ಅದರ ಬಗ್ಗೆ ವಿಚಾರ ಮಾಡಿ. ಜಿಲ್ಲಾ ಪರಿಷತ್‌ನವರೆಲ್ಲ ಸಾತ್ವಿಕರಲ್ಲ; ಅವುಗಳೆಲ್ಲ ಚೆನ್ನಾಗಿವೆ, ಒಳ್ಳೆಯವು ಇವೆಯೆಂದು ನಾನು ಹೇಳುತ್ತಿಲ್ಲ. ತಪ್ಪು ಮಾಡಿದವರು ಯಾರು, ಏತಕ್ಕೆ ಇದು ನಡೆಯುತ್ತಿದೆ, ಇದು ಎಲ್ಲಿಂದ ಬಂತು; ಅದರ ಬಗ್ಗೆ ವಿಚಾರ ಮಾಡಬೇಕು. ಇದೆಲ್ಲ ಅಧಿಕಾರ ವಿಕೇಂದ್ರೀಕರಣ ಮಾಡಿದಮೇಲೆ ಜನರಿಗೆ ಗೊತ್ತಾಗುತ್ತಿದೆ.

ಶ್ರೀಮತಿ ಮೋಟಮ್ಮ :– ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ, ಅವರು ಮಾತನಾಡುವುದಕ್ಕೆ ಬಿಡಿ. ಇದು ಹೇಗಿದೆ ಅಂದರೆ ಪ್ರಶ್ನೆಗಳಿಗೆ ಉತ್ತರ ಕೊಟ್ಟಹಾಗೆ ಇದೆ. ಮಾನ್ಯ ಜಾಲಪ್ಪನವರು ಏನೋ ಮಾಡಿದ್ದಾರೆಂದು ಹೇಳುವುದು, ಅವರೊಂದು ಹೇಳುವುದು ಇವರೊಂದು ಹೇಳುವುದು, ಇದೊಂದು ತರಹ ಪ್ರಶ್ನೋತ್ತರಕಾಲ ಇದ್ದಹಾಗೆ ಇದೆ. ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಅದನ್ನು ಕೇಳಿಕೊಂಡು ಆಮೇಲೆ ನೀವು ಮಾತನಾಡುವಾಗ ನೀವು ಹೇಳಬಹುದು.

ಶ್ರೀ ಆರ್. ಎನ್. ನಾಯಕ್ :– ಮಂತ್ರಿಗಳು ಸರಿಯಾದ ಉತ್ತರ ಹೇಳುವುದಕ್ಕೆ ನೀವು ಬಿಡುತ್ತಿಲ್ಲ.

(ಬ್ಲೇಸಿಯಸ್ ಡಿಸೌಜರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಮಂತ್ರಿಗಳು ಸಮರ್ಥರಿದ್ದಾರೆ. ಅವರಿಗೆ ನೀವು ಸಹಾಯ ಮಾಡಬೇಡಿ. ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ :– ದೊಡ್ಡ ದೊಡ್ಡವರು ತಿಂದರೆ ಸಿಗುವುದಿಲ್ಲ, ಸಣ್ಣ ಸಣ್ಣವರು ಸಿಗುತ್ತಾರೆಂದು ಹೇಳುತ್ತಿದ್ದಾರೆ. ಆದರೆ ದೊಡ್ಡವರೂ ಸಿಗುತ್ತಾರೆ, ಸಣ್ಣವರೂ ಸಿಗುತ್ತಾರೆ. ಅದು ನಿಮಗೂ ಗೊತ್ತು, ನನಗೂ ಗೊತ್ತು. ಅದಕ್ಕಾಗಿ ನಾನು ಹೇಳುವುದನ್ನು ದಯಮಾಡಿ ಕೇಳಿ. ನೀವು ಸಣ್ಣ ಸಣ್ಣ ವಿಷಯಗಳನ್ನು ಕೇಳು-

ತ್ತಿದ್ದರೆ ನಾನು ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಈಗಿರತಕ್ಕ ಗ್ರಾಮ ಪಂಚಾಯಿತಿಗಳು 2532 ಇವೆ. ಈಗ ನಮ್ಮ ತಿಳುವಳಿಕೆ ಮತ್ತು ಅನುಭವದ ಪ್ರಕಾರ ಹಿಂದೆ ಇರತಕ್ಕ 8–10 ಸಾವಿರ ಜನಸಂಖ್ಯೆ ಏನಿತ್ತು ಅದು ಹಾಗೆ ಇರುವುದರಿಂದ ಬಹಳ ಅನಾನುಕೂಲವಾಗುತ್ತದೆ. ಸದಸ್ಯರುಗಳು ಸಭೆಗೆ ಬರುವುದಕ್ಕೆ ಅನಾನುಕೂಲವಾಗುತ್ತದೆ. ಅದರಲ್ಲೂ ಮಲೆನಾಡು ಪ್ರದೇಶಗಳಲ್ಲಿ ಅನಾನುಕೂಲವಾಗುತ್ತದೆ. 10-20 ಮೈಲು ಗಳಿಂದ ಅವರು ಬರತಕ್ಕ ಪ್ರಮೇಯ ಬರುತ್ತದೆ. ಆದ್ದರಿಂದ ಅದನ್ನು ಕಡಿಮೆ ಮಾಡಬೇಕೆನ್ನುವ ವಿಚಾರ ಬಂತು. ಅದು ಬಹಳ ದಿವಸಗಳಿಂದ ಇತ್ತು. ಹಿಂದೆ ಬಹಳ ಕಡಿಮೆ ದೂರ ಇತ್ತು. ಪುನಃ ಅದೇ ರೀತಿ ಸಣ್ಣ ಸಣ್ಣ ಗ್ರಾಮಪಂಚಾಯಿತಿಗಳನ್ನು ಮಾಡಬೇಕನ್ನುವ ಪಾಪ ಒಂದಮೇಲೆ ನಾವು ಅದನ್ನು ಒಪ್ಪಿಕೊಂಡಿದ್ದೇವೆ. ಇವತ್ತು 5 ಸಾವಿರದಿಂದ 10 ಸಾವಿರದವರೆಗೆ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳನ್ನು ಮಾಡಬೇಕೆಂದು ಮಾಡಿದ್ದೇವೆ. ನಮ್ಮ ರಾಜ್ಯಾಂಗದ ತಿದ್ದುಪಡಿ 330 ರ ಪ್ರಕಾರ 2001 ನೇ ವರ್ಷಕ್ಕೆ ನಾವು ಏನು ಡೀಲಿಮಿ-ಟೇಷನ್ ಮಾಡುವುದಕ್ಕೆ ಅಸೆಂಬ್ಲಿಯಲ್ಲಿ ಮತ್ತು ಪಾರ್ಲಿಮೆಂಟ್‌ನಲ್ಲಿ 1971 ನೇ ಜನಗಣತಿಯನ್ನು ಆಧಾರ ವಾಗಿ ಇಟ್ಟುಕೊಂಡರೆ ಹೇಗೆ ? ಈಗ ನಾವು 1990 ನೇ ಇಸವಿಯಲ್ಲಿದ್ದೇವೆ. ಜನಸಂಖ್ಯೆ ಜಾಸ್ತಿಯಾಗಿದೆ. ಆದ್ದರಿಂದ ಈ ಜನಸಂಖ್ಯೆಗನುಗುಣವಾಗಿ 1981 ನೇ ಇಸವಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಗ್ರಾಮ ಪಂಚಾಯಿತಿಗಳನ್ನು ಮಾಡಬೇಕೆಂದು ಈ ಒಂದು ತಿದ್ದುಪಡಿಯಲ್ಲಿ ಅಳವಡಿಸಿದ್ದೇವೆ. ಅದರ ಪ್ರಕಾರ 3520 ಜನಸಂಖ್ಯೆಗೆ ಒಂದು ಗ್ರಾಮ ಪಂಚಾಯಿತಿಗಳು ನಮ್ಮ ರಾಜ್ಯದಲ್ಲಿ ಆಗುತ್ತವೆ. ಅದಕ್ಕೆ ಫೈನಾನ್ಸಿಯಲ್ ಸ್ಟೇಟ್‌ಮೆಂಟ್‌ನಲ್ಲಿ 30 ಕೋಟಿ ರೂಪಾಯಿ ಯಾಗುತ್ತದೆಂದು ಹೇಳಿದ್ದೇವೆ. 5 ಸಾವಿರದ ಆಧಾರದ ಮೇಲೆ 30 ಕೋಟಿ ಆಗುತ್ತದೆ. ಈಗ ಇದು ಕಡಿಮೆ ಆಗಿರುವುದರಿಂದ ಇದಕ್ಕೆ ನಾವು 20 ಕೋಟಿ ಆಗಬಹುದು ಎಂದು ಅಂದಾಜು ಮಾಡಿಕೊಂಡಿದ್ದೇವೆ.

6–00 ಪಿ. ಎಂ.

ಶ್ರೀ ಆರ್. ಎಲ್. ಜಾಲಪ್ಪ :– 20 ಕೋಟಿಯನ್ನು ಎಕ್ಸಟ್ರಾ ಒದಗಿಸುತ್ತೀರೋ ಅಥವಾ ಡೆವೆಲಪ್‌-ಮೆಂಟ್‌ಗೆ ಏನು ಒದಗಿಸಿದ್ದೀರಿ, ಅದರಲ್ಲಿ 20 ಕೋಟಿಯನ್ನು ಕಟ್ ಮಾಡುತ್ತೀರೋ ?

ಶ್ರೀ ಬಿ. ಬಸವಲಿಂಗಪ್ಪ :– ಈ ಪಂಚಾಯಿತಿಗಳನ್ನು ಜಾಸ್ತಿ ಮಾಡಿದ ಹಾಗೆ ಅಲ್ಲಿ ಸಿಬ್ಬಂದಿ ಕೂಡ ಜಾಸ್ತಿ ಮಾಡಬೇಕಾಗುತ್ತದೆ. ಆಗ ಸಿಬ್ಬಂದಿಗೆ ಜಾಸ್ತಿ ಖರ್ಚಾಗುತ್ತದೆ. ಅದಕ್ಕೋಸ್ಕರ ನಾವು ಜಾಸ್ತಿ ಮಾಡ ಬಾರದು, ಈ ಮಿತಿ ಇರಬೇಕು ಎಂದು ಒಂದು ಸಲಹೆ ಬಂದಿರುವುದರಿಂದ, ಇದು ಉತ್ತಮವಾದ ಸಲಹೆ ಎಂದು ತಿಳಿದುಕೊಂಡು ನಾವು ಇದನ್ನು ತಿದ್ದುಪಡಿಯಲ್ಲಿ ಅಳವಡಿಸಿದ್ದೇವೆ. ಆದ್ದರಿಂದ ಈ ಗ್ರಾಮ ಪಂಚಾಯತಿಗಳ ಬಗ್ಗೆ ತಿದ್ದುಪಡಿ ಮಸೂದೆಯನ್ನು ಮಾಡಿದ್ದೇವೆ; ಈಗ ಗ್ರಾಮ ಪಂಚಾಯತಿಗಳು ಸ್ವತಂತ್ರವಾಗಿವೆ. ಅಲ್ಲಿ ಶ್ರೀ ಏಕಾಂತಯ್ಯನವರು ಹೋಗುವಹಾಗಿಲ್ಲ, ನಾನು ಹೋಗುವ ಹಾಗಿಲ್ಲ. ಅವರಿಗೆ ನೇರವಾಗಿ ಹಣ ಬರುವು-ದರಿಂದ, ಹಿಂದೆ ಅವರಿಗೆ ತರಬೇತಿ ಇರಲಿಲ್ಲ. ತರಬೇತಿ ಕೊಟ್ಟು ಅವರಿಗೆ ಹಣ ಕೊಟ್ಟಿದ್ದರೆ ಯಾವರೀತಿಯಾಗಿ ಲೆಕ್ಕ ಇರಬೇಕು, ಯಾವ ರೀತಿ ವ್ಯವಹಾರ ಮಾಡಬೇಕು ಎನ್ನುವುದರ ಬಗ್ಗೆ ತಿಳುವಳಿಕೆ ಇರುತ್ತಿತ್ತು. ಪಂಡಿತ್ ಜವಾಹರಲಾಲ್ ನೆಹರೂ ಅವರು ಹಿಂದೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಒಂದು ಮಾತು ಹೇಳಿದ್ದರು. ತಮಗೆಲ್ಲಾ ಅದು ಗೊತ್ತಿರಬಹುದು—let people commit thousands of mistakes I dont mind those people will learn lessons and then conduct themselves in future.
ಎನ್ನುವ ಮಾತನ್ನು ಹೇಳಿದ್ದರು. ಅದೇ ರೀತಿಯಲ್ಲಿ......

ಶ್ರೀ ಆರ್. ಎಲ್. ಜಾಲಪ್ಪ :– ಪಾಪ, ಆ ಪುಣ್ಯಾತ್ಮನರು ಹೇಳಿದ್ದನ್ನು ಏಕೆ ಉಲ್ಲೇಖ ಮಾಡುತ್ತೀರಿ. ಅವರು ಹೇಳಿದ್ದನ್ನು ನೀವು ಜ್ಞಾಪಕ ಇಟ್ಟುಕೊಂಡರೆ ಸಾಕು, ಅಷ್ಟೇ.

ಶ್ರೀ ಆರ್. ಎನ್. ನಾಯಕ್ :– ಜ್ಞಾಪಕ ಇಲ್ಲದಿದ್ದರೆ ಹೇಳುವುದಕ್ಕೆ ಆಗುತ್ತಿತ್ತೆ ? ಏನು ಕಷ್ಟ ಇದು ?

Sri. B. Basavalingappa :– You must allow them for this kind of dialogue. For healthy discussions, this kind of dialogue is very good and entertaining.

ಶ್ರೀ ಆರ್. ಎಲ್. ಜಾಲಪ್ಪ :– ಶ್ರೀ ನಾಯಕ್ ಅವರಿಗೆ ಈ ಕಡೆ ಕೂತು ಕೂಗಾಡಿ ಕೂಗಾಡಿ ರೂಢಿ. ಆದ್ದರಿಂದ ಆ ಕಡೆಯಿಂದಲೂ ಕೂಗಾಡುತ್ತಿದ್ದಾರೆ. ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಆರ್. ಎನ್. ನಾಯಕ್ :– ಸತ್ಯ ಹೇಳುವುದಕ್ಕೆ ಇಲ್ಲಿ ಅಲ್ಲ, ಹೊರಗಡೆಯಾದರೂ ಕೂಗಾಡಬೇಕು. ಸತ್ಯ ಅಂತ ಹೇಳಿ ಕಿವಿಯಲ್ಲಿ ಹೇಳಿದರೆ ಸತ್ಯವಾಗುತ್ತದೆಯೇ ? ಅದು ಎಲ್ಲರಿಗೂ ಗೊತ್ತಾಗಬೇಕು. ಹೊರಗಿದ್ದೂ ಕೂಗಬೇಕು, ಒಳಗಿದ್ದೂ ಕೂಗಬೇಕು.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ :– ನಾನು ಆಗಲೇ ಹೇಳುತ್ತಿದ್ದೆ— you must allow them for this kind of dialogue. ಅವರು ಏನಾದರೂ ಹೇಳಿದರೆ ಅದಕ್ಕೆ ನಾವು ಏನಾದರೂ ಗಲಾಟೆಮಾಡಿ,

ಹೇಳಬೇಕಾಗುತ್ತದೆ. ಈಗ ಈ ವರ್ಷದ್ದು ನಾನು ಹೇಳಬೇಕು. ಸುಮಾರು ರೋಜ್‌ಗಾರ್ ಯೋಜನೆಯಲ್ಲಿ 120 ಕೋಟಿ ಕೊಟ್ಟಿದ್ದೇವೆ. ಇದು ಡಿಸೆಂಬರ್ ತಿಂಗಳು ಬರೇ ಮೇಲಿನ ಹಣ ಮಾತ್ರ ಖರ್ಚು ಮಾಡಿದ್ದಾರೆ ಹೊರತು 100 ಕೋಟಿಯನ್ನು ಖರ್ಚು ಮಾಡುವುದಕ್ಕೇ ಆಗಿಲ್ಲ. ಕಾರಣ ಹೇಳುತ್ತೇನೆ......

ಒಬ್ಬರು ಮಾನ್ಯ ಸದಸ್ಯರು :– ಇದಕ್ಕೆ ಸಾಕಷ್ಟು ಕಾರಣಗಳು ಉಂಟು. ತಾವು ಯೀಲ್ಡ್ ಆದರೆ ನಾವು ಹೇಳಬಹುದು.

ಶ್ರೀ ಬಿ. ಬಸವಲಿಂಗಪ್ಪ :– ನಾವು ಹೇಳಿದ್ದನ್ನು ಬರೇ ವಿರೋಧ ಮಾಡುವುದಲ್ಲ. ಈ ಬಗ್ಗೆ ಮಂಡಲ ಪಂಚಾಯತಿಗಳಿಗೆ ಆಸಕ್ತಿ ಇದೆಯೋ ಇಲ್ಲವೇ ಎನ್ನತಕ್ಕದ್ದು ಒಂದು ಪ್ರಶ್ನೆ ಬರುತ್ತದೆ. ನಾನು ಹೇಳಿದ್ದೇನೆ ತನಿಖೆ ಮಾಡಿದ ಪ್ರಕಾರ ಇಲ್ಲಿ ಒಂದು ವಿಪರೀತವಾದ ಸಮಸ್ಯೆ ಇದೆ. ನಾನು ಈಗ ಅದರ ಗೋಜಿಗೆ ಹೋಗುವುದಿಲ್ಲ. ಕಾರಣ ಹೇಳುತ್ತೇನೆ. ಏಕೆಂದರೆ ನಮ್ಮ ಸಮಾಜ ಹಾಗೆ ಇದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಈಗ ಸರಿಯಾದ ಹಳಿ ಮೇಲೆ ಬಂದಿರಿ

ಶ್ರೀ ಬಿ. ಬಸವಲಿಂಗಪ್ಪ :– ಈಗ ಉಳಿದಿರುವ ನೂರು ಕೋಟಿ ರೂಪಾಯಿಗಳನ್ನು ಮೂರು ತಿಂಗಳಲ್ಲಿ ಖರ್ಚು ಮಾಡಬೇಕು. ಇದು ಆಗುತ್ತದೆಯೇ ಇಲ್ಲವೇ ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ಅವರಿಗೆ ಈ ಬಗ್ಗೆ ಆಸಕ್ತಿ ಏಕೆ ಇಲ್ಲ ? ಮೊನ್ನೆ ಮಂಡಲ ಪಂಚಾಯತಿಗಳು ಹೇಗೆ ಕೆಲಸ ಮಾಡುತ್ತಿವೆ ಎಂದು ಹೇಳಿ ತನಿಖೆ ಮಾಡಿ ವರದಿ ತರಿಸಿದೆ. ಅದರ ಮೇಲೆ ಕಾನೂನು ಪ್ರಕಾರ ನಾವು ಕ್ರಮ ತೆಗೆದುಕೊಳ್ಳುತ್ತೇವೆ; ಇಂಡಿಯನ್ ಪೀನಲ್ ಕೋಡ್ ಆಗಬಹುದು, ಮತ್ತೊಂದು ಆಗಬಹುದು. ಲೋಕಾಯುಕ್ತ ಆಗಬಹುದು. ಅದು ಎನ್‌ಕ್ವೈರಿ ಆಗಬಹುದು. ಕ್ರಮ ಮಾತ್ರ ಗ್ಯಾರಂಟಿಯಾಗಿ ತೆಗೆದುಕೊಳ್ಳುತ್ತೇವೆ. ಈಗ ಅಸೆಂಬ್ಲಿ ಆಗಬೇಕೆಂದು ಸುಮ್ಮನೆ ಬಿಟ್ಟಿದ್ದೇವೆ. ಈ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಜಿಲ್ಲಾ ಪರಿಷತ್ತಿನವರು ಮತ್ತು ಮಂಡಲ್ ಪಂಚಾಯಿತಿಯವರು ಏನೇನು ಕೆಲಸ ಕಾರ್ಯಗಳನ್ನು ಮಾಡಿದ್ದಾರೆಂದು ನಾವು ಸ್ವಲ್ಪ ವಿಚಾರ ಮಾಡಿ ನೋಡಿದರ, ತಮಗೆ ದಿಗ್‌ಭ್ರಮೆಯಾಗುತ್ತದೆ. ಬಡವರ ಕಲ್ಯಾಣಕ್ಕೋಸ್ಕರ ವಿಶೇಷ ಘಟಕ ಯೋಜನೆ ಇದೆ. ಯಾರು ನಿರ್ಗತಿಕರು ಇದ್ದಾರೆ, ಅಂತಹವರ ಕಲ್ಯಾಣಕ್ಕೋಸ್ಕರವಾಗಿ ಎಷ್ಟು ಖರ್ಚು ಮಾಡಿದ್ದಾರೆ, ಎಷ್ಟು ಮಿಸ್‌ಅಪ್ರೊಪ್ರಿಯೇಷನ್ ಮಾಡಿದ್ದಾರೆ. ಈ ಯೋಜನೆಯಲ್ಲಿರತಕ್ಕ ಹಣವನ್ನು, ಇವರಿಗಾಗಿ ಖರ್ಚು ಮಾಡುವುದೇ ಇಲ್ಲ. ಯಾವ ಉದ್ದೇಶಕ್ಕೋಸ್ಕರ ಈ ಪಂಚಾಯಿತಿಗಳಿಗೆ ಅಧಿಕಾರ ಕೊಟ್ಟಿದ್ದೇವೆ ? ಪಂಚಾಯ್ತಿ ಕ್ಷೇತ್ರದಲ್ಲಿ ಯಾರು ಬಡ ಜನಗಳು ಇದ್ದಾರೆ ಕನಿಷ್ಟವರ್ಗದವರು ಇದ್ದಾರೆ. ದುರ್ಬಲರು ಇದ್ದಾರೆ, ಅಂತಹವರಿಗೆ ಅನುಕೂಲ ಮಾಡಿಕೊಡಿ ಎಂದು ಹೇಳುತ್ತೇವೆ. ಅಂತಹ ಜನರಿಗೆ ಅನುಕೂಲವಾದರೆ ಅದನ್ನು ನೋಡಿ ಸಹಿಸದೇ ಇರತಕ್ಕ ಜನ ನಮ್ಮ ಸಮಾಜದಲ್ಲಿದ್ದಾರೆ. ಅಲ್ಲಿಂದ ಪಂಚಾಯ್ತಿಗೆ ಅಧಿಕಾರ ಕೊಡೋಣ; ಜಿಲ್ಲಾ ಪರಿಷತ್ತಿಗೆ ಅಧಿಕಾರ ಕೊಡೋಣ

ಶ್ರೀ ಜೆ. ಸಿ. ಮಧುಸ್ವಾಮಿ :– ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯ್ತಿಗಳು ಬಂದಮೇಲೆ ಈ ಯೋಜನೆಯಲ್ಲಿ ಎಷ್ಟು ಖರ್ಚಾಗುತ್ತಿದೆ; ಇವು ಜಾರಿಗೆ ಬರುವುದಕ್ಕೆ ಮೊದಲು ಎಷ್ಟು ಖರ್ಚಾಗಿದೆ ಎಂಬುದನ್ನೂ ಹೇಳಿ......

Sri B. Basavalingappa :- Mr. Madhuswamy, you are my young friend and you have come for the first time. you must know the method of discussion on the floor of the House. You may note down wherever I go wrong and you rebut & I am very happy to receive that

ತಾವು ನೇರವಾಗಿ ನನ್ನನ್ನು ಟೀಕೆ ಮಾಡಿ; ನಾನು ತಪ್ಪು ಹೇಳಿದರೆ ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಆದರೆ ನೀವು ಒಂದು ಪುಸ್ತಕ ಇಟ್ಟುಕೊಂಡು, ನಾನು ಹೇಳಿದ ಎಲ್ಲಾ ಅಂಶಗಳನ್ನೂ ಬರೆದುಕೊಳ್ಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಮಾನ್ಯ ಅಧ್ಯಕ್ಷರೇ, ಈಗಾಗಲೇ 6 ಗಂಟೆಯಾಯಿತು, ಇನ್ನೂ ಎಷ್ಟು ಹೊತ್ತು ಕುಳಿತುಕೊಳ್ಳುವುದು, ಬೆಳಿಗ್ಗೆ 9 ಗಂಟೆಗೆ ಬಂದಿದ್ದೇವೆ. ಇದು ಬಹಳ ವಿವರವಾಗಿ ಚರ್ಚೆಯಾಗಬೇಕಾಗಿದೆ. ದಯಮಾಡಿ ತಾವು ಒಂದು ಆದೇಶ ಕೊಡಬೇಕು. ನಾವು ಬೆಳಿಗ್ಗೆ 9 ಗಂಟೆಯಿಂದ ಸತತವಾಗಿ ಕುಳಿತಿದ್ದೇವೆ. ತಾವು ಕುಳಿತುಕೊಳ್ಳಲೇಬೇಕೆಂದು ಹೇಳಿದರೆ ಕುಳಿತುಕೊಳ್ಳೋಣ. ಆದರೆ ಇದಕ್ಕೆ ಒಂದು ಸಮಯ ಗೊತ್ತುಮಾಡಿದರೆ ಒಳ್ಳೆಯದು.

ವೈಸ್ ಚೇರ್ಮನ್ :– ಈಗ ಸಭೆಯನ್ನು ನಾಳೆ 11 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 9 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ 20 ನೇ ಡಿಸೆಂಬರ್ ಮಾ.ಹೆ. 1990ರ ಗುರುವಾರದಂದು ಬೆಳಿಗ್ಗೆ 11–00 ಘಂಟೆಗೆ ಸೇರಲು ನಿಶ್ಚಯಿಸಿತು.)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)